
15-30, ಸೆಪ್ಟೆಂಬರ್ 2011
KARKAN/2007/20389
12-00
ಪ್ರಸ್ತುತ
ಪಾಕ್ಷಿಕ
ಜೈ..ಹೋ..
ಲ

ಸತ್ಯಸುದ್ದಿಯ

# ಪ್ರಸ್ತುತ

ಪಾಕ್ಷಿಕ

PRASTHUTHA KANNADA FORTNIGHTLY

ಸೆಪ್ಟಂಬರ್ 15-30, 2011 ಸಂಪುಟ : 5 ಸಂಚಿಕೆ : 17 ಬೆಲೆ : 12.00 ಪುಟ : 60 ಮಂಗಳೂರು




## ಅಂತರಾಳದಲ್ಲಿ...

>>

ಅಂಕಣಗಳು

ಮೀಟುಗೋಲು 05
ಪ್ರತಿಕ್ರಿಯೆ 04
ರಾಷ್ಟ್ರೀಯ ವಾರ್ತೆ 55
ಅಂತಾರಾಷ್ಟ್ರೀಯ 58
ಮಿನಿಕಥೆ: 20
ಸುದ್ದಿಸಮುಚ್ಚಯ 50
ಇಂಚರ 34
ಇನಿದನಿ 36

ಲೇಖನಗಳು

ಜೈ... ಹೋ... ಸಾಲಿನಲ್ಲಿ ಮೋದಿ 12
ಮಾಧ್ಯಮಗಳ ತಾರತಮ್ಯ 18
ನಾಗರಿಕ ಹಕ್ಕುಗಳಿಗಾಗಿ ಎದ್ದೇಳಿ... 22
ಭ್ರಷ್ಟರ ವಿರುದ್ಧ ಹೋರಾಡಿ ಮಡಿದ.. 29
ಇಸ್ಲಾಮಿನಲ್ಲಿ ಮಹಿಳೆ 36

ವಿಶೇಷ ಲೇಖನ

ಜೈ... ಹೋ... ಭ್ರಷ್ಟರ ಜೈಲು ವಾಸಕ್ಕೆ 08

ಪ್ರಧಾನ ಸಂಪಾದಕರು
ಕೆ.ಎಂ. ಶರೀಫ್

ಸಂಪಾದಕರು
ಫಯಾರ್ಝ್ ಎನ್.

ಸಹ ಸಂಪಾದಕರು
ಶಬೀರ್ ಕೆ.

ಸಂಪಾದಕ ಮಂಡಳಿ:
ಇಲ್ಯಾಸ್ ಮುಹಮ್ಮದ್. ಅಬ್ದುಲ್ ರಝಾಕ್ ಕೆಮ್ಮಾರ.
ಅಸ್ಲಮ್ ಹಸನ್. ಅಬ್ದುಲ್ ಹಮೀದ್ ಕೆ.ವೈ.
ಶಾಹಿದಾ ಎ., ಇಮ್ತಿಯಾಝ್. ಶಾಹಿದಾ ತಸ್ನೀಮ್.

ಗ್ರಾಫಿಕ್ ಡಿಸೈನರ್
ಎಂ. ಶಬೀರ್

ವ್ಯವಸ್ಥಾಪಕರು
ಅಬ್ದುಲ್ ಖಾದರ್ ಪಿ.



ದೇಶದ ಸಂಪತ್ತನ್ನು ಕೊಳ್ಳೆ ಹೊಡೆದಿರುವ ರಾಜಕಾರಣಿಗಳ ಒಬ್ಬೊಬ್ಬರಾಗಿ ಜೈಲು ಸೇರುತ್ತಿದ್ದಾರೆ-8



ಭ್ರಷ್ಟಾಚಾರದ ಕೂಪದಲ್ಲಿ ಮುಳುಗಿರುವ ಗುಜರಾತ್ ಮುಖ್ಯಮಂತ್ರಿಯೂ ಜೈ... ಹೋ... ಸರತಿಯಲ್ಲಿದ್ದಾರೆ -12

PRASTHUTHA
KANNADA FORTNIGHTLY
Media House
10-23-1009(1), Dr.Ansari Road,
Near Yatheem Khana Hall
Bunder, Mangalore-575001
Ph: 0824-2410454 Fax:0824-2410454
e-mail : prasthutha2007@gmail.com




ಮಾಧ್ಯಮಗಳು ಜೆಸ್ಸಿಕಲಾಲ್ ಕೊಲೆ ಪ್ರಕರಣಕ್ಕೆ ನೀಡಿದ ಪ್ರಾಮುಖ್ಯತೆ ಮೀನಾ ಕೊಲೆಗೆ ನೀಡಿಲ್ಲ- 18




ಭ್ರಷ್ಟರ ವಿರುದ್ಧ ಹೋರಾಡಿ ಆರ್‌ಟಿಐ ಕಾರ್ಯಕರ್ತೆ ಸೆಹಲಾ ಹುತಾತ್ಮಳಾಗಿದ್ದಾಳೆ- 29

Edited, Printed and published by K.M. Shareef, 10-23-1009(1) Dr.Ansari Road, Bunder, Mangalore-575001, Owned by Sthuthi Publications & Information Trust, 10-23-1009(1) Dr.Ansari Road, Bunder, Mangalore-575001, Tel: 0824-2410454, Email- prasthutha2007@gmail.com Printed at Maadhyama communication Ltd, 127, Industrial Area, Bykampady, Mangalore-11.

## ಲೇಖನದ ಕುರಿತ ಗಂಭೀರ ಆಕ್ಷೇಪಣೆ

ನಿಮ್ಮ 'ಪ್ರಸ್ತುತ' ಪತ್ರಿಕೆಯನ್ನು ನಾವು ನಿರಂತರವಾಗಿ ಗಮನಿಸುತ್ತೇವೆ. ಸಾಮಾಜಿಕ ಕಾರ್ಯಕರ್ತರಾದ ನಾವುಗಳು ಅದರಲ್ಲಿನ ಸಾಮಾಜಿಕ ಕಳಕಳಿಯ ಲೇಖನಗಳನ್ನು ಓದಿ ಸಂತಸ ಪಟ್ಟಿದ್ದೇವೆ. ಆದರೆ ಕಳೆದ ಸಂಚಿಕೆಯಲ್ಲಿ ಬಂದ 'ಪತಿಯ ಕುರಿತಾದ ಪತ್ನಿಯ ಕರ್ತವ್ಯಗಳು' ಲೇಖನವನ್ನು ನೋಡಿ ಗಾಬರಿಯಾಯಿತು. ಪುರುಷ ಕೇಂದ್ರಿತ ಸಮಾಜವೊಂದರಲ್ಲಿ ಯಾವ ರೀತಿ ಮಹಿಳಾ ಸ್ವಾತಂತ್ರ್ಯದ ಪರವಾಗಿ ಪ್ರಜಾತಾಂತ್ರಿಕ ನಿಲುವುಗಳುಳ್ಳ ಪತ್ರಿಕೆಯೊಂದು ಲೇಖನವನ್ನು ಪ್ರಕಟಿಸಬೇಕು ಎಂಬುದು ಪಕ್ಕಕ್ಕೇ ಇಡೋಣ. ಆದರೆ ಪಕ್ಕಾ ಮಹಿಳಾ ವಿರೋಧಿಯಾದ, ಸಂಪೂರ್ಣ ಜೀವ ವಿರೋಧಿಯಾದ ಲೇಖನವನ್ನು ಪ್ರಕಟಿಸಿದ್ದೀರಿ......

ವಾಸು ಎಚ್.ವಿ., ಗೌರಿ (ಕರ್ನಾಟಕ ಜನಶಕ್ತಿ), ಮಲ್ಲಿಗೆ (ಸಮಾನತಾ ಮಹಿಳಾ ವೇದಿಕೆ)

## ಸ್ಪಷ್ಟೀಕರಣ

ಪ್ರಸ್ತುತ ಪಾಕ್ಷಿಕದ ಸೆಪ್ಟೆಂಬರ್ 1-15ರ ಸಂಚಿಕೆಯಲ್ಲಿ ಅಸ್ಮಾ ಝುಕರಿಯಾ ಎಂಬವರು ಬರೆದಿರುವ 'ಪತಿಯ ಮೇಲೆ ಪತ್ನಿಯ ಕರ್ತವ್ಯ' ಲೇಖನದ ಕುರಿತು ತಾವು ಆಕ್ಷೇಪಣಾ ಪತ್ರವನ್ನು ಬರೆದಿದ್ದೀರಿ. ಒಂದು ಪತ್ರಿಕೆಯ ಆರೋಗ್ಯವನ್ನು ಕಾಪಾಡುವಲ್ಲಿ ಅಗತ್ಯವಿರುವಂತಹ ಪತ್ರವನ್ನು ಬರೆದಿರುವುದಕ್ಕೆ ತಮಗೆ ಕೃತಜ್ಞತೆಗಳನ್ನು ಸಲ್ಲಿಸುತ್ತಲೇ ಈ ಕುರಿತು ಸ್ಪಷ್ಟೀಕರಣವನ್ನು ನೀಡುತ್ತಿದ್ದೇನೆ.

ಪ್ರಸ್ತುತ ಪತ್ರಿಕೆಯು ಸುದ್ದಿಯ ವಸ್ತುನಿಷ್ಠ ವಿಶ್ಲೇಷಣೆ ನಡೆಸುವುದರೊಂದಿಗೆ ಸಮಾಜವನ್ನು ಜಾಗೃತಗೊಳಿಸುವಂತಹ ಲೇಖನವನ್ನು ಪ್ರಕಟಿಸುತ್ತಲೇ ಬಂದಿದೆ. ಮಾನವ ಹಕ್ಕುಗಳ ಕುರಿತ ನಮ್ಮ ಅಕ್ಷರ ಹೋರಾಟದಲ್ಲಿ ನಾವು ರಾಜಿರಹಿತವಾದ ನಿಲುವನ್ನು ಹೊಂದಿದ್ದೇವೆ. ಇದೇ ಸಂದರ್ಭದಲ್ಲಿ ಕೆಲವು ಉದಯೋನ್ಮುಖ ಬರಹಗಾರರಿಗೂ ಪತ್ರಿಕೆ ವೇದಿಕೆ ಕಲ್ಪಿಸಿದೆ.

ತಾವು ಗಂಭೀರ ಆಕ್ಷೇಪಣೆ ಪತ್ರ ಬರೆದಿರುವ ಸದರಿ ಲೇಖನವು ಹೊಸ ಬರಹಗಾರ್ತಿಯೊಬ್ಬರ ಲೇಖನವಾಗಿದ್ದು, ಇದೇ ಮೊದಲ ಬಾರಿಗೆ ಅವರ ಲೇಖನ ಪ್ರಕಟವಾಗಿರುತ್ತದೆ. ಲೇಖನದಲ್ಲಿ ಇರುವ ಗಂಭೀರ ಆಕ್ಷೇಪಾರ್ಹ ವಾಕ್ಯಗಳು ನಿರ್ದಾಕ್ಷಿಣ್ಯವಾಗಿ ಕತ್ತರಿಪ್ರಯೋಗಕ್ಕೊಳಗಾಗಬೇಕಿದ್ದರೂ ಕಣ್ತಪ್ಪಿನಿಂದಾಗಿ ದುರದೃಷ್ಟವಶಾತ್ ಮುದ್ರಣವಾಗಿರುತ್ತದೆ. ಇದಕ್ಕಾಗಿ ಸಂಪಾದಕೀಯ ಮಂಡಳಿಯ ಪರವಾಗಿ ಈ ಮೂಲಕ ವಿಷಾದ ವ್ಯಕ್ತಪಡಿಸುತ್ತಿದ್ದೇನೆ.

ಈ ಸ್ಪಷ್ಟೀಕರಣವು ತಮ್ಮ ಹೊಣೆಗಾರಿಕೆಯಿಂದ ಜಾರಿಕೊಳ್ಳುವ ಪ್ರಯತ್ನವಾಗಲೀ, ತಮ್ಮ ಗಂಭೀರ ಆಕ್ಷೇಪಣೆಯ ಪತ್ರಕ್ಕೆ ಉತ್ತರಿಸಬೇಕಾದ ಅನಿವಾರ್ಯತೆಗೊಳಗಾಗಿ ಪ್ರಕಟಿಸಿರುವಂಥದ್ದಲ್ಲ. ಬದಲಾಗಿ ಇದು ಪ್ರಸ್ತುತ ಪತ್ರಿಕೆಯು ತನ್ನ ಮೂಲಧ್ಯೇಯ ನಿಲುವಿನಿಂದ ಎಂದಿಗೂ ವ್ಯತಿಚಲಿಸದೆ ಸ್ಥಿರವಾಗಿ ನಿಲ್ಲಲು ಬದ್ಧವಾಗಿದೆ ಎಂಬುದನ್ನು ಖಾತರಿಪಡಿಸುವುದಕ್ಕಾಗಿದೆ.

ಸದರಿ ಲೇಖನದಲ್ಲಿ ಅಥವಾ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು ಪ್ರಸ್ತುತದ ನಿಲುವುಗಳನ್ನು ಅಥವಾ ನಿರ್ದಿಷ್ಟ ಸಂಘಟನೆಯ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ ಎಂಬುದನ್ನು ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇವೆ. ಅದೇ ರೀತಿ ಪತ್ರಿಕೆಯ ನಿಲುವು, ಸಿದ್ಧಾಂತವನ್ನು ಪತ್ರಿಕೆಯ ಸಂಪಾದಕೀಯ (ಮೀಟುಗೋಲು) ಪ್ರಾಮಾಣಿಕವಾಗಿ ನಿಸ್ಸಂಶಯವಾಗಿ ಪ್ರತಿನಿಧಿಸುತ್ತದೆ.

ಪತ್ರಿಕೆಯ ಸಹಜ ಅಥವಾ ಅಸಹಜ ಎಡವಟ್ಟುಗಳನ್ನು ನಮ್ಮ ಗಮನಕ್ಕೆ ತರುವಂತಹ, ವಿಮರ್ಶಿಸುವಂತಹ ಅಭಿಮಾನಿ ಓದುಗ ವೃಂದಕ್ಕೆ ಪತ್ರಿಕೆಯು ಸದಾ ಚಿರಋಣಿಯಾಗಿರುತ್ತದೆ.

- ಸಂಪಾದಕ




## ಹೋರಾಟದ ಸ್ಫೂರ್ತಿ ತುಂಬಿದ ಲೇಖನ

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಸಂಘರ್ಷದ ಮಧ್ಯೆ ಈದ್ ಸಂಭ್ರಮ' ಲೇಖನವು ಪ್ರತಿಯೊಬ್ಬರಲ್ಲೂ ಹೋರಾಟ ಮನೋಭಾವನೆಯನ್ನು ಮೂಡಿಸುವಂತಿತ್ತು.

ಭ್ರಷ್ಟಾಚಾರ, ದಮನಕಾರಿ ನೀತಿಗಳ ಮೂಲಕ ಜನರ ಸಂತೋಷ ಸಂಭ್ರಮಾಚರಣೆಯನ್ನು ಇಲ್ಲಿನ ಪ್ರಭುತ್ವವು ಸಂಪೂರ್ಣವಾಗಿ ಕಸಿದುಕೊಂಡಿದೆ. ಇಲ್ಲಿನ ಪ್ರಭುತ್ವದಿಂದ ಜನರು ಅನ್ಯಾಯ, ಅಕ್ರಮವನ್ನಲ್ಲದೇ ಮತ್ತೇನನ್ನೂ ನಿರೀಕ್ಷಿಸಲು ಸಾಧ್ಯವಿಲ್ಲ. ಇದು ಈಗಾಗಲೇ ಬಹಿರಂಗಗೊಂಡಿರುವ ಸತ್ಯವಾಗಿದೆ.

ಆದರೂ ನಮ್ಮ ಹಕ್ಕಗಳನ್ನು ಪಡೆಯಲು, ಅನ್ಯಾಯ, ಅನೀತಿಯ ವಿರುದ್ಧ ಹೋರಾಡಲು ಈ ಲೇಖನವು ಜನರಲ್ಲಿ ಸ್ಫೂರ್ತಿ ತುಂಬಿದೆ.

ಮುಹ್ಸಿನ್, ಉಡುಪಿ

—— ಸಂಪಾದಕೀಯ ——

# ಭಯೋತ್ಪಾದನೆ ನಿಗ್ರಹ ಪೂರ್ವಾಗ್ರಹ ಪೀಡಿತವಾಗದಿರಲಿ

2011ರ ಸೆಪ್ಟೆಂಬರ್ 7ರಂದು ದೆಹಲಿ ಹೈಕೋರ್ಟು ಆವರಣದಲ್ಲಿ ನಡೆದ ಬಾಂಬು ಸ್ಫೋಟ ಮತ್ತು ಈ ಹೊತ್ತಿನಲ್ಲಿ ದೇಶಾದ್ಯಂತ ನಡೆಯುತ್ತಿರುವ ವಿದ್ಯಮಾನಗಳು ಹಲವು ಸಂಶಯಗಳಿಗೆ ಎಡೆಮಾಡಿಕೊಡುತ್ತಿವೆ. ಬಾಂಬು ದಾಳಿಯ ಜೊತೆ ಜೊತೆಯಲ್ಲೇ ಇ-ಮೇಲ್ ದಾಳಿಗಳೂ ಕೂಡ ಇನ್ನಷ್ಟು ಸಂಶಯಗಳನ್ನು ಹುಟ್ಟುಹಾಕಿವೆ. ಅಫ್ಝಲ್ ಗುರುವಿನ ಮರಣದಂಡನೆ ಶಿಕ್ಷೆಯನ್ನು ಜೀವಾವಧಿ ಶಿಕ್ಷೆಗೆ ಇಳಿಸುವಂತೆ ಆಗ್ರಹಿಸಿ ಈ ಕೃತ್ಯ ಎಸಗಲಾಗಿದೆ ಎಂದೂ, ಇಂಡಿಯನ್ ಮುಜಾಹಿದೀನ್ ಸಂಘಟನೆ ಈ ಕೃತ್ಯವೆಸಗಿರುವುದಾಗಿಯೂ ವದಂತಿಗಳು ದಟ್ಟವಾಗಿ ಹಬ್ಬಿವೆ.

ದೇಶದಲ್ಲಿ ಬಾಂಬು ಸ್ಫೋಟ ನಡೆದಿರುವುದು ಇದೇ ಮೊದಲೇನಲ್ಲ. ಬಾಂಬು ಸ್ಫೋಟ ನಡೆದಾಗಲೆಲ್ಲಾ ಯಾವ್ಯಾವ ಸಂಘಟನೆಗಳ ಹೆಸರು ಕೇಳಿ ಬರುತ್ತಿತ್ತೋ, ತನಿಖೆಯ ಜಾಡು ಯಾವ ಹಾದಿಯಲ್ಲಿ ಸಾಗುತ್ತಿತ್ತೋ ಅದೇ ರೀತಿಯ ಕ್ರಮಗಳು ಈ ಬಾರಿಯೂ ಪುನರಾವರ್ತನೆಯಾಗಿದೆ. ಮಾಧ್ಯಮಗಳ ಅತಿರಂಜಿತ, ಪೂರ್ವನಿರ್ಧರಿತ ವರದಿಗಳು ಸ್ಫೋಟದ ನಂತರ ಮುದ್ರಿಸಲ್ಪಟ್ಟಿವೆ.

ದೇಶದಲ್ಲಿ ಸ್ಫೋಟ ಕೃತ್ಯ ನಡೆದಾಗ ಪೊಲೀಸರು ನಡೆಸುವ ತನಿಖೆ, ಕಾರ್ಯಾಚರಣೆಯಾಗಲೀ, ಮುಂಜಾಗ್ರತಾ ಕ್ರಮವಾಗಲೀ ಭಯೋತ್ಪಾದಕರ ಅಟ್ಟಹಾಸಕ್ಕೆ ಕಡಿವಾಣ ಹಾಕುವಲ್ಲಿ ಯಶಸ್ವಿಯಾಗಿಲ್ಲ. ಮಾತ್ರವಲ್ಲ, ಈ ಎಲ್ಲ ಸ್ಫೋಟಗಳು ನಡೆಯುವ ಹೊತ್ತಿಗೆ ದೇಶದಲ್ಲಿ ಯಾವುದಾದರೂ ರಾಜಕೀಯ ವಿಚಾರವು ಸಾಕಷ್ಟು ಸುದ್ದಿಯಲ್ಲಿರುವುದನ್ನು ಗಮನಿಸಬಹುದು. ಈ ಬಾರಿಯೂ ಅಷ್ಟೇ, ಜನಲೋಕಪಾಲ್ ಮಸೂದೆ ಕುರಿತಂತೆ ದೇಶಾದ್ಯಂತ ಸಾಕಷ್ಟು ಚರ್ಚೆ, ವಿವಾದಗಳು ನಡೆಯುತ್ತಿವೆ. ವಿಶೇಷವಾಗಿ ಕೋಮುಸೌಹಾರ್ದ ಮಸೂದೆಯೊಂದು ಜಾರಿಯಾಗಬೇಕಾಗಿದ್ದ ಹೊತ್ತಿನಲ್ಲೇ ಸ್ಫೋಟದಂತಹ ಜನರ ದೃಷ್ಟಿಯನ್ನು ಬೇರೆಡೆ ತಿರುಗಿಸುವ ಕೃತ್ಯವು ನಡೆದಿರುವುದು ಕೂಡ ಸಂಶಯಾಸ್ಪದ.

ಸ್ಫೋಟ ಸಂಭವಿಸಿದಾಗ ಈಗಾಗಲೇ ಚಾಲ್ತಿಯಲ್ಲಿರುವ ಸ್ಥಾಪಿತ ಮನೋಭಾವವನ್ನು ಬಿಟ್ಟು, ಅದರ ನೈಜ ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸ್ ಇಲಾಖೆಯು ಪ್ರಾಮಾಣಿಕ ಕ್ರಮಗಳನ್ನು ಅನುಸರಿಸಿದರೆ ಮಾತ್ರ ಇನ್ನಷ್ಟು ಸಂಭಾವ್ಯ ದಾಳಿಯನ್ನು ತಪ್ಪಿಸಬಹುದು. ಈಗಾಗಲೇ ಹಿಂದುತ್ವ ಭಯೋತ್ಪಾದನೆಯ ಜಾಡು ಹಿಡಿದು ಹುತಾತ್ಮರಾದ ಹೇಮಂತ್ ಕರ್ಕರೆ ಅದನ್ನು ನಿರೂಪಿಸಿದ್ದಾರೆ.

ಮಾಲೆಗಾಂವ್ ಸ್ಫೋಟ, ಮಡ್ಗಾಂವ್ ಸ್ಫೋಟ, ಮಕ್ಕಾ ಮಸೀದಿ ಸ್ಫೋಟ, ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟ, ನಾಂದೇಡ್ ಸ್ಫೋಟ, ಹುಬ್ಬಳ್ಳಿ ಕೋರ್ಟು ಆವರಣ ಸ್ಫೋಟ ನಡೆಸಿದವರಿಗೆ ದೆಹಲಿ ಹೈಕೋರ್ಟ್‌ನಲ್ಲಿಯೂ ಅಂಥದ್ದೊಂದು ಸ್ಫೋಟ ನಡೆಸುವುದು ದೊಡ್ಡ ಕಷ್ಟದ ಸಂಗತಿಯೇನಲ್ಲ. ಅಭಿನವ್ ಭಾರತ್, ಸನಾತನ ಸಂಸ್ಥೆಯಂತಹ ಹಿಂದುತ್ವವಾದಿ ಭಯೋತ್ಪಾದಕ ಸಂಘಟನೆಗಳು ಈ ದೇಶದಲ್ಲಿ ನಡೆಸಿರುವ ಬಾಂಬು ಸ್ಫೋಟಗಳ ಒಂದೊಂದೇ ವಿಚಾರಗಳು ಬಹಿರಂಗಗೊಳ್ಳುತ್ತಿವೆ. ದಕ್ಷ ಅಧಿಕಾರಿ ಕರ್ಕರೆಯ ತನಿಖೆಯಿಂದಾಗಿ ದೇಶದಲ್ಲಿ ಸ್ಫೋಟ ಕೃತ್ಯಗಳು ಗಣನೀಯವಾಗಿ ಕಡಿಮೆಯಾದದ್ದನ್ನು ಕೂಡ ನಾವಿಲ್ಲಿ ಗಮನಿಸಬೇಕಾಗಿದೆ.

ದೆಹಲಿ ಹೈಕೋರ್ಟು ಆವರಣದಲ್ಲಿ ನಡೆದ ಬಾಂಬು ಸ್ಫೋಟವು 12 ಮಂದಿಯನ್ನು ಬಲಿತೆಗೆದುಕೊಂಡಿದ್ದು, ಬಲಿಯಾದವರೆಲ್ಲ ಅಮಾಯಕರೇ ಆಗಿರುತ್ತಾರೆ. ಅಮಾಯಕರನ್ನು ಬಲಿತೆಗೆದುಕೊಳ್ಳುವ ಇಂತಹ ಕೃತ್ಯಗಳನ್ನು ರಾಜಕೀಯಕ್ಕೋ, ಧರ್ಮಾಂಧತೆಗೋ ಬಳಸಿಕೊಳ್ಳುವಂತಹ ಅಪಾಯಕಾರಿ ಪ್ರಕ್ರಿಯೆಯು ದೇಶದಲ್ಲಿ ನಡೆಯುತ್ತಿದೆ. ಇದರ ಪರಿಣಾಮವಾಗಿಯೇ ಸ್ಫೋಟದ ಆರೋಪಿಗಳು ಶಿಕ್ಷೆಯಿಂದ ಪಾರಾಗಿ, ಅಮಾಯಕರೇ ಶಿಕ್ಷೆ ಎದುರಿಸುವಂತಾಗುತ್ತಿದೆ. ಬಾಂಬು ಸ್ಫೋಟದಿಂದಾಗಿ ಜೀವ ಕಳೆದುಕೊಳ್ಳುವವರೂ ಅಮಾಯಕರು ಮತ್ತು ಸ್ಫೋಟದ ಹೆಸರಿನಲ್ಲಿ ಅಕ್ರಮ ಬಂಧನಕ್ಕೊಳಗಾಗಿ ಜೀವನ ಕಳೆದುಕೊಳ್ಳುವವರೂ ಅಮಾಯಕರು.

ದೇಶದಲ್ಲಿ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ಮಟ್ಟಹಾಕಬೇಕು ಎಂಬುದು ಕೇವಲ ರಾಜಕೀಯ ಪ್ರೇರಿತ ಭರವಸೆಯ ಮಾತುಗಳಾಗಿ ಉಳಿಯದೆ ಆ ನಿಟ್ಟಿನಲ್ಲಿ ಪ್ರಾಮಾಣಿಕ ಮತ್ತು ದಿಟ್ಟ ಹೆಜ್ಜೆ ಇರಿಸಬೇಕಾಗಿರುವುದು ಕೇಂದ್ರ ಸರಕಾರದ ಹೊಣೆಗಾರಿಕೆಯಾಗಿದೆ.

## ಮಾಧ್ಯಮಗಳ ದ್ವಿಮುಖ ನೀತಿ

ಪ್ರಸ್ತುತ ದೇಶದಲ್ಲಿ ಅಣ್ಣಾಹಜಾರೆ ಉತ್ತುಂಗಲ್ಲಿದ್ದಾರೆ. ಅವರು ಮಾಡಿದ ಹೋರಾಟಕ್ಕಿಂತಲೂ ಹೆಚ್ಚು ಇಲ್ಲಿನ ಮಾಧ್ಯಮಗಳು ಅವರನ್ನು ಈ ಹಂತಕ್ಕೆ ತಂದು ನಿಲ್ಲಿಸಿವೆ ಎಂದರೂ ತಪ್ಪಾಗಲಾರದು.

ಭ್ರಷ್ಟಾಚಾರದ ವಿರುದ್ಧ ಹೋರಾಟ ಎಂದು ಅಣ್ಣಾರವರು ಯಾವಾಗ ಜಂತರ್ ಮಂತರ್‌ನಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದರೋ ಅಂದಿನಿಂದ ಇಂದಿನ ವರೆಗೆ ಅವರ ದಿನಚರಿಯನ್ನು ಮಾಧ್ಯಮಗಳು ಪ್ರಕಟಿಸುತ್ತಲೇ ಇದೆ. ಆದರೆ ಅಣ್ಣಾರವರ ಹೋರಾಟವೂ ಪ್ರಶ್ನಾತೀತವಲ್ಲ ಎಂಬ ವಿಷಯವೂ ಕೂಡ ಚರ್ಚೆಯಲ್ಲಿವೆ. ಅಣ್ಣಾರ ತಂಡದಲ್ಲಿಯೇ ಭ್ರಷ್ಟಾಚಾರಿಗಳು, ಕೇಸರಿ ಪಡೆಗಳು ಸೇರಿಕೊಂಡಿದ್ದಾರೆ. ಇದರಿಂದಾಗಿ ಅಣ್ಣಾರ ಈ ಹೋರಾಟ ಎಲ್ಲಿಯವರೆಗೆ ಮುಂದುವರಿಯಬಹುದು ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟಸಾಧ್ಯ.

ಕಳೆದ ಒಂದು ದಶಕದ ಹಿಂದೆ ಇರೋಮ್ ಶರ್ಮಿಳಾ ಎಂಬ ಸಾಮಾಜಿಕ ಹೋರಾಟಗಾರ್ತಿ ಮಣಿಪುರದಲ್ಲಿ ಸಶಸ್ತ್ರ ಪಡೆಗಳ ವಿಶೇಷಾಧಿಕಾರವನ್ನು ಹಿಂದೆಗೆಯ ಬೇಕೆಂದು ಉಪವಾಸ ಸತ್ಯಾಗ್ರಹವನ್ನು ನಡೆಸುತ್ತಲೇ ಇದ್ದಾರೆ. ಆದರೆ ಈ ಹೋರಾಟವು ಪ್ರಾರಂಭವಾಗಿ ಒಂದು ದಶಕ ಕಳೆದರೂ ಆಕೆ ಇನ್ನೂ ಪ್ರಚಾರಕ್ಕೆ ಬಂದಿಲ್ಲ. ಅದಕ್ಕೆ ಕಾರಣ ಮಾಧ್ಯಮಗಳು. ಇರೋಮ್ ಶರ್ಮಿಳಾರ ಹೋರಾಟ ಮತ್ತು ಅದರ ಪ್ರಾಮುಖ್ಯತೆ ಬಗ್ಗೆ ಮಾಧ್ಯಮಗಳು ತೋರಿದ ನಿರ್ಲಕ್ಷ್ಯದಿಂದಾಗಿ ಆಕೆಯ ಹೋರಾಟ ತೆರೆಮರೆಯಲ್ಲೇ ಸಾಗುತ್ತಿರುವುದು ವಿಷಾದದ ಸಂಗತಿಯಾಗಿದೆ.

ರಾಯನ್ ಫೆರ್ನಾಂಡಿಸ್, ಪಕ್ಷಿಕೆರೆ

## ಸೊಮಾಲಿಯಾಗೆ ನೆರವು ಅಗತ್ಯ

''ಸೊಮಾಲಿಯಾ: ಹಸಿವಿನ ಸಾಮ್ರಾಜ್ಯ'' ಎಂಬ ಲೇಖನವು ಎಂತಹ ಕಲ್ಲು ಹೃದಯವನ್ನೂ ಕರಗಿಸಬಲ್ಲುದು. ಒಪ್ಪೊತ್ತಿನ ಊಟಕ್ಕೂ ಪರದಾಡಬೇಕಾದಂತಹ ಪರಿಸ್ಥಿತಿ ಅಲ್ಲಿನ ನಾಗರಿಕರದ್ದಾಗಿದೆ. ಹಸಿವಿನ ಭೀಕರತೆಯನ್ನು ತೋರಿಸುವ ದೃಶ್ಯಗಳು ಮನಕಲಕುವಂತಿವೆ.

ಆದರೂ ವಿಶ್ವಸಂಸ್ಥೆ ಹಾಗೂ ಸೇವಾ ಸಂಘಟನೆಗಳು ನಿರಾಶ್ರಿತರ ಶಿಬಿರಗಳಿಗೆ ತೆರಳಿ ಅವರ ಸೇವೆಗೈಯ್ಯುತ್ತಿರುವುದು ತುಸು ನೆಮ್ಮದಿ ತಂದಿದೆ. ಅಮೆರಿಕಾದ ವಸಾಹತು ಶಾಹಿ ನೀತಿಗೆ ಸೊಮಾಲಿಯಾದ ನಾಗರಿಕರು ಬಲಿಯಾಗುತ್ತಿದ್ದಾರೆ ಎಂಬುವುದು ಸ್ಪಷ್ಟ. ಆದರೆ ಹಸಿವಿನಿಂದ ಕಂಗಾಲಾಗಿರುವ ಸೊಮಾಲಿಯಕ್ಕೆ ಕೆಲವೊಂದು ರಾಷ್ಟ್ರಗಳು ಈ ಸ್ನೇಹ ಹಸ್ತ ಚಾಚುತ್ತಿದ್ದರೂ ಮಾನವೀಯತೆಯ ಪ್ರತಿಬಿಂಬ ಎಂದು ಕರೆಯಲ್ಪಡುವ ಭಾರತ ಮಾತ್ರ ಯಾವುದೇ ನೆರವು ನೀಡದಿರುವುದು ವಿಷಾದನೀಯ.




ಹಸಿವಿನಿಂದ ಕಂಗಾಲಾಗಿರುವ ಸೊಮಾಲಿಯಕ್ಕೆ ನೆರವಿನ ಹಸ್ತ ಚಾಚುವುದರೊಂದಿಗೆ ಭಾರತ ಸರಕಾರವು ಅರಾಜಕತೆ ತಾಂಡವಾಡುತ್ತಿರುವ ಸೊಮಾಲಿಯಾದಲ್ಲಿ ಬಲಿಷ್ಠ ಪ್ರಜಾಪ್ರಭುತ್ವ ಸರಕಾರವನ್ನು ರಚಿಸಲು ಮುಂದಡಿ ಇಡಬೇಕಾಗಿದೆ.

ಝುರೀನಾ, ಕಾಟಿಪಳ್ಳ

## ಮಾಧ್ಯಮಗಳ ಕುರುಡು ನೀತಿ

ಮಾಧ್ಯಮಗಳ ಕುರುಡು ನೀತಿ ಮತ್ತೊಮ್ಮೆ ಬಯಲಾಗಿದೆ. ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಪ್ರಚಾರ ವಂಚಿತ ವಿಚಾರಗಳು' ಎಂಬ ಲೇಖನವು ಮಾಧ್ಯಮಗಳು ಬಚ್ಚಿಟ್ಟಿದ್ದ ಮಾನವೀಯತೆಯನ್ನು ಸಾರುವ ವಿಚಾರವೊಂದನ್ನು ಜನರ ತೆರೆದಿಟ್ಟಿದೆ.

ಜಗತ್ತಿನಲ್ಲಿ ಇಸ್ಲಾಮಿನ ಬಗೆಗೆ ಅಪಪ್ರಚಾರವನ್ನು ನಡೆಸುತ್ತಿರುವ ಮಾಧ್ಯಮಗಳಿಗೆ ಇರಾನ್‌ನ ಆಮೀನಾ ಬೆಹ್ರಾಮಿ ಎಂಬಾಕೆಯು ತೋರಿದ ಮಾನವೀಯತೆಯನ್ನು ಪ್ರಕಟಿಸುವ ಕನಿಷ್ಠ ಕಾಳಜಿಯನ್ನೂ ತೋರಿಲ್ಲ. ಇಸ್ಲಾಮ್ ಭಯೋತ್ಪಾದನೆಯನ್ನು ಪ್ರೋತ್ಸಾಹಿಸುತ್ತದೆ, ಅದು ಅಮಾನವೀಯತೆಯಿಂದ ಕೂಡಿದೆ ಎಂದು ಅಪಪ್ರಚಾರ ನಡೆಸುವ ಮಾಧ್ಯಮಗಳು, ಆ್ಯಸಿಡ್ ಎರಚಿ ತನ್ನ ಅಮೂಲ್ಯವಾದ ಜೀವನಕ್ಕೆ ಕೊಡಲಿ ಏಟು ನೀಡಿದವನೊಬ್ಬನಿಗೆ ಕ್ಷಮೆ ತೋರಿದ ಇಸ್ಲಾಮ್ ತೋರಿದ ಮಾನವೀಯ ಮೌಲ್ಯಗಳನ್ನು ಸಾರುವ ಸಂಗತಿಯನ್ನು ಜಗತ್ತಿನೆದುರು ತೋರ್ಪಡಿಸದೇ ಬಚ್ಚಿಡುತ್ತಿವೆ.

ಪೂರ್ವಗ್ರಹ ಪೀಡಿತ ಮಾಧ್ಯಮಗಳ ತುತ್ತೂರಿಗೆ ಪ್ರಜ್ಞಾವಂತರು ಯಾವತ್ತೂ ತಲೆದೂಗಬಾರದು. ಸತ್ಯಶೋಧನೆಯ ಮೂಲಕ ಸತ್ಯಸಂಗತಿಯನ್ನು ಅರಿಯಬೇಕಾಗಿದೆ.

ಶೌಕತ್ ಅಲಿ ಎಸ್.

ಓದುಗರು, ಬರಹಗಾರರು ತಮ್ಮ ಅಭಿಪ್ರಾಯ, ಲೇಖನಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿರಿ. ಕಚೇರಿ ವಿಳಾಸ ಇಂತಿದೆ.

ಪ್ರಸ್ತುತ ಪಾಕ್ಷಿಕ
ಡಿ.ನಂ.10-23-1009(1)
ಮೀಡಿಯಾ ಹೌಸ್, ಡಾ.ಅನ್ಸಾರಿ ರಸ್ತೆ
ಯತೀಮ್ ಖಾನಾ ಹಾಲ್ ಬಳಿ, ಬಂದರ್
ಮಂಗಳೂರು-1
ಈ ಮೇಲ್ ವಿಳಾಸ:
prasthutha2007@gmail.com

## ಅಣ್ಣಾರ ಚಿಂತನೆ ಬದಲಾಗಲಿ

ಜನಲೋಕಪಾಲ್ ಮಸೂದೆಯನ್ನು ಜಾರಿಗೊಳಿಸಬೇಕೆಂದು ಅಣ್ಣಾ ಹಝಾರೆ ತಂಡ ಆಗ್ರಹಿಸುತ್ತಿದೆ. ಭ್ರಷ್ಟಾಚಾರವನ್ನು ಈ ದೇಶದಿಂದ ನಿರ್ಮೂಲನೆ ಮಾಡಬೇಕಾಗಿರುವುದು ಅತೀ ಅಗತ್ಯ. ಆದರೆ ಈ ಜನಲೋಕಪಾಲ್ ಮಸೂದೆಯನ್ನು ಜಾರಿಗೊಳಿಸಿದ ಮಾತ್ರಕ್ಕೆ ಭ್ರಷ್ಟಾಚಾರವನ್ನು ನಿಯಂತ್ರಿಸಬಹುದು ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

ಈಗ ಅಣ್ಣಾ ಹಝಾರೆ ಪ್ರಧಾನಿಯನ್ನು ಕೂಡ ಜನಲೋಕಪಾಲ್ ವ್ಯಾಪ್ತಿಗೆ ತರಬೇಕು ಎಂದು ಪಟ್ಟು ಹಿಡಿದಿದ್ದಾರೆ. ಆದರೆ ಈ ಮಸೂದೆಯು ಪ್ರಜಾತಂತ್ರವನ್ನು ಯಾವಾಗಬೇಕಾದರೂ ಉರುಳಿಸಬಹುದು. ಆದುದರಿಂದ ಇಲ್ಲಿ ಜನರಿಂದ ಚುನಾಯಿತ ಪ್ರತಿನಿಧಿಗಳಿಗೆ ಯಾವುದೇ ಮನ್ನಣೆ ಸಿಗಲಾರದು. ಇದು ಪ್ರಜಾಪ್ರಭುತ್ವ ವಿರೋಧಿಯಾಗಿದೆ.

ಆದುದರಿಂದ ಅಣ್ಣಾ ಹಝಾರೆಯವರು ಸಂವಿಧಾನ ವಿರೋಧಿ ಮಸೂದೆಯನ್ನು ಜಾರಿತರಲು ಪ್ರಯತ್ನಿಸುವ ಬದಲು ಭ್ರಷ್ಟ ಜನಪ್ರತಿನಿಧಿಗಳಿಗೆ ಚುನಾವಣೆಯಲ್ಲಿ ಸ್ಪರ್ಧಿಸದಂತೆ, ಭ್ರಷ್ಟಾಚಾರದ ಆರೋಪ ಹೊತ್ತಿರುವ ಅಧಿಕಾರಿಗಳಿನ್ನು ಅಮಾನತ್ತಿನಲ್ಲಿಡುವಂತೆ ಮಾಡುವ ಕಾನೂನುಗಳನ್ನು ಜಾರಿಗೆ ತರಲು ಪ್ರಯತ್ನಿಸಲಿ. ಬಹುಶಃ ಇದು ಭ್ರಷ್ಟಾಚಾರ ನಿರ್ಮೂಲನೆಗೆ ಸಹಕಾರಿಯಾಗಬಹುದು.

ರಾಜೇಶ್, ಉಡುಪಿ

## ವಿಚಾರಣೆ ತ್ವರಿತಗತಿಯಲ್ಲಿ ನಡೆಯಲಿ

ದೇಶದ ಸಂಪತ್ತನ್ನು ದರೋಡೆಗೈದವರು ಸರತಿಸಾಲಿನಲ್ಲಿ ಜೈಲಿಗೆ ಅಟ್ಟಲ್ಪಡುತ್ತಿದ್ದಾರೆ. ಇದುವರೆಗೆ ತಾವು ಅಂದದ್ದೇ ಕಾನೂನು ಎಂದು ಪ್ರತಿಷ್ಠೆಯಿಂದ ಬೀಗುತ್ತಿದ್ದವರು ಜೈಲಿನಲ್ಲಿ ಕಂಬಿ ಎಣಿಸುವಂತಹ ಪರಿಸ್ಥಿತಿಯಲ್ಲಿ ಇದ್ದಾರೆ.

ದೇಶದ ಸಂಪತ್ತು ಸಮಾನ ಹಂಚಿಕೆಯಾಗುವ ಬದಲು ಕಂಡವವರ ಸೊತ್ತಾಗಿತ್ತು. ಇದೀಗ ಭ್ರಷ್ಟಾಚಾರ ನಡೆಸಿದ ದರೋಡೆಕೋರರು ಜೈಲು ಪಾಲಾಗುತ್ತಿದ್ದಾರೆ. ಇನ್ನು ಹಲವರು ಸರತಿಯಲ್ಲಿ ನಿಂತಿದ್ದಾರೆ. ಇದು ದೇಶದ ಜನತೆಗೆ ಸಂತಸದ ಸುದ್ದಿ. ಮಾತ್ರವಲ್ಲ ಇದು ಭ್ರಷ್ಟಾಚಾರ ನಿರ್ಮೂಲನೆಗೆ ನಾಂದಿಯಾಗಲಿ.

ಆದರೆ ಭ್ರಷ್ಟಾಚಾರಿಗಳ ಯಾವುದೇ ಸಂದರ್ಭದಲ್ಲೂ ತಪ್ಪಿಸಿಕೊಳ್ಳುವ ಸಾಧ್ಯತೆ ಇದೆ. ಹಣ, ಅಧಿಕಾರ ಬಲವುಳ್ಳ ಭ್ರಷ್ಟರು ಜೈಲಿನ ಹೊರಗೆ ನಿಂತು ವಿಚಾರಣೆಯ ದಿಕ್ಕು ತಪ್ಪಿಸಲು ತಂತ್ರವನ್ನು ಹೆಣೆಯುತ್ತಲೇ ಇರುತ್ತಾರೆ. ಆದುದರಿಂದ ಈ ಭ್ರಷ್ಟಾಚಾರ ಆರೋಪಿಗಳ ವಿಚಾರಣೆ ತ್ವರಿತಗತಿಯಲ್ಲಿ ನಡೆದು ಆದಷ್ಟು ಬೇಗ ಆರೋಪಿಗಳಿಗೆ ಶಿಕ್ಷೆಯಾಗಲಿ.

ರಾಜೇಶ್, ಉಡುಪಿ

## ಭಯೋತ್ಪಾದನೆಗೆ ಕಡಿವಾಣ ಹಾಕಿ

ದೆಹಲಿಯಲ್ಲಿ ಮೊನ್ನೆ ಹೈಕೋರ್ಟ್‌ನ ಆವರಣದಲ್ಲಿ ನಡೆದ ಬಾಂಬ್ ಸ್ಫೋಟದ ಹೊಣೆಯನ್ನು ಕೆಲವು ಮಾಧ್ಯಮಗಳು ಎಂದಿನಂತೆ ಮುಸ್ಲಿಮರ ತಲೆಗೆ ಕಟ್ಟಲು ಪ್ರಯತ್ನಿಸುತ್ತಿವೆ. ಮುಸ್ಲಿಮ್ ಉಗ್ರವಾದದ ಗುಮ್ಮವನ್ನು ಸೃಷ್ಟಿಸಲು ಇವು ತುದಿಗಾಲಲ್ಲಿ ನಿಂತಿವೆ.

ದೇಶದಲ್ಲಿ ನಡೆದ ಅನೇಕ ಸ್ಫೋಟ ಪ್ರಕರಣಗಳಲ್ಲಿ ಪೊಲೀಸರು ಅಮಾಯಕ ಮುಸ್ಲಿಮ್ ಯುವಕರನ್ನು ಬಂಧಿಸಿದ್ದಾರೆ. ಇದರ ಪರಿಣಾಮವಾಗಿ ಹಲವು ವರ್ಷ ಈ ಅಮಾಯಕರು ಜೈಲಿನಲ್ಲಿ ಕಾಲ ಕಳೆದಿದ್ದಾರೆ. ಕಳೆಯುತ್ತಿದ್ದಾರೆ. ಮಕ್ಕಾ ಮಸೀದಿ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಅಮಾಯಕರನ್ನು ಬಂಧಿಸಿದುದ್ದಕ್ಕಾಗಿ ಸರಕಾರ ಕ್ಷಮೆ ಯಾಚಿಸಿದೆ. ಆದರೆ ಈ ಕ್ಷಮೆ ತರುಣರ ಕಳೆದು ಹೋದ ಬದುಕನ್ನು ತುಂಬಿಸಿಸಲು ಸಾಧ್ಯವೇ?

ಬಾಂಬ್ ಸ್ಫೋಟಿಸಿ ಅಮಾಯಕರನ್ನು ದಾರುಣವಾಗಿ ಕೊಲ್ಲುತ್ತಿರುವ, ಗಾಯಾಳುಗಳನ್ನಾಗಿ ಮಾಡುತ್ತಿರುವ ಸನಾತನ ಸಂಸ್ಥೆ, ಅಭಿನವ ಭಾರತ್‌ನಂತಹ ಸಂಘಟನೆಗಳ ಬಗ್ಗೆ ಮಾಧ್ಯಮಗಳು ಯಾಕೆ ಚಕಾರವೆತ್ತುತ್ತಿಲ್ಲ? ಪೊಲೀಸರು, ಗುಪ್ತದಳಗಳು, ಸರಕಾರ ಯಾಕೆ ತನಿಖೆಯನ್ನು ಚುರುಕುಗೊಳಿಸುತ್ತಿಲ್ಲ?

ಸರಕಾರದ ಇಂತಹ ಪಕ್ಷಪಾತ ನೀತಿ ದೇಶದಲ್ಲಿ ಭಯೋತ್ಪಾದಕರಿಗೆ ಇನ್ನಷ್ಟು ಬಾಂಬ್ ಸ್ಫೋಟಗಳನ್ನು ನಡೆಸಲು ದಾರಿ ಸುಗಮಗೊಳಿಸ ಬಹುದು. ಸರಕಾರ ಇನ್ನಾದರೂ ಕೇಸರಿ ಭಯೋತ್ಪಾದನೆಯನ್ನು ಹರಡುತ್ತಿರುವ ಆರೆಸ್ಸೆಸ್ ಹಾಗೂ ಅದರ ಸಹ ಸಂಘಟನೆಗಳನ್ನು ನಿಷೇಧಿಸುವುದಕ್ಕೆ ಧೈರ್ಯ ತೋರಬೇಕು. ಆಗ ಮಾತ್ರ ಬಾಂಬ್ ಸ್ಫೋಟ, ಭಯೋತ್ಪಾದನೆಗೆ ಕಡಿವಾಣ ಹಾಕಬಹುದು.

ಎಂ.ಶಬೀರ್

# ಜೈ... ಹೋ...
# ಭ್ರಷ್ಟರ ಜೈಲು ವಾಸ್ತವ್ಯಕ್ಕೆ...

● ಫಯಾಝ್ ಎನ್.



ನಿನ್ನೆ ಮೊನ್ನೆ ಅಣ್ಣಾಂದೋಲನಕ್ಕೆ ಜೈ ಎಂದವರು ಇವತ್ತು ಜೈಲು ಸೇರಿದ್ದಾರೆ. ಕೆಲವರು ಆಂದೋಲನಕ್ಕೆ ಮುನ್ನವೇ ಜೈಲು ತಲುಪಿದ್ದಾರೆ. ಇನ್ನು ಹಲವು ಮಂದಿ ಜೈಲು ಸೇರಲು ಕ್ಷಣಗಣನೆ ಎದುರಿಸುತ್ತಿದ್ದಾರೆ. ಕಟ್ಟಾ ಸುಬ್ರಹ್ಮಣ್ಯ ನಾಯ್ಡು, ಜಗದೀಶ್ ಕಟ್ಟಾ, ಸುರೇಶ್ ಕಲ್ಮಾಡಿ, ಕನ್ನಿಮೊಳಿ, ಡಿ.ರಾಜಾ, ದಯಾನಿಧಿ ಮಾರನ್, ಅಮರ್ ಸಿಂಗ್, ಗಾಲಿ ಜನಾರ್ದನ ರೆಡ್ಡಿ ಜೈಲಿನೊಳಗೆ ಇರುವ ಪ್ರಮುಖ ರಾಜಕಾರಣಿಗಳು. ಪ್ರಜಾತಂತ್ರ ವ್ಯವಸ್ಥೆಯಡಿ ಜನಪ್ರತಿನಿಧಿಗಳಾಗಿ ಆಯ್ಕೆಯಾಗಿದ್ದ ಇವರೆಲ್ಲರೂ ಇದೀಗ ಆರೋಪಿಗಳಾಗಿ ಕಂಬಿ ಎಣಿಸುತ್ತಿದ್ದಾರೆ. ಇನ್ನು ಮಾಜಿ ಮುಖ್ಯಮಂತ್ರಿಗಳಾದ ಎಚ್.ಡಿ.ಕುಮಾರ ಸ್ವಾಮಿ ಮತ್ತು ಬಿ.ಎಸ್.ಯಡಿಯೂರಪ್ಪ ಮತ್ತೆ ಜೈಲಿನಲ್ಲಿ ಒಂದಾಗುವ ಲಕ್ಷಣಗಳು ಕಂಡುಬರುತ್ತಿವೆ.

ಗಣಿ ಅಕ್ರಮದ ಕುರಿತು ಹಿಂದಿನ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಸಲ್ಲಿಸಿದ್ದ ವರದಿಯನ್ನಾಧರಿಸಿ ಇದೇ ರೀತಿಯ ಕ್ರಮವನ್ನು ತೆಗೆದುಕೊಳ್ಳುತ್ತಾ ಸಾಗಿದರೆ ವಿಧಾನಸಭೆಯ ಕಲಾಪಗಳನ್ನು ಜೈಲಿನಲ್ಲೇ ನಡೆಸಬೇಕಾದ ಪರಿಸ್ಥಿತಿ ನಿರ್ಮಾಣವಾದರೂ ಅಚ್ಚರಿಪಡಬೇಕಾಗಿಲ್ಲ. ಜೈಲು ಸೇರಿದ ರಾಜಕಾರಣಿಗಳು ನಡೆಸಿರುವ ಭ್ರಷ್ಟಾಚಾರ ಮತ್ತು ನಮ್ಮ ರಾಜ್ಯವನ್ನು ಲೂಟಿಮಾಡಿದ ಪರಿಯನ್ನು ಗಮನಿಸಿದರೆ ಇದು ಅವರಿಗೆ ತಕ್ಕುದಾದ ಶಿಕ್ಷೆಯೇ ಅಲ್ಲ. ಪಿಕ್‌ಪಾಕೆಟ್ ಮಾಡಿದ ಅದೆಷ್ಟೋ ಮಂದಿ ಆರೋಪಿಗಳು ವರ್ಷಗಟ್ಟಲೆ ಬಳ್ಳಾರಿ ಜೈಲಿನಲ್ಲಿ ಕೊಳೆಯುತ್ತಿರುವಾಗ ಇಡೀ ಬಳ್ಳಾರಿ ಜಿಲ್ಲೆಯನ್ನೇ ಸೂರೆಗೈದು 'ಬಳ್ಳಾರಿ ರಿಪಬ್ಲಿಕ್' ಸ್ಥಾಪಿಸಿದ್ದ ರೆಡ್ಡಿ ಸಹೋದರರಿಗೆ ಅದೆಷ್ಟು ವರ್ಷ ಜೈಲು ಶಿಕ್ಷೆ ವಿಧಿಸಬೇಕಾದೀತು?!

ಬ್ರಹ್ಮಾಂಡ ಭ್ರಷ್ಟಾಚಾರ ಸುದ್ದಿಯಾದದ್ದು 2ಜಿ ಸ್ಪೆಕ್ಟ್ರಂ ಪ್ರಕರಣದಲ್ಲಿ. 1.76 ಲಕ್ಷ ಕೋಟಿ ರೂಪಾಯಿಗಳಷ್ಟು ಸರಕಾರಕ್ಕೆ ನಷ್ಟ ಉಂಟು ಮಾಡಿರುವ 2ಜಿ ಸ್ಪೆಕ್ಟ್ರಂ ಹಗರಣದ ಪ್ರಮುಖ ಆರೋಪಿ ಕೇಂದ್ರ ಸಚಿವ ಎ.ರಾಜಾ. ದೇಶಾದ್ಯಂತ ಈ ಪ್ರಕರಣವು ಕೋಲಾಹಲವೆಬ್ಬಿಸಿದಾಗ ಆರೋಪಿಗಳಾದ ಎ.ರಾಜಾ, ದಯಾನಿಧಿ ಮಾರನ್, ಕನಿಮೋಳಿ ಮುಂತಾದ ಪ್ರಮುಖ ರಾಜಕಾರಣಿಗಳನ್ನು ಜೈಲಿಗೆ ತಳ್ಳಲಾಯಿತು.

ಇದೇ ಹೊತ್ತಿನಲ್ಲಿ ದೇಶದಲ್ಲಿ ಸುದ್ದಿಯಾದ ಇನ್ನೊಂದು ಹಗರಣ ಕಾಮನ್‌ವೆಲ್ತ್ ಗೇಮ್ಸ್ ಹಗರಣ. ಈ ಹಗರಣದಲ್ಲಿ ಸುಮಾರು 8,000 ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ. ಅಂತಾರಾಷ್ಟ್ರೀಯ ಮಟ್ಟದ ಅಥ್ಲೆಟಿಕ್ ಕ್ರೀಡೋತ್ಸವ ನಡೆಸುವ ಪ್ರಾಯೋಜಕತ್ವ ಪಡೆದಿದ್ದ ಭಾರತವು ಈ ಹಗರಣದಿಂದಾಗಿ ತಲೆತಗ್ಗಿಸುವಂತಾಯಿತು. ಕ್ರೀಡೋತ್ಸವದ ಹಣವನ್ನು 'ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ' ಎಂಬಂತೆ ಲಪಟಾಯಿಸಿದ ಕೇಂದ್ರ ಕಾಂಗ್ರೆಸ್ ಮುಖಂಡ, ಸಂಸದ, ಗೇಮ್ಸ್‌ನ ಸಂಘಟಕ ಸುರೇಶ್ ಕಲ್ಮಾಡಿಯನ್ನು ಜೈಲಿಗೆ ತಳ್ಳಲಾಯಿತು. ಆರೋಪದಿಂದ ಮುಕ್ತಿಗೊಳಿಸಲು ನಾನಾ ರೀತಿಯ ವಾದಗಳು ನ್ಯಾಯಾಲಯದಲ್ಲಿ ಮಂಡಿಸಲ್ಪಡುತ್ತಿವೆ. ಆಘಾತಕಾರಿ ಸಂಗತಿಯೇನೆಂದರೆ, ಜೈಲಿನೊಳಗೂ ಕಲ್ಮಾಡಿಗೆ ಐಶಾರಾಮಿ ಜೀವನ ಸಾಗಿಸಲು ಜೈಲು ಅಧಿಕಾರಿಯೊಬ್ಬರೂ ಸಹಕರಿಸಿದ್ದಲ್ಲದೆ, ಸೆಲ್ಯೂಟ್ ಹೊಡೆದಿದ್ದರು. ಈ ಕಾರಣಕ್ಕಾಗಿ ಅಧಿಕಾರಿಯನ್ನು ಅಮಾನತುಗೊಳಿಸಿರುವುದು ಬೇರೆ ವಿಚಾರ.

***ರೆಡ್ಡಿಗಳು ಆಗಾಗ ಮುಖ್ಯಮಂತ್ರಿಯನ್ನು ತನ್ನ ಮೂಗಿನ ನೇರಕ್ಕೆ ಕುಣಿಸುತ್ತಿದ್ದರು. ಹೀಗಾಗಿ ರೆಡ್ಡಿಗಳ ವಿರುದ್ಧ ಏನೇ ಆರೋಪ ಬಂದರೂ ಮುಖ್ಯಮಂತ್ರಿಯಾಗಲೀ, ಸರಕಾರವಾಗಲೀ ಯಾವುದೇ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ. ರೆಡ್ಡಿಗಳ ವಿರುದ್ಧ ಹೇಳಿಕೆ ನೀಡುವುದು ಕೂಡ ಸಂಪುಟ ಸಹೋದ್ಯೋಗಿಗಳಿಂದ ಸಾಧ್ಯವಾಗುತ್ತಿರಲಿಲ್ಲ. ಅಷ್ಟು ಪ್ರಭಾವವನ್ನು ಬೀರಿದ್ದ ರೆಡ್ಡಿಗಳು ನಡೆಸುತ್ತಿದ್ದುದು ಮಾತ್ರ ಅಪ್ಪಟ ಅಕ್ರಮ ಗಣಿಗಾರಿಕೆ. ದೇಶದ ಸಂಪತ್ತನ್ನು ಅಕ್ರಮವಾಗಿ ಸಾಗಿಸಿ ದೇಶದ್ರೋಹದ ಚಟುವಟಿಕೆಯನ್ನು ನಡೆಸುತ್ತಲೇ ಅವರು ಕೋಟಿ ಕೋಟಿಗಳ ಒಡೆಯರಾಗಿದ್ದರು.***

ಇನ್ನು ವೋಟಿಗಾಗಿ ನೋಟು ಪ್ರಕರಣ. ದೇಶದ ಪ್ರಜಾತಂತ್ರ ವ್ಯವಸ್ಥೆಯನ್ನೇ ಅಣಕಿಸುವಂತೆ ಮಾಡಿದ ವೋಟಿಗಾಗಿ ನೋಟು ಪ್ರಕರಣಕ್ಕೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷದ ಮುಖಂಡ ಅಮರ್ ಸಿಂಗ್‌ರನ್ನು ಬಂಧಿಸಿ ಜೈಲಿಗೆ ತಳ್ಳಲಾಗಿದೆ.

ಹೀಗೆ ಒಬ್ಬರ ಹಿಂದೆ ಒಬ್ಬರಂತೆ ಪ್ರಮುಖ ಜನಪ್ರತಿನಿಧಿಗಳು ಜೈಲು ಪಾಲಾಗುತ್ತಿದ್ದಾರೆ. ಆದರೆ ಈ ಪೈಕಿ ಅತಿಹೆಚ್ಚು ಚರ್ಚೆಗೊಳಗಾದದ್ದು ಕರ್ನಾಟಕದಲ್ಲಿ ಜೈಲು ಪಾಲಾದ ಜನಪ್ರತಿನಿಧಿಗಳು.

ಕರ್ನಾಟಕದಲ್ಲಿ ಇದೇ ಮೊತ್ತಮೊದಲ ಬಾರಿಗೆ ಅಧಿಕಾರಕ್ಕೇರಿದ ಬಿಜೆಪಿ, ರಾಜ್ಯವನ್ನು ದೇಶದಲ್ಲೇ ನಂ.1 ಭ್ರಷ್ಟ ರಾಜ್ಯವನ್ನಾಗಿಸಿದೆ. ಇದು ಕೇವಲ ಮುಖ್ಯಮಂತ್ರಿಯೊಬ್ಬರ ಅವಿರತ ಪರಿಶ್ರಮದಿಂದ ಪ್ರಾಪ್ತಿಯಾದ ಕುಖ್ಯಾತಿಯಲ್ಲ. ಇದೊಂದು ಸಾಮೂಹಿಕ ಪ್ರಯತ್ನದಿಂದಾಗಿ (ಸಚಿವ ಸಂಪುಟ) ರಾಜ್ಯಕ್ಕೆ ಪ್ರಾಪ್ತಿಯಾದ ಅಪಕೀರ್ತಿ. ಹಾಗಾಗಿ ರಾಜ್ಯವನ್ನು ನಂ.1 ಪಟ್ಟಕ್ಕೇರಿಸಿದ ಸಾಧಕರು ಒಬ್ಬೊಬ್ಬರಾಗಿಯೇ ಜೈಲು

*ಜನಾರ್ದನ ರೆಡ್ಡಿ, ಲಕ್ಷ್ಮೀ ಅರುಣಾ, ಶ್ರೀರಾಮುಲು, ಸೋಮಶೇಖರ ರೆಡ್ಡಿ, ಕರುಣಾಕರ ರೆಡ್ಡಿ ಒಡೆತನದ ಒಬಳಾಪುರಂ ಮೈನಿಂಗ್ ಕಾರ್ಪೊರೇಷನ್‌ನ ಗಣಿಗಾರಿಕೆ ಅನುಮತಿ ಮತ್ತು ಗುತ್ತಿಗೆ ಇರುವುದು ಆಂಧ್ರಪ್ರದೇಶದ ವ್ಯಾಪ್ತಿಯಲ್ಲಿ. ಆದರೆ ರೆಡ್ಡಿ ಸಹೋದರರು ಕರ್ನಾಟಕದಲ್ಲಿ ಅಕ್ರಮವಾಗಿ ವಿಪರೀತ ಗಣಿಗಾರಿಕೆ ನಡೆಸಿದ್ದಾರೆ. ದೇಶದ ಬೆಲೆಬಾಳುವ ನೈಸರ್ಗಿಕ ಸಂಪತ್ತಾಗಿರುವ ಕಬ್ಬಿಣದ ಅದಿರನ್ನು (ಮೈನ್ಸ್) ಬಾಚಿ ಬಾಚಿ ಚೀನಾ ಮುಂತಾದ ವಿದೇಶ ರಾಷ್ಟ್ರಗಳಿಗೆ ಸಾಗಿಸಿ ಭಾರೀ ದುಡ್ಡು ಸಂಪಾದಿಸಿದರು.*




ಸೇರುತ್ತಿದ್ದಾರೆ. ಇನ್ನು ಹಲವರು ಸರದಿಯಲ್ಲಿ ನಿಂತಿದ್ದಾರೆ!

ರಾಜ್ಯದಲ್ಲಿ ಜೈಲು ಹೋಗುವ (ಜೈ..ಹೋ...) ಅಭಿಯಾನಕ್ಕೆ ಚಾಲನೆ ನೀಡಿದವರು ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹಾಗೂ ಅವರ ಮಗ ಜಗದೀಶ್ ಕಟ್ಟಾ. ಕೆಐಎಡಿಬಿ ಭೂಹಗರಣಕ್ಕೆ ಸಂಬಂಧಿಸಿದಂತೆ ಈ ಇಬ್ಬರು ಬಿಜೆಪಿ ಮುಖಂಡರನ್ನು ಜೈಲಿಗೆ ಅಟ್ಟಲಾಗಿದೆ. ಇದಾದ ನಂತರ ಜೈಲಿಗೆ ಹೋಗುವ ಭೀತಿ ಎದುರಿಸಿದವರು ಮಾಜಿಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ ಮತ್ತು ಎಚ್.ಡಿ.ಕುಮಾರಸ್ವಾಮಿ. ಆದರೆ ಅದಕ್ಕೆ ದಿನಕೂಡಿ ಬಂದಿರಲಿಲ್ಲ. ಇದೀಗ ಒಬಳಾಪುರಂ ಮೈನಿಂಗ್ ದಂಧೆಗೆ ಸಂಬಂಧಿಸಿದಂತೆ ಗಣಿಧಣಿ ಜನಾರ್ದನ ರೆಡ್ಡಿಯ ಬಂಧನವಾಗಿದೆ. ರೆಡ್ಡಿಯ ಬಂಧನದೊಂದಿಗೆ ಸಿಬಿಐ ಅಧಿಕಾರಿಗಳು ಕಲೆಹಾಕಿರುವ ಮಾಹಿತಿ ಮತ್ತು ಲೋಕಾಯುಕ್ತ ವರದಿಯಲ್ಲಿ ತಿಳಿಸಲಾಗಿರುವ ಅಂಕಿಅಂಶಗಳನ್ನು ಗಮನಿಸಿದರೆ ರೆಡ್ಡಿ ಸಹೋದರರ ಅಕ್ರಮ ಗಣಿಗಾರಿಕೆಯು ಈ ದೇಶದ ಅತಿದೊಡ್ಡ ಹಗರಣವೆಂದು ದಾಖಲಿಸಲ್ಪಡಲಿದೆ. 2ಜಿ ಸ್ಪೆಕ್ಟ್ರಂ, ಕಾಮನ್‌ವೆಲ್ತ್ ಗೇಮ್ಸ್ ಹಗರಣವನ್ನೂ ಮೀರಿಸುವಂತಹ ಬ್ರಹ್ಮಾಂಡ ಭ್ರಷ್ಟಾಚಾರ, ಅವ್ಯವಹಾರ, ಅಕ್ರಮಗಳು ಮುಖ್ಯಮಂತ್ರಿಯಾದಿಯಾಗಿ ಬಹುತೇಕ ಸಚಿವ ಸಂಪುಟದಿಂದ ನಡೆದಿದೆ ಎಂಬುದು ಸ್ಪಷ್ಟ.

ಬಳ್ಳಾರಿ ಸಾಮ್ರಾಜ್ಯವನ್ನು ಸ್ಥಾಪಿಸಲು ಹೊರಟಿದ್ದ ರೆಡ್ಡಿ ಸಹೋದರರು ಇಡೀ ಸರಕಾರವನ್ನೇ ನಿಯಂತ್ರಿಸುವಷ್ಟು ಹಣಬಲ ಹೊಂದಿದ್ದರು. ಸರಕಾರದಲ್ಲಿ ರೆಡ್ಡಿ ಸಹೋದರರ ಪ್ರಭಾವ ಎಷ್ಟಿತ್ತೆಂದರೆ, ಗಣಿಧಣಿಗಳ ಯಾವುದೇ ಅಕ್ರಮ ವ್ಯವಹಾರವನ್ನು ಮುಖ್ಯಮಂತ್ರಿ ಪ್ರಶ್ನಿಸದಷ್ಟು. ಅವರು ಆಗಾಗ ಮುಖ್ಯಮಂತ್ರಿಯನ್ನು ತನ್ನ ಮೂಗಿನ ನೇರಕ್ಕೆ ಕುಣಿಸುತ್ತಿದ್ದರು. ಹೀಗಾಗಿ ರೆಡ್ಡಿಗಳ ವಿರುದ್ಧ ಏನೇ ಆರೋಪ ಬಂದರೂ ಮುಖ್ಯಮಂತ್ರಿಯಾಗಲೀ, ಸರಕಾರವಾಗಲೀ ಯಾವುದೇ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ. ರೆಡ್ಡಿಗಳ ವಿರುದ್ಧ ಹೇಳಿಕೆ ನೀಡುವುದು ಕೂಡ ಸಂಪುಟ ಸಹೋದ್ಯೋಗಿಗಳಿಂದ ಸಾಧ್ಯವಾಗುತ್ತಿರಲಿಲ್ಲ. ಅಷ್ಟು ಪ್ರಭಾವವನ್ನು ಬೀರಿದ್ದ ರೆಡ್ಡಿಗಳು ನಡೆಸುತ್ತಿದ್ದುದು ಮಾತ್ರ ಅಪ್ಪಟ ಅಕ್ರಮ ಗಣಿಗಾರಿಕೆ. ದೇಶದ ಸಂಪತ್ತನ್ನು ಅಕ್ರಮವಾಗಿ ಸಾಗಿಸಿ ದೇಶದ್ರೋಹದ ಚಟುವಟಿಕೆಯನ್ನು ನಡೆಸುತ್ತಲೇ ಅವರು ಕೋಟಿ ಕೋಟಿಗಳ ಒಡೆಯರಾಗಿದ್ದರು.

ರೆಡ್ಡಿ ಗ್ಯಾಂಗಿನ ಅಕ್ರಮಗಳತ್ತ ಗಮನಹರಿಸೋಣ; ಜನಾರ್ದನ ರೆಡ್ಡಿ, ಲಕ್ಷ್ಮೀ ಅರುಣಾ, ಶ್ರೀರಾಮುಲು, ಸೋಮಶೇಖರ ರೆಡ್ಡಿ, ಕರುಣಾಕರ ರೆಡ್ಡಿ ಒಡೆತನದ ಒಬಳಾಪುರಂ ಮೈನಿಂಗ್ ಕಾರ್ಪೊರೇಷನ್‌ನ ಗಣಿಗಾರಿಕೆ ಅನುಮತಿ ಮತ್ತು ಗುತ್ತಿಗೆ ಇರುವುದು ಆಂಧ್ರಪ್ರದೇಶದ ವ್ಯಾಪ್ತಿಯಲ್ಲಿ. ಆದರೆ ರೆಡ್ಡಿ ಸಹೋದರರು ಕರ್ನಾಟಕದಲ್ಲಿ ಅಕ್ರಮವಾಗಿ ವಿಪರೀತ ಗಣಿಗಾರಿಕೆ ನಡೆಸಿದ್ದಾರೆ. ದೇಶದ ಬೆಲೆಬಾಳುವ ನೈಸರ್ಗಿಕ ಸಂಪತ್ತಾಗಿರುವ ಕಬ್ಬಿಣದ ಅದಿರನ್ನು (ಮೈನ್ಸ್) ಬಾಚಿ ಬಾಚಿ ಚೀನಾ ಮುಂತಾದ ವಿದೇಶ ರಾಷ್ಟ್ರಗಳಿಗೆ ಸಾಗಿಸಿ ಭಾರೀ ದುಡ್ಡು ಸಂಪಾದಿಸಿದರು.

ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆ ನಡೆಸಲು ರೆಡ್ಡಿ ಸಹೋದರರು 16 ಬೇರೆ ಬೇರೆ ಹೆಸರಿನಲ್ಲಿ ಕಂಪೆನಿಗಳನ್ನು ನೋಂದಾಯಿಸಿ ಅವುಗಳ ಮೂಲಕ ಬೇಲೆಕೇರಿ ಕೃಷ್ಣಪಟ್ಟಣಂ, ಚೆನ್ನೈ, ಮಂಗಳೂರು ಬಂದರುಗಳಿಗೆ ಅಕ್ರಮವಾಗಿ ಅದಿರು ಸಾಗಿಸಿದ್ದಾರೆ. ಹೀಗೆ ಅಕ್ರಮ ಅದಿರು ಸಾಗಿಸಿ ಇವರು ಕರ್ನಾಟಕ ಸರಕಾರಕ್ಕೆ ಮಾಡಿರುವ ನಷ್ಟದ ಅಂದಾಜು 1850 ಕೋಟಿ ರೂಪಾಯಿ ! ಇದು 2009 -2010ರ ಕೇವಲ 14 ತಿಂಗಳ ಅವಧಿಯಲ್ಲಿ ನಡೆಸಿರುವ ಅಕ್ರಮ ಗಣಿಗಾರಿಕೆಯ ಒಂದು ಅಂಕಿಅಂಶ ಮಾತ್ರ.

ಈಗಲ್ ಟ್ರೇಡರ್ಸ್ ಆ್ಯಂಡ್ ಲಾಜಿಸ್ಟಿಕ್, ದೇವಿ ಎಂಟರ್‌ಪ್ರೈಸಸ್, ಮಧುಶ್ರೀ ಎಂಟರ್‌ಪ್ರೈಸಸ್, ಸ್ವಸ್ತಿಕ್ ಸ್ಟೀಲ್ಸ್, ಲಕ್ಷ್ಮೀ ಅರುಣಾ ಮಿನರಲ್ಸ್, ಶ್ರೀನಿವಾಸ ಮಿನರಲ್ಸ್, ಮೈ ಮಿನರಲ್ಸ್, ಟ್ರೆಡೆಂಟಣ ಮಿನರಲ್ಸ್, ಮೆಹಬೂಬ್ ಟ್ರಾನ್ಸ್‌ಪೋರ್ಟ್ ಕಂಪೆನಿ, ಲಕ್ಷ್ಮೀ ನಾರಾಯಣ ಮೈನಿಂಗ್ ಕಾರ್ಪೊರೇಶನ್, ಡೆಕ್ಕನ್ ಮೈನಿಂಗ್ ಸಿಂಡಿಕೇಟ್, ಇಂಡಿಯನ್ ಮೈನ್ಸ್ ಆ್ಯಂಡ್ ಮಿನರಲ್ಸ್, ಜಂಬುನಾಥ ಟ್ರೇಡಿಂಗ್ ಕಂಪೆನಿ, ವಿಎಂ ಪ್ರೈವೇಟ್ ಲಿಮಿಟೆಡ್, ಹಿಂದ್ ಟ್ರೇಡರ್ಸ್, ಮೀನಾಗ್ ಎಂಟರ್‌ಪ್ರೈಸಸ್ ಹೀಗೆ ಒಟ್ಟು 16 ಕಂಪೆನಿಗಳನ್ನು ರಿಜಿಸ್ಟರ್ ಮಾಡಿಕೊಂಡು ಆ ಮೂಲಕ ಅಕ್ರಮವಾಗಿ ಅದಿರು ಸಾಗಿಸಲಾಗಿದೆ. ಈ 16 ಕಂಪೆನಿಗಳು 'ರಿಸ್ಕ್ ಮ್ಯಾನೇಜ್‌ಮೆಂಟ್'ನಡಿ ಕಾರ್ಯನಿರ್ವಹಿಸುತ್ತಿದ್ದು, ಇದರ ಹೆಸರಿನಲ್ಲೇ ಸಾಗಾಟ ವ್ಯವಸ್ಥೆ ಮಾಡಲಾಗಿದೆ.

ಲೋಕಾಯುಕ್ತರು ಈ 16 ಕಂಪೆನಿಗಳ ವ್ಯವಹಾರದ ಜಾಡು ಹಿಡಿದಾಗ ಹಲವು ಆಘಾತಕಾರಿ ಅಂಶಗಳು ಬೆಳಕಿಗೆ ಬಂದಿವೆ. ಅದರ ಪರಿಣಾಮವಾಗಿಯೇ ಇಂದು ಜನಾರ್ದನ ರೆಡ್ಡಿ ಜೈಲು ಪಾಲಾಗುವಂತಾಯಿತು. ರೆಡ್ಡಿ ಕಂಪೆನಿಗಳು ಸಾಗಿಸುತ್ತಿದ್ದ ಬೃಹತ್ ಪ್ರಮಾಣದ ಅದಿರನ್ನು ಸಂಗ್ರಹಿಸಿಡಲು ನಾಲ್ಕು ಬೃಹತ್ ಯಾರ್ಡ್‌ಗಳು ಬಳಕೆಯಾಗಿವೆ. ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈವೇಟ್ ಲಿಮಿಟೆಡ್, ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ ಸಲ್‌ಗಾಂವ್‌ಕರ್ ಮೈನಿಂಗ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಮತ್ತು ರಾಜಮಹಲ್ ಸಿಲ್ಕ್ಸ್ ಇವೇ ಆ ನಾಲ್ಕು ಬೃಹತ್ ಯಾರ್ಡ್‌ಗಳು.

ಈ ಹಿಂದೆ ಬೆಲೆಕೇರಿ ಅದಿರು ನಾಪತ್ತೆ ಪ್ರಕರಣವು ರಾಜ್ಯದಲ್ಲಿ ಭಾರೀ ಚರ್ಚೆಗೊಳಗಾಗಿತ್ತು. ಬೆಲೆಕೇರಿ ಬಂದರಿನಲ್ಲಿ ಲೋಕಾಯುಕ್ತರು ಪತ್ತೆಹಚ್ಚಿ ಮುಟ್ಟುಗೋಲು ಹಾಕಿದ್ದ ಅಪಾರ ಪ್ರಮಾಣದ ಅಕ್ರಮ ಅದಿರು ಸಲೀಸಾಗಿ ರಫ್ತು ಆಗಿತ್ತು. ಇದರಿಂದಾಗಿ ಅಂದಿನ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸರಕಾರದ ವಿರುದ್ಧ ಫುಲ್‌ಗರಮ್ ಆಗಿದ್ದರು. ಸರಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದ್ದ ಲೋಕಾಯುಕ್ತರು, ಈ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದ್ದರು.

ಅಕ್ರಮ ಗಣಿಗಾರಿಕೆಯ ಹಿನ್ನೆಲೆಯಲ್ಲಿ ಬೆಲೆಕೇರಿ ಬಂದರು ಭಾರೀ ಸುದ್ದಿಯಲ್ಲಿತ್ತು. ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದ ಪ್ರಕರಣವಾಗಿತ್ತದು. ಇಡೀ ಬಂದರಿಗೆ 1.26 ಕೋಟಿ ಮೆಟ್ರಿಕ್ ಟನ್ ಅದಿರು ಸಾಗಿಸಲು ಮಾತ್ರ ಅನುಮತಿ ಇತ್ತು. ಆದರೆ 2006-07 ಮತ್ತು 2010 ಮೇ ತಿಂಗಳ ಅವಧಿಯಲ್ಲೇ ಇಲ್ಲಿ 2.30 ಕೋಟಿ ಮೆಟ್ರಿಕ್ ಟನ್ ಅದಿರು ಸಾಗಣೆಯಾಗಿದೆ. ಅಂದರೆ 77.38 ಲಕ್ಷ ಮೆಟ್ರಿಕ್ ಟನ್ ಅದಿರು ಅಕ್ರಮವಾಗಿ ಬೆಲೆಕೇರಿ ಬಂದರಿಗೆ ಸರಬರಾಜಾಗಿತ್ತು. ಲೋಕಾಯುಕ್ತರು ಈ ಕುರಿತು ಸಮಗ್ರ ತನಿಖೆ ನಡೆಸಿದಾಗ ಬೆಲೆಕೇರಿ ಬಂದರಿನಲ್ಲಿ ದಾಖಲಾಗಿರುವ ಲಾರಿಗಳ ದಾಖಲೆ ಪುಸ್ತಕದಲ್ಲಿಯೂ 2,99,255 ಟ್ರಿಪ್ ಲಾರಿಗಳು ಅಕ್ರಮ ಅದಿರನ್ನು ಬೆಲೆಕೇರಿ ಬಂದರಿಗೆ ತಂದು ಸುರಿದಿರುವುದು ನಮೂದಿಸಲ್ಪಟ್ಟಿದೆ.

ಇಲಾಖೆಯ ಅನುಮತಿಗಿಂತಲೂ ಹೆಚ್ಚಿನ ಅದಿರನ್ನು ಸಾಗಿಸುವುದಕ್ಕಾಗಿ ರಿಸ್ಕ್ ಮ್ಯಾನೇಜ್‌ಮೆಂಟ್ ಸಂಸ್ಥೆಯನ್ನು ಹುಟ್ಟುಹಾಕಿ ಆ ಮೂಲಕ ಬೆಲೆಕೇರಿ, ಕೃಷ್ಣಪಟ್ಟಣ ಅಥವಾ ಗೋವಾ ಬಂದರುಗಳಿಗೆ ಸಾಗಿಸುವ ವ್ಯವಸ್ಥೆಯನ್ನು ರೆಡ್ಡಿ ಸಹೋದರರು ಮಾಡಿಟ್ಟುಕೊಂಡಿದ್ದರು. ಈ ದಂಧೆಯ ಜವಾಬ್ದಾರಿಯನ್ನು ಕಂಪ್ಲಿ ಶಾಸಕ ಸುರೇಶ್ ಬಾಬು, ಕೂಡ್ಲಿಗಿ ಶಾಸಕ ಬಿ.ನಾಗೇಂದ್ರ ಮುಂತಾದವರಿಗೆ ವಹಿಸಿಕೊಡಲಾಗಿತ್ತು. ಪರ್ಮಿಟ್ಟಿಗೂ ಮೀರಿ ಅದಿರು ಸಾಗಿಸಬೇಕೆಂದಿದ್ದರೆ ಅದಕ್ಕೆ ಬೇಕಾದ ಎಲ್ಲ ಸೆಟಪ್‌ಗಳನ್ನು ರಿಸ್ಕ್ ಮ್ಯಾನೇಜ್‌ಮೆಂಟ್ ನೋಡಿಕೊಳ್ಳುತ್ತಿತ್ತು. ಇದಕ್ಕಾಗಿ ಮ್ಯಾನೇಜ್‌ಮೆಂಟ್ ವಿಧಿಸುತ್ತಿದ್ದ ಶುಲ್ಕ ಟನ್‌ಗೆ ರೂಪಾಯಿ 250. ಅವರವರು ಸೂಚಿಸಿದ ಬಂದರಿಗೆ ಅದಿರನ್ನು ಸಾಗಿಸುವ ಜವಾಬ್ದಾರಿ ರಿಸ್ಕ್ ಮ್ಯಾನೇಜ್‌ಮೆಂಟ್‌ನವರದ್ದು.

ಹೀಗೆ ಅಕ್ರಮವಾಗಿ ಬೆಲೆಕೇರಿ ಬಂದರೊಂದಕ್ಕೆ ಸಾಗಾಟವಾದ ಅದಿರಿನ ಅಂಕಿ ಅಂಶ ಈ ರೀತಿ ಇದೆ; ಮಲ್ಲಿಕಾರ್ಜುನ ಶಿಪ್ಪಿಂಗ್ ಮತ್ತು ಅದಾನಿ ಎಂಟರ್‌ಪ್ರೈಸಸ್‌ನ ಯಾರ್ಡಿಗೆ 2010 ಎಪ್ರಿಲ್- ಮೇ ತಿಂಗಳಲ್ಲಿ 15.84 ಲಕ್ಷ ಮೆಟ್ರಿಕ್ ಟನ್ ಅದಿರು ಸರಬರಾಜಾಗಿದೆ. ಈ ಪೈಕಿ 11.59 ಲಕ್ಷ ಮೆಟ್ರಿಕ್ ಟನ್ ಅಕ್ರಮವಾದದ್ದು ಎಂದು ಲೋಕಾಯುಕ್ತ ವರದಿಯಲ್ಲಿ ಉಲ್ಲೇಖಿಸಲಾಗಿದೆ. 2009-10ರಲ್ಲಿ ಒಟ್ಟು 66.01 ಲಕ್ಷ ಮೆಟ್ರಿಕ್ ಟನ್ ಅದಿರು ಯಾರ್ಡ್‌ಗೆ ಬಂದಿದ್ದು, ಇದರಲ್ಲಿ 36.50 ಲಕ್ಷ ಮೆಟ್ರಿಕ್ ಟನ್ ಅಕ್ರಮವಾದದ್ದು. ಇವೆಲ್ಲವೂ ಸರಬರಾಜು ಆಗಿರುವುದು ಜನಾರ್ದನ ರೆಡ್ಡಿ ಸ್ವಾಮ್ಯದ ಮೈನಿಂಗ್ ಕಂಪೆನಿಗಳಿಂದ. ಹಾಗೆಯೇ ಅವರ ಇನ್ನೊಂದು ಕಂಪೆನಿಯಿಂದ ಬೆಲೆಕೇರಿ ಬಂದರಿನ ಎಸ್‌ಎಂಎಸ್‌ಪಿಎಲ್ ಯಾರ್ಡಿಗೆ 7-10-2009 ಮತ್ತು 17-2-2010ರ ನಡುವೆ 13,684,22 ಮೆಟ್ರಿಕ್ ಟನ್ ಅದಿರು ಸಾಗಣೆಯಾಗಿದೆ. ಇದೇ ರೀತಿ ಮೊದಲೇ ಮಾಡಿಟ್ಟುಕೊಂಡಿರುವ 16 ಬೇರೆ ಬೇರೆ ಕಂಪೆನಿಗಳ ಹೆಸರಿನಲ್ಲಿ ಬೆಲೆಕೇರಿ ಬಂದರಿಗೆ ನಾಲ್ಕು ಯಾರ್ಡ್‌ಗಳಿಗೆ

ನಿರೀಕ್ಷಣಾ ಜಾಮೀನಿಗಾಗಿ ಮಾಜಿ ಮುಖ್ಯಮಂತ್ರಿಗಳಿಬ್ಬರು ಕೋರ್ಟ್‌ಗೆ ಅರ್ಜಿ ಗುಜರಾಯಿಸುತ್ತಿದ್ದಾರೆ. ಜೈಲು ವಾಸ್ತವ್ಯಕ್ಕಾಗಿ ಕ್ಷಣಗಣನೆ ಎದುರಿಸುತ್ತಿರುವ ಇವರಿಬ್ಬರೂ ಅದರಿಂದ ಪಾರಾಗಲು ನಾನಾ ರೀತಿಯ ಕಸರತ್ತನ್ನೂ ನಡೆಸುತ್ತಿದ್ದಾರೆ. ಆದರೆ ಜನರ ನಿರೀಕ್ಷೆ, ಹಾರೈಕೆ ಭ್ರಷ್ಟಾಚಾರಿಗಳೆಲ್ಲ ಜೈಲು ಸೇರಬೇಕು, ಪ್ರಾಮಾಣಿಕ ಜನಪ್ರತಿನಿಧಿಗಳು ಮಾತ್ರ ಆಡಳಿತ ನಡೆಸಬೇಕು ಎಂಬುದಾಗಿದೆ. ಭ್ರಷ್ಟರ ಜೈಲು ವಾಸ್ತವ್ಯಕ್ಕೆ ಜೈ.. ಹೋ.. ಎನ್ನೋಣ.

ಅಪಾರ ಪ್ರಮಾಣದ ಅಕ್ರಮ ಅದಿರು ಸರಬರಾಜು ಆಗಿರುತ್ತದೆ.

ಲೋಕಾಯುಕ್ತರು ಕೇವಲ ರಿಸ್ಕ್ ಮ್ಯಾನೇಜ್‌ಮೆಂಟ್ ಎಂಬ ಸಂಸ್ಥೆಯ ವ್ಯವಹಾರದ ಜಾಡು ಹಿಡಿದಂತೆ ರೆಡ್ಡಿ ಸಹೋದರರ ಒಂದೊಂದೇ ಅಕ್ರಮ ದಂಧೆಗಳು ಬೆಳಕಿಗೆ ಬರತೊಡಗಿದವು. ಪ್ರಮುಖವಾದ ಅಂಶವೇನೆಂದರೆ, ಅವರ ಬ್ಯಾಂಕು ವ್ಯವಹಾರ. ಲಕ್ಷ್ಮೀ ವೆಂಕಟೇಶ್ವರ ಸ್ಟೀಲ್ ಆ್ಯಂಡ್ ಹಾರ್ಡ್‌ವೇರ್ ಹೊಸಪೇಟೆ ಇದರ ಸಾಮಾನ್ಯ ಕೆಲಸಗಾರ ಕಾಶಿ ವಿಶ್ವನಾಥ ಎಂಬಾತನ ಹೆಸರಿನಲ್ಲಿ ಬಳ್ಳಾರಿಯ ಆ್ಯಕ್ಸಿಸ್ ಬ್ಯಾಂಕು ಮತ್ತು ಹೊಸಪೇಟೆಯ ಲಕ್ಷ್ಮೀ ವಿಲಾಸ ಬ್ಯಾಂಕುಗಳಲ್ಲಿ ಖಾತೆ ತೆರೆದರು. ವಿಶ್ವನಾಥನಿಗೆ ಗೊತ್ತಿಲ್ಲದಂತೆಯೇ ರಿಸ್ಕ್ ಮ್ಯಾನೇಜ್‌ಮೆಂಟ್‌ನ ಹಣವು ಹರಿದಾಡತೊಡಗಿತು. ಹೀಗೆ ವಿಶ್ವನಾಥನ ಮೂರು ಅಕೌಂಟ್‌ಗಳ ಮೂಲಕ ವಹಿವಾಟು ನಡೆದ ಮೊತ್ತ 113,47,78,583 ರೂಪಾಯಿ! ಈ ಮೂರು ಅಕೌಂಟುಗಳಿಗೆ 'ಶ್ರೀ ಭಕ್ತ ಮಾರ್ಕಂಡೇಶ್ವರ ಮಿನರಲ್ಸ್' ಎಂದು ಹೆಸರಿಟ್ಟು ಕಾಶಿ ವಿಶ್ವನಾಥ ಇದಕ್ಕೆ ಹಕ್ಕುದಾರ ಎಂಬಂತೆ ಅಕ್ರಮ ಹಣವನ್ನು ರೆಡ್ಡಿ ಬಳಗವು ಬಳಸುತ್ತಿತ್ತು.

ಈ ಎಲ್ಲ ಅಂಶಗಳನ್ನು ಪತ್ತೆಹಚ್ಚಿರುವ ಲೋಕಾಯುಕ್ತರು ಸಮಗ್ರ ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದಾರೆ. ಆದರೆ ಸರಕಾರದ ಮುಖ್ಯಮಂತ್ರಿಯೇ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಪಾಲ್ಗೊಂಡು ರಾಜೀನಾಮೆ ನೀಡಿರುವಾಗ ಇನ್ನು ವರದಿಯ ಹಿನ್ನೆಲೆಯಲ್ಲಿ ಕ್ರಮ ತೆಗೆದುಕೊಳ್ಳುವ ವಿಚಾರ ದೂರದ ಮಾತು. ಸದ್ಯಕ್ಕೆ ಜನಾರ್ದನ ರೆಡ್ಡಿ ಜೈಲು ಸೇರಿದ್ದಾರೆ. ಉಳಿದ ಭ್ರಷ್ಟರಿಗೂ ಜೈಲು ಶಿಕ್ಷೆ ಶೀಘ್ರವೇ ದೊರೆಯಲಿ.. ಜೈ..ಲು ಹೋ...ಗಲಿ ಎಂದು ಹಿಡಿಶಾಪ ಹಾಕೋಣ.

ಇದಿಷ್ಟು ರೆಡ್ಡಿಗಳ ಭ್ರಷ್ಟಾಚಾರದ ಅಂಕಿಅಂಶಗಳು.

ರಾಜ್ಯದಲ್ಲಿ ಬೇಲಿಯೇ ಎದ್ದು ಹೊಲ ಮೇಯ್ದ ಪರಿಸ್ಥಿತಿ ನಿರ್ಮಾಣವಾಗಿದೆ. ಮುಖ್ಯಮಂತ್ರಿಯಾಗಿದ್ದ ಯಡ್ಡಿ ಕೂಡ ರೆಡ್ಡಿಗಳಿಗಿಂತ ಏನೂ ಕಮ್ಮಿಯಿಲ್ಲ. ಯಡಿಯೂರಪ್ಪನವರ ಮೇಲೆ ಮೊದಲಿನಿಂದಲೂ ಡಿನೋಟಿಫಿಕೇಷನ್ ಹಗರಣ ತೂಗುಗತ್ತಿಯಾಗಿ ನೇತಾಡುತ್ತಲೇ ಇದೆ. ಅರಕೆರೆ, ದೇವರ ಚಿಕ್ಕನಹಳ್ಳಿ, ಗದ್ದಲಹಳ್ಳಿ (ಡಾಲರ್ಸ್ ಕಾಲನಿ), ರಾಚೇನಹಳ್ಳಿ, ಉತ್ತರಹಳ್ಳಿಗಳಲ್ಲಿ ಕೋಟ್ಯಂತರ ಬೆಲೆಯ 19 ಎಕರೆಗಳ ಡಿನೋಟಿಫಿಕೇಶನ್ ಹಗರಣ ಈಗಾಗಲೇ ರಾಜ್ಯದಲ್ಲಿ ಸುದ್ದಿಮಾಡಿರುವಂಥದ್ದು. ಅದೇ ರೀತಿ ಶಿವಮೊಗ್ಗ, ಹೊಸದುರ್ಗಗಳಲ್ಲಿ ಯಡಿಯೂರಪ್ಪ ತನ್ನ ಆಪ್ತ ಪ್ರವೀಣ್‌ಚಂದ್ರ ಎಂಬವನಿಗೆ 430 ಎಕರೆ ಭೂಮಿಯನ್ನು ಅಕ್ರಮವಾಗಿ ಮಂಜೂರು ಮಾಡಿರುವ ಆರೋಪವೂ ಯಡ್ಡಿ ಮೇಲೆ ಇದೆ. ತಮ್ಮ ಪ್ರೇರಣಾ ಶಿಕ್ಷಣ ಸಂಸ್ಥೆಗೆ ಹಾಗೂ ಮಕ್ಕಳು, ಅಳಿಯನ ಒಡೆತನದ ಧವಳಗಿರಿ ಪ್ರಾಪರ್ಟೀಸ್ ಕಂಪೆನಿಗೆ ಚೆಕ್‌ನಲ್ಲೇ ಹಣ ಸ್ವೀಕರಿಸಿರುವ ಪ್ರಕರಣಕ್ಕೆ ಸಂಬಂಧಿಸಿಯೂ ಯಡಿಯೂರಪ್ಪನವರ ಮೇಲೆ ಕೇಸು ದಾಖಲಾಗಿದೆ. ಕೇವಲ ಅವರೊಬ್ಬರೇ ಅಲ್ಲ, ಅವರೊಂದಿಗೆ ಆರೋಪಿ ಸ್ಥಾನದಲ್ಲಿ ಮಗ ಸಂಸದ ರಾಘವೇಂದ್ರ, ವಿಜಯೇಂದ್ರ, ಅಳಿಯ ಸೋಹನ್‌ಕುಮಾರ್, ಸೋದರ ಸಂಬಂಧಿಗಳಾದ ಅಕ್ಕಮಹಾದೇವಿ, ಮಹಾಬಲೇಶ್ವರ, ಕೆ.ಶಿವಪ್ಪ, ಕೆ.ಮಂಜುನಾಥ್ ಮುಂತಾದವರೂ ಇದ್ದಾರೆ. ಶಾಸಕ ಕೃಷ್ಣಯ್ಯ ಶೆಟ್ಟಿ, ಹೇಮಚಂದ್ರ ಸಾಗರ್ ಅವರ ಮೇಲೂ ಇದೇ ರೀತಿ ಆರೋಪ ಇದೆ.

ಇನ್ನೋರ್ವ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ಮೇಲೆ ಇರುವುದು ಎರಡು ಪ್ರಕರಣಗಳು. ಮೊದಲನೆಯದ್ದು ಜಂತಕಲ್ ಗಣಿ ಪರವಾನಗಿ ಪ್ರಕರಣ. ಈ ಪ್ರಕರಣದಲ್ಲಿ ಇವರೊಬ್ಬರನ್ನೇ ಆರೋಪಿಯನ್ನಾಗಿ ಹೆಸರಿಸಲಾಗಿದೆ. ಇನ್ನೊಂದು ಪ್ರಕರಣ ಗಿರಿನಗರದ ವಿಶ್ವಭಾರತಿ ಹೌಸಿಂಗ್ ಸೊಸೈಟಿಗೆ ಸಂಬಂಧಿಸಿದ್ದು. ಈ ಪ್ರಕರಣದಲ್ಲಿ ಕುಮಾರಸ್ವಾಮಿ ಅವರೊಂದಿಗೆ ಪತ್ನಿ ಅನಿತಾ ಕುಮಾರಸ್ವಾಮಿಯೂ ಆರೋಪಿಯಾಗಿದ್ದಾರೆ.

ನಿರೀಕ್ಷಣಾ ಜಾಮೀನಿಗಾಗಿ ಮಾಜಿ ಮುಖ್ಯಮಂತ್ರಿಗಳಿಬ್ಬರು ಕೋರ್ಟ್‌ಗೆ ಅರ್ಜಿ ಗುಜರಾಯಿಸುತ್ತಿದ್ದಾರೆ. ಜೈಲು ವಾಸ್ತವ್ಯಕ್ಕಾಗಿ ಕ್ಷಣಗಣನೆ ಎದುರಿಸುತ್ತಿರುವ ಇವರಿಬ್ಬರೂ ಅದರಿಂದ ಪಾರಾಗಲು ನಾನಾ ರೀತಿಯ ಕಸರತ್ತನ್ನೂ ನಡೆಸುತ್ತಿದ್ದಾರೆ. ಆದರೆ ಜನರ ನಿರೀಕ್ಷೆ, ಹಾರೈಕೆ ಭ್ರಷ್ಟಾಚಾರಿಗಳೆಲ್ಲ ಜೈಲು ಸೇರಬೇಕು, ಪ್ರಾಮಾಣಿಕ ಜನಪ್ರತಿನಿಧಿಗಳು ಮಾತ್ರ ಆಡಳಿತ ನಡೆಸಬೇಕು ಎಂಬುದಾಗಿದೆ. ಭ್ರಷ್ಟರ ಜೈಲು ವಾಸ್ತವ್ಯಕ್ಕೆ ಜೈ.. ಹೋ.. ಎನ್ನೋಣ.

# ಜೈ... ಹೋ... ಸಾಲಿನಲ್ಲಿ ನರೇಂದ್ರ ಮೋದಿ



●ಝಿಯಾವುಲ್ ಹಖ್ ಎಚ್.

ಯಡಿಯೂರಪ್ಪರವರ ಮುಕುಟವು ಲೋಕಾಯುಕ್ತರ ವರದಿಯ ಬಿರುಗಾಳಿಗೆ ತತ್ತರಿಸಿ ಹಾರಿ ಹೋಗಿರುವಂತೆ ಇದೀಗ ನರೇಂದ್ರ ಮೋದಿಯಲ್ಲೂ ಕೂಡ ಅಂತಹ ಆತಂಕದ ಛಾಯೆ ಮೂಡಿದೆ ಎನ್ನಬಹುದು. ಅವರು ಕೂಡ ಜೈ... ಹೋ... (ಜೈಲಿಗೆ ಹೋಗು) ಸಾಲಿನಲ್ಲಿ ಸೇರಿಕೊಂಡಿದ್ದಾರೆ. ಅರ್ಥಾತ್ ಇದೀಗ ಮೋದಿಯ ಗುಜರಾತ್‌ನಲ್ಲಿ ಲೋಕಾಯುಕ್ತರ ನೇಮಕವಾಗಿದೆ. ಸಾಮಾಜಿಕ ಕಳಕಳಿಯುಳ್ಳ ಮಾಜಿ ನ್ಯಾಯಮೂರ್ತಿ ಎರ್.ಎ. ಮೆಹ್ತಾ ಗುಜರಾತ್ ಲೋಕಾಯುಕ್ತರಾಗಿ ನೇಮಕವಾಗಿದ್ದಾರೆ.

ಸದಾ ಒಂದಿಲ್ಲೊಂದು ನೆಪವೊಡ್ಡಿ ಲೋಕಾಯುಕ್ತರ ನೇಮಕವನ್ನು ಮುಂದೂಡುತ್ತಲೇ ಬಂದಿದ್ದ ಮೋದಿ ಕೊನೆಗೂ ಲೋಕಾಯುಕ್ತರ ನೇಮಕಕ್ಕೆ ಆಸಕ್ತಿ ತೋರಿದರೇ? ಖಂಡಿತಾ ಇಲ್ಲ. ಇಲ್ಲಿ ಲೋಕಾಯುಕ್ತರನ್ನು ನೇಮಕ ಮಾಡಿದವರು ರಾಜ್ಯಪಾಲೆ ಡಾ.ಕಮಲಾ ಬೆನಿವಾಲ್. ಅದು ಕೂಡ ಮುಖ್ಯಮಂತ್ರಿ ನರೇಂದ್ರ ಮೋದಿಯೊಂದಿಗೆ ಸಮಾಲೋಚನೆ ನಡೆಸದೆಯೇ ಗುಜರಾತ್‌ನಲ್ಲಿ ಇಂಥದ್ದೊಂದು ಸಂವಿಧಾನಿಕ ಆಡಳಿತಕ್ಕೆ ಮುಂದಡಿಯಿಟ್ಟಿದ್ದಾರೆ.

ಗುಜರಾತ್‌ನ ಮುಖ್ಯಮಂತ್ರಿ ನರೇಂದ್ರ ಮೋದಿಗೆ ಲೋಕಾಯುಕ್ತರನ್ನು ನೇಮಕ ಮಾಡುವುದು ಕಿಂಚಿತ್ತೂ ಇಷ್ಟವಿಲ್ಲ. ಇದರಿಂದಾಗಿ ಕಳೆದ 8 ವರ್ಷಗಳಿಂದ ಇಲ್ಲಿ ಲೋಕಾಯುಕ್ತರ ನೇಮಕವೇ ನಡೆದಿಲ್ಲ. ಲೋಕಾಯುಕ್ತವನ್ನು ನೇಮಕ ಮಾಡಬೇಕೆಂಬ ಸೂಚನೆ ಬಂದರೂ ಒಂದಿಲ್ಲೊಂದು ಕಾರಣವನ್ನು ನೀಡಿ ಅದನ್ನು ಮುಂದೂಡುತ್ತಲೇ ಭ್ರಷ್ಟ ಸಾಮ್ರಾಜ್ಯವನ್ನು ಕಟ್ಟಿದವರು ಈ ಮೋದಿ. ಭ್ರಷ್ಟಾಚಾರವನ್ನು ಈ ದೇಶದಿಂದಲೇ ತೊಲಗಿಸಬೇಕು ಎಂದು ಜನಾಂದೋಲನ ನಡೆಯುತ್ತಿದ್ದರೆ, ಇಲ್ಲಿ ಲೋಕಾಯುಕ್ತವೆಂಬುದೇ ಇರಲಿಲ್ಲ. ಆದರೂ ಭ್ರಷ್ಟಾಚಾರ ನಿರ್ಮೂಲನೆಯ ಒಂದು ಭಾಗವಾಗಿ ಗುಜರಾತ್‌ನಲ್ಲಿ ಇದೀಗ ಲೋಕಾಯುಕ್ತರ ನೇಮಕವಾಗಿದೆ ಎಂದು ಭಾವಿಸಿಕೊಳ್ಳೋಣ.

ಗುಜರಾತ್‌ನಲ್ಲಿ ರಾಜ್ಯಪಾಲೆ ಲೋಕಾಯುಕ್ತರನ್ನು ನೇಮಕ ಮಾಡಿದ್ದಾರೆ ಎಂದು ಬಿಜೆಪಿಯು ರಂಪಾಟ ನಡೆಸುತ್ತಿದೆ. ಮಾತ್ರವಲ್ಲ, ರಾಜ್ಯಪಾಲೆ ಕಮಲಾ ಬೆನಿವಾಲ್‌ರನ್ನು ಹಿಂದಕ್ಕೆ ಕರೆಸಿಕೊಳ್ಳಬೇಕು ಎಂದು ಬಿಜೆಪಿಯು ಸಂಸತ್ ಕಲಾಪಕ್ಕೆ ಅಡ್ಡಿಪಡಿಸುತ್ತಿದೆ. ಇಲ್ಲಿ ಮುಖ್ಯವಾಗಿ ಉದ್ಭವಿಸುವ ಪ್ರಶ್ನೆಯೇನೆಂದರೆ ಅಣ್ಣಾ ಹಝಾರೆಯವರು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಿದಾಗ ಆರೆಸ್ಸೆಸ್‌ನ ಸಹ ಸಂಘಟನೆಗಳಾದ ಬಿಜೆಪಿ, ಎಬಿವಿಪಿಗಳು ಭ್ರಷ್ಟಾಚಾರ ವಿರೋಧಿ ಹೋರಾಟವನ್ನು ಏಕೆ ಬೆಂಬಲಿಸಿದ್ದವು? ಹೋರಾಟದಲ್ಲಿ ಈ ಸಂಘಟನೆಗಳ ಧ್ವಜಗಳು ಮನಸೋ ಇಚ್ಛೆ

*ನಿಜವಾಗಿಯೂ ಬಿಜೆಪಿಯು ಭ್ರಷ್ಟಾಚಾರ ವಿರೋಧಿಯಾಗಿದ್ದರೆ ಅದು ಗುಜರಾತ್‌ನಲ್ಲಿ ಲೋಕಾಯುಕ್ತರ ನೇಮಕವನ್ನು ಸ್ವಾಗತಿಸುತ್ತಿತ್ತು. ಏಕೆಂದರೆ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕಿದ್ದರೆ ಪ್ರತಿಯೊಂದು ರಾಜ್ಯದಲ್ಲೂ ಲೋಕಾಯುಕ್ತವು ಸಕ್ರಿಯವಾಗಿ ಹಾಗೂ ನಿಷ್ಪಕ್ಷಪಾತವಾಗಿ ಕಾರ್ಯಾಚರಿಸುತ್ತಿರಬೇಕು. ಡಿನೋಟಿಫಿಕೇಶನ್, ಭೂಹಗರಣ, ಭ್ರಷ್ಟಾಚಾರ ನಡೆಸಿದ ಕರ್ನಾಟಕದ ಮುಖ್ಯಮಂತ್ರಿಯನ್ನು ಅಧಿಕಾರದಿಂದ ಕೆಳಗಿಳಿಸಿದ್ದು ಇದೇ ಲೋಕಾಯುಕ್ತ ಎಂಬುದನ್ನು ನಾವು ಮರೆಯಬಾರದು. ಆದರೆ ಇದೀಗ ಬಿಜೆಪಿ ಮಾಡುತ್ತಿರುವುದೇನು? ಭ್ರಷ್ಟಾಚಾರವನ್ನು ನಿರ್ಮೂನೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವ ಲೋಕಾಯುಕ್ತರ ನೇಮಕವನ್ನೇ ಇದೀಗ ಪ್ರಶ್ನಿಸುತ್ತಿದೆ.*




ಹಾರಾಡುತ್ತಿದ್ದವು. ಅಣ್ಣಾರ ಹೋರಾಟದಲ್ಲಿ ತಾವು ಭ್ರಷ್ಟಾಚಾರ ವಿರೋಧಿ ಎಂದು ಬೊಗಳೆ ಬಿಡುತ್ತಿದ್ದ ಇವುಗಳು ಇದೀಗ ಕಳೆದ 8 ವರ್ಷಗಳಿಂದ ಅಸ್ತಿತ್ವದಲ್ಲಿರದ ಲೋಕಾಯುಕ್ತರ ನೇಮಕವಾದೊಡನೆ ಬೊಬ್ಬಿರಿಯಲು ಪ್ರಾರಂಭಿಸಿವೆ. ಇದರಿಂದಾಗಿ ಬಿಜೆಪಿಯು ಜನಾಂದೋಲನದ ಪ್ರಯೋಜನ ಪಡೆಯಲು ಹವಣಿಸಿದ್ದು ಇಲ್ಲಿ ಸ್ಪಷ್ಟವಾಗುತ್ತಿದೆ.

ನಿಜವಾಗಿಯೂ ಬಿಜೆಪಿಯು ಭ್ರಷ್ಟಾಚಾರ ವಿರೋಧಿಯಾಗಿದ್ದರೆ ಅದು ಗುಜರಾತ್‌ನಲ್ಲಿ ಲೋಕಾಯುಕ್ತರ ನೇಮಕವನ್ನು ಸ್ವಾಗತಿಸುತ್ತಿತ್ತು. ಏಕೆಂದರೆ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಬೇಕಿದ್ದರೆ ಪ್ರತಿಯೊಂದು ರಾಜ್ಯದಲ್ಲೂ ಲೋಕಾಯುಕ್ತವು ಸಕ್ರಿಯವಾಗಿ ಹಾಗೂ ನಿಷ್ಪಕ್ಷಪಾತವಾಗಿ ಕಾರ್ಯಾಚರಿಸುತ್ತಿರಬೇಕು. ಡಿನೋಟಿಫಿಕೇಶನ್, ಭೂಹಗರಣ, ಭ್ರಷ್ಟಾಚಾರ ನಡೆಸಿದ ಕರ್ನಾಟಕದ ಮುಖ್ಯಮಂತ್ರಿಯನ್ನು ಅಧಿಕಾರದಿಂದ ಕೆಳಗಿಳಿಸಿದ್ದು ಇದೇ ಲೋಕಾಯುಕ್ತ ಎಂಬುದನ್ನು ನಾವು ಮರೆಯಬಾರದು. ಆದರೆ ಇದೀಗ ಬಿಜೆಪಿ ಮಾಡುತ್ತಿರುವುದೇನು? ಭ್ರಷ್ಟಾಚಾರವನ್ನು ನಿರ್ಮೂನೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುವ ಲೋಕಾಯುಕ್ತರ ನೇಮಕವನ್ನೇ ಇದೀಗ ಪ್ರಶ್ನಿಸುತ್ತಿದೆ.

ಅಂದ ಹಾಗೆ ಬಿಜೆಪಿಯು ಲೋಕಾಯುಕ್ತರನ್ನು ನೇಮಕ ಮಾಡಿದ ಗುಜರಾತ್ ರಾಜ್ಯಪಾಲೆಯ ಕ್ರಮ ಸರಿಯಲ್ಲ ಎಂದು ವಾದಿಸುತ್ತಿದ್ದರೆ, 1986ರ ಗುಜರಾತ್ ಲೋಕಾಯುಕ್ತ ಕಾಯ್ದೆಯು ವಿಧಾನಸಸಭೆಯ ಪ್ರತಿಪಕ್ಷ ನಾಯಕ ಹಾಗೂ ಗುಜರಾತ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯ ಸಮಾಲೋಚನೆಯೊಂದಿಗೆ ರಾಜ್ಯಪಾಲರಿಗೆ ಲೋಕಾಯುಕ್ತರನ್ನು ನೇಮಿಸುವ ಅಧಿಕಾರವನ್ನು ನೀಡಿದೆ ಎಂಬುದನ್ನು ಕಾಂಗ್ರೆಸ್ ವಾದಿಸುತ್ತಿದೆ. ಬಿಜೆಪಿ ಪಕ್ಷವು ರಾಜ್ಯಪಾಲೆಯ ಕ್ರಮವು ಸರಿಯಲ್ಲ ಎನ್ನುವುದರ ಹಿಂದೆ ಕಳೆದ ಎಂಟು ವರ್ಷಗಳಿಂದ ಲೋಕಾಯುಕ್ತರನ್ನೇ ನೇಮಕ ಮಾಡದ ನರೇಂದ್ರ ಮೋದಿಯ ಕ್ರಮವನ್ನು ಸರಿ ಎಂದು ಪರೋಕ್ಷವಾಗಿ ಸಮರ್ಥಿಸುವ ತಂತ್ರವು ಅಡಗಿದೆ. ಭ್ರಷ್ಟಾಚಾರ ವಿರೋಧಿ ಹೋರಾಟದಲ್ಲಿ ಪಾಲ್ಗೊಂಡಿದ್ದ ಬಿಜೆಪಿ, ಇದೀಗ ಲೋಕಾಯುಕ್ತರ ನೇಮಕವನ್ನು ಪ್ರಶ್ನಿಸುತ್ತಿರುವುದು ಅದರ ನೈತಿಕತೆಯನ್ನು ಪ್ರಶ್ನಿಸುವಂತೆ ಮಾಡಿದೆ.

ಅಂದ ಹಾಗೆ ಗುಜರಾತ್‌ನ ಮೋದಿ ಸರಕಾರದ ವಿರುದ್ಧ ಸಂಪೂರ್ಣ ವಿವರಗಳನ್ನೊಳಗೊಂಡಿರುವ ಒಟ್ಟು 17 ಹಗರಣಗಳ ಪಟ್ಟಿಯನ್ನು ರಾಜ್ಯಪಾಲೆ ಡಾ. ಕಮಲಾ ಬೆನಿವಾಲ್ ಹಾಗೂ ರಾಷ್ಟ್ರಾಧ್ಯಕ್ಷೆಗೆ ಸಲ್ಲಿಸಲಾಗಿದೆ. ಸ್ವತಂತ್ರ ತನಿಖಾ ಆಯೋಗವು ಇದರ ತನಿಖೆಯನ್ನು ನಡೆಸಬೇಕೆಂದೂ ಒತ್ತಾಯಿಸಲಾಗಿದೆ. ಮೋದಿ ಸರಕಾರದ ವಿರುದ್ಧ ಸಲ್ಲಿಸಲಾಗಿರುವ 17 ಹಗರಣಗಳ ಪಟ್ಟಿಯನ್ನು ನಾವು ಗಮನಿಸಬೇಕಾಗುತ್ತದೆ.

ನ್ಯಾನೋ ಕಂಪೆನಿಗೆ ಅತಿ ಕಡಿಮೆ ಬೆಲೆಯಲ್ಲಿ ಭೂಮಿಯನ್ನು ಕೊಡಲಾಗಿದೆ. ಅಂದರೆ ಸನಂದ್ ಸಮೀಪದ 1100 ಎಕರೆ ಭೂಮಿಯನ್ನು ಟಾಟಾ ಮೋಟಾರ್ಸ್ ಕಂಪೆನಿಗೆ ಸರಕಾರವು ಹಂಚಿದೆ. ಈ ಭೂಮಿಯನ್ನು ಪ್ರತಿ ಸ್ಕ್ವಾರ್ ಮೀಟರ್‌ಗೆ ರೂ. 900 ಮಾರಾಟ ಮಾಡಲಾಗಿದೆ. ಆದರೆ ಇದರ ಮಾರುಕಟ್ಟೆ ಬೆಲೆ ಸ್ಕ್ವಾರ್ ಮೀಟರ್‌ಗೆ ಸುಮಾರು ರೂ. 10000 ರಷ್ಟಿದೆ.

ಇದರಿಂದಾಗಿ ಗುಜರಾತ್ ಸರಕಾರವು ಟಾಟಾ ಮೋಟಾರ್ಸ್‌ಗೆ ಒಟ್ಟು ರೂ. 33,000 ಕೋಟಿ ಹಣಕಾಸಿನ ಪ್ರಯೋಜನ ನೀಡಿದಂತಾಗಿದೆ.

ಮುಂಡ್ರಾ ಬಂದರು ಮತ್ತು ಮುಂಡ್ರಾ ವಿಶೇಷ ಆರ್ಥಿಕ ವಲಯಕ್ಕಾಗಿ ಅದನಿ ಗ್ರೂಪ್‌ಗೆ ಅತಿ ಕಡಿಮೆ ಬೆಲೆಗೆ ಭೂಮಿ ಮಾರಾಟ ಮಾಡಲಾಗಿದೆ. ಅಂದರೆ ಪ್ರತಿ ಸ್ಕ್ವಾರ್ ಮೀಟರ್‌ಗೆ ರೂ. 1ರಂತೆ ನೀಡಲಾಗಿದೆ.



A partial view of the steel plant at Hazira, Gujarat

ಗುಜರಾತ್ ಸರಕಾರವು ರಿಯಲ್ ಎಸ್ಟೇಟ್ ಉದ್ಯಮಿ ಕೆ.ರಹೇಜಾಗೆ 3,76,561 ಸ್ಕ್ವಾರ್ ಮೀಟರ್ ಭೂಮಿಯನ್ನು ನೀಡಿದೆ. ಈ ಭೂಮಿಯನ್ನು ಪ್ರತಿ ಸ್ಕ್ವಾರ್ ಮೀಟರ್‌ಗೆ ರೂ. 470ರಂತೆ ನೀಡಿದೆ. ಅದೇ ಸಂದರ್ಭ ಸೌತ್-ವೆಸ್ಟ್ ಏರ್ ಕಮಾಂಡ್ (ಎಸ್‌ಡಬ್ಲ್ಯೂಎಸಿ)ಗೆ 4,04, 700 ಸ್ಕ್ವಾರ್ ಮೀಟರ್ ಭೂಮಿಯನ್ನು ರೂ. 1100ಗೆ ನೀಡಿತ್ತು.

ಸರಕಾರವು ಸೂರತ್‌ನಿಂದ ಚತ್ರಾಲಾವರೆಗಿನ ನವ್‌ಸಾರಿ ಕೃಷಿ ವಿಶ್ವವಿದ್ಯಾನಿಲಯದ 65,000 ಸ್ಕ್ವಾರ್ ಮೀಟರ್ ಭೂಮಿಯನ್ನು ಈ ವಿಶ್ವವಿದ್ಯಾನಿಲಯದ ವಿರೋಧದ ನಡುವೆಯೂ ಇಂಡಿಯನ್ ಹೋಟೇಲ್ ಗ್ರೂಪ್‌ನ ಹೋಟೇಲ್ ಪ್ರಾಜೆಕ್ಟ್‌ಗೆ ನೀಡಿತ್ತು. ಇದನ್ನು ಮುಖ್ಯಮಂತ್ರಿಯ ವರು ತಮ್ಮ ಕಚೇರಿಯನ್ನು ಬಳಸಿ ಮಧ್ಯವರ್ತಿಗೆ ವಹಿಸಿದ್ದರು. ಇದರಿಂದಾಗಿ ರೂ. 426 ನಷ್ಟ ಉಂಟಾಗಿದೆ.

ಪಾಕಿಸ್ತಾನದ ಗಡಿಯ ಸಮೀಪದಲ್ಲಿರುವ ಸುಮಾರು ವಿಶಾಲವಾದ ಭೂಮಿಯನ್ನು ಬಿಜೆಪಿ ಮುಖಂಡ ವೆಂಕಯ್ಯ ನಾಯ್ಡುರವರ ಆಪ್ತರೊಬ್ಬರ ಉಪ್ಪು ರಸಾಯನ ಕಂಪೆನಿಗೆ ನೀಡಲಾಗಿದೆ.

ಸರಕಾರವು 2.8ಲಕ್ಷ ಸ್ಕ್ವಾರ್ ಮೀಟರ್ ಭೂಮಿಯನ್ನು ಎಸ್ಸಾರ್ ಸ್ಟೀಲ್‌ಗೆ ಹಂಚಿದೆ. ಈ ವಿವಾದಿತ ಭೂಮಿಯು ಸಿಆರ್‌ಝೆಡ್ ಮತ್ತು ಅರಣ್ಯ ಪ್ರದೇಶಕ್ಕೊಳಪಟ್ಟಿದ್ದು, ಅದನ್ನು ಯಾರಿಗೂ ಹಂಚಿಕೆ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಆದೇಶಿಸಿತ್ತು.

ಅಹ್ಮದ್‌ಬಾದ್‌ನ ಸರ್ಕೆಜ್- ಗಾಂಧಿನಗರ ಹೆದ್ದಾರಿಯಲ್ಲಿ ದೊಡ್ಡ ಮಟ್ಟದ ಭೂಮಿಯನ್ನು ಭಾರತ್ ಹೋಟೇಲ್‌ಗೆ ಯಾವುದೇ ಹರಾಜು ಇಲ್ಲದೆ ಹಂಚಲಾಗಿತ್ತು.

ರಾಜ್ಯ ಸರಕಾರವು 2008ರಲ್ಲಿ ಯಾವುದೇ ಟೆಂಡರ್ ಅಥವಾ ಹರಾಜು ಕರೆಯದೆ 38 ಸಾಗರಗಳಲ್ಲಿ ಮೀನುಗಾರಿಕೆ ಚಟುವಟಿಕೆಗಳನ್ನು ನಡೆಸಲು ಗುತ್ತಿಗೆಯನ್ನು ನೀಡಿತ್ತು. ಬಿಡ್ಡರ್‌ಗಳು ಪ್ರತಿ ಸಾಗರಕ್ಕೆ ರೂ. 25 ಲಕ್ಷವನ್ನು ನೀಡುವುದಕ್ಕಾಗಿ ಸಿದ್ಧರಿದ್ದರೂ ಯಾವುದೇ ಟೆಂಡರ್ ಕರೆಯಲಾಗಿಲ್ಲ.

ಲಾರ್ಸನ್ ಮತ್ತು ಟಾಬ್ರೋ (ಎಲ್ ಆ್ಯಂಡ್ ಟಿ) ಕಂಪೆನಿಗೆ ಹಝೀರಾದಲ್ಲಿ ಪ್ರತಿ ಸ್ಕ್ವಾರ್ ಮೀಟರ್‌ಗೆ ರೂ. 1 ರಂತೆ 80 ಹೆಕ್ಟೇರ್ ಭೂಮಿಯನ್ನು ಹಂಚಲಾಗಿತ್ತು.

ಗುಜರಾತ್‌ನ ಪ್ರಮುಖ ನಗರಗಳಲ್ಲಿರುವ ಭೂಮಿಗಳನ್ನು ದೊಡ್ಡ ಪ್ರಮಾಣದ ಭೂಮಿಗಳನ್ನು ಹರಾಜು ಮಾಡುವ ಬದಲು ಗುಜರಾತ್ ಜಾಗತಿಕ ಹೂಡಿಕೆದಾರರ ಸಮಾವೇಶ (ವಿಜಿಜಿಐಸ್) ಸಹಿ ಹಾಕಿದ್ದ ಕೆಲವು ಕೈಗಾರಿಕಾ ಮತ್ತು ಕೈಗಾರಿಕೋದ್ಯಮಿಗಳಿಗೆ ಹಂಚಲಾಗಿತ್ತು.

ಗುಜರಾತ್ ಸರಕಾರವು ಕಪ್ಪು ಪಟ್ಟಿಯಲ್ಲಿದ್ದ ಕಂಪೆನಿಯೊಂದರಿಂದ 5 ಕೆ.ಜಿ. ಗೋವಿನ ಆಹಾರವನ್ನು ರೂ.240ಗೆ ಖರೀದಿಸಿತ್ತು. ಆದರೆ ಅದರ ಬೆಲೆ 5 ಕೆ.ಜಿ.ಗೆ ರೂ. 120ರಿಂದ 140 ಆಗಿತ್ತು.

ರೂ. 4933.50 ಕೋಟಿ ಹೂಡಿಕೆ ಮಾಡಿರುವುದರ ಹೊರತಾಗಿಯೂ ಗುಜರಾತ್ ಸ್ಟೇಟ್ ಪೆಟ್ರೋಲಿಯಂ

2nd Floor,
Saibeen Complex,
Lalbagh, **Mangalore-4**
**Ph : 0824-2452998**

casual wear
the menz shoppe
email : cwear_1999@hotmail.com

B.J.M.Complex,
**Moodbidri**
**Cell : 9916820707**

ಕಾರ್ಪೊರೇಶನ್ (ಜಿಎಸ್‌ಪಿಸಿ)ಯು ರೂ. 290 ಕೋಟಿಗಳಿಗೆ 51 ಬ್ಲಾಕ್‌ಗಳಲ್ಲಿ 13 ಬ್ಲಾಕ್ ಎಣ್ಣೆ ಮತ್ತು ಗ್ಯಾಸ್‌ನ್ನು ಪಡೆಯಲು ಯಶಸ್ವಿಯಾಗಿದೆ. ಲಾಭದ ಹಂಚಿಕೆಗೆ ಮೇಲಾಗಿ ಜಿಯೋ-ಗ್ಲೋಬಲ್ ಅಧಿಕ ಶುಲ್ಕವನ್ನು ಪಡೆಯಬೇಕಾಗಿರುವುದರಿಂದ ಜಿಯೋ-ಗ್ಲೋಬಲ್ ಮತ್ತು ಜಿಎಸ್‌ಪಿಸಿ ಗುತ್ತಿಗೆ ಸಂಬಂಧವು ತನಿಖೆಗೆ ಅರ್ಹವಾಗಿದೆ.

ಕಳೆದ 5 ವರ್ಷಗಳಲ್ಲಿ ಮಾಡಿದ ಸುಮಾರು 200 ಪ್ರವಾಸಗಳಿಗೆ ಮುಖ್ಯಮಂತ್ರಿ ನರೇಂದ್ರ ಮೋದಿ ವಾಣಿಜ್ಯ ವಿಮಾನ ಅಥವಾ ರಾಜ್ಯ ಮಾಲಕತ್ವದ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಬಳಸುವ ಬದಲು ಖಾಸಗಿ ಆಡಂಭರದ ವಿಮಾನಗಳನ್ನು ಬಳಸಿದ್ದಾರೆ. ಇದರ ವೆಚ್ಚವನ್ನು ಫಲಾನುಭವಿ ಕೈಗಾರಿಕೋದ್ಯಮಿಗಳು ಭರಿಸುತ್ತಿದ್ದಾರೆ.



ಗುಜರಾತ್‌ನ ನೂತನ ಲೋಕಾಯುಕ್ತ ನ್ಯಾ.ಆರ್.ಎ.ಮೆಹ್ತಾ

2003ರಲ್ಲಿ ಪ್ರಕಟಿಸಲಾದ ರೂ. 6237.33 ಕೋಟಿ ವೆಚ್ಚದ ಸುಜಲಂ ಸುಫಲಂ ಯೋಜನೆ(ಎಸ್‌ಎಸ್‌ವೈ)ಯು 2005ರೊಳಗೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ ಅದು ಇನ್ನೂ ಪೂರ್ಣಗೊಂಡಿಲ್ಲ. ರೂ. 500 ಕೋಟಿ ಹಗರಣ ನಡೆದಿದೆ ಎಂದು ಗುಜರಾತ್ ವಿಧಾನಸಭೆಯ ಸಾರ್ವಜನಿಕ ಲೆಕ್ಕಪತ್ರ ಸಮಿತಿಯು ಸಿದ್ಧಪಡಿಸಿದ ಒಮ್ಮತಾಭಿಪ್ರಾಯದ ವರದಿಯು ಇನ್ನೂ ಅಧಿವೇಶನದಲ್ಲಿ ಮಂಡಿಸಲಾಗಿಲ್ಲ.

ಇಂಡಿಗೋಲ್ಡ್ ರಿಫೈನರಿ ಕಂಪೆನಿಯು ಕುಚ್ ಜಿಲ್ಲೆಯ ಸುಮಾರು 36.25 ಎಕರೆ ಕೃಷಿ ಭೂಮಿಯನ್ನು ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ಖರೀದಿಸಿದೆ ಮತ್ತು ಮಾರಾಟ ಮಾಡಿದೆ.

ಯಾವುದೇ ಟೆಂಡರ್‌ಗಳನ್ನು ಕರೆಯದೆ ಗುಜರಾತ್ ಸ್ಟೇಟ್ ಪೆಟ್ರೋಲಿಯಂ ಕಾರ್ಪೊರೇಶನ್ (ಜಿಎಸ್‌ಪಿಸಿ)ಯ ಪಿಪವವ್ ಪವರ್ ಸ್ಟೇಷನ್‌ನ ಶೇ.49 ಷೇರನ್ನು ಸ್ವಾನ್ ಎನರ್ಜಿಗೆ ಮಾರಾಟ ಮಾಡಲಾಗಿದೆ. ಇವಿಷ್ಟು ಗುಜರಾತ್ ರಾಜ್ಯಪಾಲೆ ಮತ್ತು ರಾಷ್ಟ್ರಾಧ್ಯಕ್ಷೆಗೆ ಸಲ್ಲಿಸಲಾಗಿರುವ ಗುಜರಾತ್ ಸಾಮ್ರಾಜ್ಯದ ಕರ್ಮಕಾಂಡ.

ಗುಜರಾತ್‌ನಲ್ಲಿ ಎಷ್ಟೇ ದೊಡ್ಡದ ಮಟ್ಟದ ಭ್ರಷ್ಟಾಚಾರ ನಡೆದರೂ ಅದು ಹೊರ ಜಗತ್ತಿಗೆ ಸುದ್ದಿಯಾಗುವುದೇ ಇಲ್ಲ. ಏಕೆಂದರೆ ಅಲ್ಲಿ ಲೋಕಾಯುಕ್ತ ಅಸ್ತಿತ್ವದಲ್ಲಿಯೇ ಇಲ್ಲ. ಬಹುಶಃ ಮುಖ್ಯಮಂತ್ರಿ ನರೇಂದ್ರ ಮೋದಿ ಗುಜರಾತ್‌ನಲ್ಲಿ ಇಷ್ಟೆಲ್ಲಾ ಹಗರಣಗಳನ್ನು ನಡೆಸಿರುವುದರಿಂದಲೇ ಪ್ರತಿಯೊಂದು ಬಾರಿ ಆದೇಶ ಬಂದಾಗಲೂ ಲೋಕಾಯುಕ್ತರ ನೇಮಕವನ್ನು ಮುಂದೂಡುತ್ತಲೇ ಬಂದಿರುವುದು. ಒಂದು ವೇಳೆ ಮೋದಿಯು ಈ ಹಗರಣಗಳಲ್ಲಿ ಭಾಗಿಯಾಗುವುದು ಸಾಬೀತಾದರೆ ಭ್ರಷ್ಟಾಚಾರದಲ್ಲಿ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪರನ್ನು ಕೂಡ ಮೀರಿಸಬಹುದು.

ಇದೀಗ ಆರ್.ಎ.ಮೆಹ್ತಾರನ್ನು ಲೋಕಾಯುಕ್ತರನ್ನಾಗಿ ನೇಮಕ ಮಾಡಿರುವುದು ಮುಖ್ಯಮಂತ್ರಿ ಮೋದಿಯ ನಿದ್ದೆಗೆಡಿಸಿರುವುದಂತೂ ಸತ್ಯ. ಏಕೆಂದರೆ ಮೆಹ್ತಾರವರು ಮೋದಿಯ ಜನವಿರೋಧಿಯ ಆಡಳಿತ ವ್ಯವಸ್ಥೆಯ ಧ್ವನಿ ಎತ್ತಿದವರು. ಹಾಗೆಯೇ 14 ವರ್ಷಗಳ ಕಾಲ ಹೈಕೋರ್ಟ್ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರುವ ಅವರು, ಪ್ರಾಮಾಣಿಕತೆ




ಮತ್ತು ಬಡ ಜನರ ಕರುಣೆಗೆ ಹೆಸರುವಾಸಿಯಾಗಿದ್ದಾರೆ. 1976ರಲ್ಲಿ ಮೋರ್ವಿ ಅಣೆಕಟ್ಟು ದುರಂತ(ಸ್ವತಂತ್ರ ಭಾರತದಲ್ಲಿ ಸಂಭವಿಸಿದ ಭೀಕರ ಪ್ರವಾಹ) ಸಂದರ್ಭ ಇವರು ತನಿಖಾ

***ಇನ್ನು ಬಿಜೆಪಿ ಯಾಕೆ ಗುಜರಾತ್‌ನಲ್ಲಿ ಲೋಕಾಯುಕ್ತರ ನೇಮಕವನ್ನು ವಿರೋಧಿಸುತ್ತಿದೆ ಎಂದರೆ, ಗುಜರಾತ್ ಮೋದಿ ಪ್ರಭಾವವಿರುವ ರಾಜ್ಯವಾಗಿದೆ. ಇಲ್ಲಿ ಬಿಜೆಪಿ ಪಕ್ಷವು ಬಲಿಷ್ಠವಾಗಿದೆ. ಕರ್ನಾಟಕದಲ್ಲಿ ಲೋಕಾಯುಕ್ತರು ಬೀಸಿದ ದೊಣ್ಣೆಗೆ ಯಡಿಯೂರಪ್ಪರವರು ಗುರಿಯಾದಂತೆ ಗುಜರಾತ್‌ನಲ್ಲೂ ಕೂಡ ನರೇಂದ್ರ ಮೋದಿಯ ಮುಕುಟವೂ ಹಾರಿ ಹೋಗಲಿದೆ. ಇದು ಕೇವಲ ನರೇಂದ್ರ ಮೋದಿಗೆ ಆಗುವ ನಷ್ಟವಲ್ಲ. ಬದಲಾಗಿ ಇಡೀ ಬಿಜೆಪಿ ಪಕ್ಷಕ್ಕೆ ಭಾರೀ ನಷ್ಟವಾಗಲಿದೆ.***

ಆಯೋಗಕ್ಕೆ ನೆರವಾಗಿದ್ದರು. 1976ರಲ್ಲಿ ನೇಮಕವಾಗಿದ್ದ ಇವರು 1998ರಲ್ಲಿ ನಿವೃತ್ತಿ ಹೊಂದಿದರು. ಅವರ ಹೆಚ್ಚಿನ ಮಹತ್ವ ತೀರ್ಪುಗಳಲ್ಲಿ ಗುಜರಾತ್‌ನಲ್ಲಿ ಜೀವಂತವಾಗಿದ್ದ ದಲಿತರಿಂದ ಮಲಹೊರಿಸುವ ಪದ್ಧತಿಯನ್ನು ನಿರ್ಮೂಲನೆಗೊಳಿಸಿರುವುದು ಪ್ರಮುಖವಾದದ್ದು. ನಗರಪಾಲಿಕೆಯಿಂದ ಬೀದಿಬದಿ ವ್ಯಾಪಾರಿಗಳಿಗಾಗುತ್ತಿದ್ದ ಕಿರುಕುಳವನ್ನು ತಪ್ಪಿಸಿದರು. ಮೇಲ್ಜಾತಿಯ ರಜಪೂತರಿಂದ ನಾಲ್ವರು ದಲಿತರು ಹತ್ಯೆಯಾಗಿದ್ದ ಗೋಲ್ನಾ ಹತ್ಯಾಕಾಂಡದ ಆರೋಪಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದರು.

ಜಾತಿ ಹಾಗೂ ಕೋಮು ಉದ್ವಿಗ್ನ ಪರಿಸ್ಥಿತಿಗಳಲ್ಲಿ ಹೇಗೆ ವರ್ತಿಸಬೇಕೆಂದು ಅವರು ಪೊಲೀಸರಿಗೆ ಹಾಗೂ ಸರಕಾರಕ್ಕೆ ಮಾರ್ಗದರ್ಶನ ನೀಡುತ್ತಿದ್ದರು. 2006ರಲ್ಲಿ ಸಂಭವಿಸಿದ್ದ ನೆರೆ ಸಂತ್ರಸ್ತರ ಪರಿಹಾರ ಕಾರ್ಯಾಚರಣೆಯಲ್ಲಿ ನಡೆದಿರುವ ವೈಫಲ್ಯಕ್ಕೆ ಮೋದಿ ಸರಕಾರದ ಪ್ರಮುಖ ಸಚಿವರ ನರೋತ್ತಮ್ ಪಟೇಲ್‌ರನ್ನು ದೋಷಿಯನ್ನಾಗಿಸಿದರು. ಇಂತಹ ಹತ್ತು ಹಲವು ಜನಪರವಾದ ಕ್ರಮಗಳನ್ನು ಆರ್.ಎ.ಮೆಹ್ತಾ ತೆಗೆದುಕೊಂಡಿದ್ದಾರೆ. ಪ್ರಮುಖವಾಗಿ ನರೇಂದ್ರ ಮೋದಿಯ ಜನವಿರೋಧಿ ಕಾರ್ಯಗಳನ್ನು ಇವರು ಟೀಕಿಸುತ್ತಲೇ ಬಂದಿದ್ದರು. ಹೀಗೆ ಆರ್.ಎ. ಮೆಹ್ತಾ ಇದೀಗ ಲೋಕಾಯುಕ್ತರಾಗಿ ಆಯ್ಕೆಯಾಗಿರುವುದರಿಂದ ಮುಖ್ಯಮಂತ್ರಿ ಮೋದಿ ಚಡಪಡಿಸುತ್ತಲೇ ಇರುವಂತೆ ಮಾಡಿದೆ.

ಇನ್ನು ಬಿಜೆಪಿ ಯಾಕೆ ಗುಜರಾತ್‌ನಲ್ಲಿ ಲೋಕಾಯುಕ್ತರ ನೇಮಕವನ್ನು ವಿರೋಧಿಸುತ್ತಿದೆ ಎಂದರೆ, ಗುಜರಾತ್ ಮೋದಿ ಪ್ರಭಾವವಿರುವ ರಾಜ್ಯವಾಗಿದೆ. ಇಲ್ಲಿ ಬಿಜೆಪಿ ಪಕ್ಷವು ಬಲಿಷ್ಠವಾಗಿದೆ. ಕರ್ನಾಟಕದಲ್ಲಿ ಲೋಕಾಯುಕ್ತರು ಬೀಸಿದ ದೊಣ್ಣೆಗೆ ಯಡಿಯೂರಪ್ಪರವರು ಗುರಿಯಾದಂತೆ ಗುಜರಾತ್‌ನಲ್ಲೂ ಕೂಡ ನರೇಂದ್ರ ಮೋದಿಯ ಮುಕುಟವೂ ಹಾರಿ ಹೋಗಲಿದೆ. ಇದು ಕೇವಲ ನರೇಂದ್ರ ಮೋದಿಗೆ ಆಗುವ ನಷ್ಟವಲ್ಲ. ಬದಲಾಗಿ ಇಡೀ ಬಿಜೆಪಿ ಪಕ್ಷಕ್ಕೆ ಭಾರೀ ನಷ್ಟವಾಗಲಿದೆ.

ಗುಜರಾತ್ ನರಹಂತಕರ ರಾಜ್ಯ ಎಂದು ಈಗಾಗಲೇ ವಿಶ್ವಾದ್ಯಂತ ಕುಖ್ಯಾತಿ ಪಡೆದಿದೆ. ಮೋದಿಯ ಮೇಲೆ 2002ರಲ್ಲಿ ನಡೆದ ಅಮಾಯಕರ ಹತ್ಯೆಯ ತೂಗುಗತ್ತಿ ಇನ್ನೂ ನೇತಾಡುತ್ತಿದೆ. ನರಹಂತಕರಿಗೆ ಬೆನ್ನೆಲುಬಾಗಿ ನಿಂತಿರುವ ಗುಜರಾತ್ ಮುಖ್ಯಮಂತ್ರಿ ಮೋದಿಯೂ ಜೈ... ಹೋ...ಗಳ ಸಾಲಿನಲ್ಲಿ ಸೇರಲಿದ್ದಾರೆ. ಆದರೆ ಮೋದಿಯು ನಡೆಸಿದಂತಹ ನರಹತ್ಯೆಗಳ ತ್ವರಿತ ತನಿಖೆ ಮತ್ತು ಆತನ ಮೇಲಿರುವ ಭ್ರಷ್ಟಾಚಾರ ಪ್ರಕರಣಗಳ ಸಮರ್ಪಕ ತನಿಖೆಗಳು ನಡೆದರೆ ಮಾತ್ರ ಶೀಘ್ರವೇ ಮೋದಿ ಕಟ್ಟಿರುವ ಸಾಮ್ರಾಜ್ಯ ಕುಸಿದುಬೀಳಲಿದೆ. ಈ ನಿಟ್ಟಿನಲ್ಲಿ ಗುಜರಾತ್ ಲೋಕಾಯುಕ್ತರಾಗಿ ನೇಮಕಗೊಂಡಿರುವ ಆರ್.ಎ.ಮೆಹ್ತಾ ಹೊಸ ಭರವಸೆಯನ್ನು ಮೂಡಿಸಿದ್ದಾರೆ.



# ಮೀನಾ ಪ್ರಕರಣ ಹಾಗೂ ಮಾಧ್ಯಮ ತಾರತಮ್ಯ

●ಆಯಿಷಾ ಬಿ.

ಜಸ್ಸಿಕಾಲಾಲ್ ಪ್ರಕರಣವನ್ನು ಕೈಗೆತ್ತಿಕೊಂಡ ಮುಖ್ಯವಾಹಿನಿ ಮಾಧ್ಯಮಗಳು ಮೀನಾ ಖಾಲ್ಖೊರ ಪ್ರಕರಣವನ್ನೇಕೆ ತಿರಸ್ಕರಿಸಿತು? ಆಕೆಯ ರಾಜಕೀಯ ಪರಿಸ್ಥಿತಿ ಅಥವಾ ಜಾತಿ ಅಥವಾ ವರ್ಗವು ಇದಕ್ಕೆ ಅಡ್ಡಿಯಾಯಿತೇ? ಪ್ರಸ್ತುತ ಮಾಧ್ಯಮಗಳು ಚಿತ್ರ ನಟ ದರ್ಶನ್ ತನ್ನ ಪತ್ನಿಯ ಮೇಲೆ ನಡೆಸಿದ ಹಲ್ಲೆಯ ಬಗ್ಗೆ ಆಸಕ್ತಿದಾಯಕ ಸುದ್ದಿಗಳನ್ನು ಬಿತ್ತರಿಸುತ್ತಿವೆ. ಇದೇ ಮಾಧ್ಯಮಗಳಲ್ಲಿ ಮೀನಾ ಖಾಲ್ಖೊಗೆ ಅಲ್ಪವಾದರೂ ಸ್ಥಳ ದೊರೆತಿದೆಯೇ?




16ರ ಹರೆಯದ ಮೀನಾ ಖಾಲ್ಖೊ ಬಿಜೆಪಿ ಆಡಳಿತವಿರುವ ಛತ್ತೀಸ್‌ಗಢದ ಕಾರ್ಕಾ ಗ್ರಾಮದವಳು. ಮೀನಾಳನ್ನು ಜುಲೈ 6ರಂದು ಸ್ಥಳೀಯ ಪೊಲೀಸರು ಅತ್ಯಾಚಾರಗೈದು ಕೊಂದು ಹಾಕಿದರು. ಆದರೆ ಈ ಸುದ್ದಿಯು ಪತ್ರಿಕೆಗಳಲ್ಲಿ ಹೆಚ್ಚಿನ ಸ್ಥಳ ಪಡೆದುಕೊಳ್ಳಲು ವಿಫಲವಾಗುತ್ತದೆ. ಟೆಲಿವಿಶನ್ ನ್ಯೂಸ್ ವೆಬ್‌ಸೈಟ್‌ಗಳಲ್ಲಿ ಆಕೆಯ ಹೆಸರನ್ನು ಹುಡುಕಿದರೆ ನಿಮಗೆ ಉತ್ತರ ಶೂನ್ಯವಾಗಿರಬಹುದು. ಭಾರತದ ಸಮಸ್ಯೆಗಳ ಬಗ್ಗೆ ಜನರು ಆತ್ಮವಿಮರ್ಶೆಯನ್ನು ಆರಂಭಿಸಿರುವ ಈ ಹೊತ್ತಿನಲ್ಲಿ ಸಂಭವಿಸಿರುವ ಈ ಘಟನೆಯು ಯಾವುದೇ ಮಾಧ್ಯಮಗಳ ಗಮನವನ್ನು ಸೆಳೆದಿಲ್ಲ.

ಮೀನಾ ಹತ್ಯೆಯ ಕೂಡಲೇ ಪೊಲೀಸರು ತಮ್ಮ ಸಾಂಪ್ರದಾಯಿಕ ತಂತ್ರಗಳನ್ನು ಬಳಸಿಕೊಂಡು ಅದನ್ನು ಮುಚ್ಚಿಹಾಕಿದರು.ಪೊಲೀಸರು ನಡೆಸಿದ ಯಾವುದೇ ದೌರ್ಜನ್ಯದ ವಿರುದ್ಧ ಏಳುವ ಎಂತಹ ಅಸಮಾಧಾನವನ್ನೂ ತಣ್ಣನೆಗೊಳಿಸುವ 'ನಕ್ಸಲೈಟರ ವಿರುದ್ಧದ ಕಾರ್ಯಾಚರಣೆ' ಎನ್ನುವ ಮೂಲಕ ಈ ಘಟನೆಯನ್ನು ಮುಚ್ಚಿಡಲಾಯಿತು. ಮೀನಾ ನಕ್ಸಲೈಟ್ ಎಂದೂ, ನಕ್ಸಲೈಟರ ಗುಂಪಿನೊಂದಿಗಿನ ಗುಂಡಿನ ಚಕಮಕಿಯೊಂದರಲ್ಲಿ ಆಕೆಯನ್ನು ಉರುಳಿಸಲಾಯಿತೆಂದೂ ಪೊಲೀಸರು ಪ್ರತಿಪಾದಿಸಿದರು.

ಘಟನೆಯು ನಡೆದ ಕೂಡಲೇ ರಾಯ್‌ಪುರದಲ್ಲಿ ಬಿಜೆಪಿ ರಾಜ್ಯ ಸರಕಾರ ಮತ್ತು ಸ್ಥಳೀಯ ಪೊಲೀಸರು ಸೇರಿಕೊಂಡು ಮೌಲ್ಯಯುತ ಸಾಕ್ಷ್ಯ ನಾಶ ಮತ್ತು ಕಟ್ಟುಕತೆಗಳ ಸೃಷ್ಟಿಯು ನಡೆಯಿತು. ಛತ್ತೀಸ್‌ಗಢ ಬಚಾವೊ ಆಂದೋಲನದ ಸ್ಥಳೀಯ ಕಾರ್ಯಕರ್ತರ ತಂಡವೊಂದು ಗ್ರಾಮಕ್ಕೆ ಭೇಟಿ ನೀಡಿ ಸತ್ಯಶೋಧನಾ ವರದಿಯೊಂದನ್ನು ರಚಿಸಿತು. ಈ ವರದಿಯು ಮೀನಾ ಹತ್ಯೆಯ ಬಗ್ಗೆ ಪೊಲೀಸರ ಪ್ರತಿಪಾದನೆಗಿಂತ ತೀರಾ ವ್ಯತಿರಿಕ್ತವಾಗಿದೆ.

ನಕ್ಸಲೈಟ್ ಎನ್‌ಕೌಂಟರ್‌ಗಳು ನಮ್ಮ ದೇಶದಲ್ಲಿ ಅತೀ ಸಾಮಾನ್ಯವಾಗಿದೆ. ಅದಕ್ಕಾಗಿ ಬಳಸುವ ಎಲ್ಲಾ ದಾರಿಗಳನ್ನು ಸಮರ್ಥಿಸಲಾಗುತ್ತದೆ. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಸಾಮಾಜಿಕ ಮತ್ತು ಆರ್ಥಿಕ ನ್ಯಾಯದ ಬಗೆಗೆ ಏಳುವ ಪ್ರಶ್ನೆಗಳಿಂದ ಜನರ ಮನಸ್ಸನ್ನು ತಿರುಗಿಸುವುದಕ್ಕಾಗಿ ಇವುಗಳನ್ನು ಬಳಸಲಾಗುತ್ತದೆ.

ಸತ್ಯಶೋಧನಾ ವರದಿಯ ಪ್ರಕಾರ ನಾವಾಧಿ ಗ್ರಾಮದ ಲೋಂಗ್ರ ಟೋಲದಲ್ಲಿ ಮೀನಾರ ಅತ್ಯಾಚಾರ ಮತ್ತು ಹತ್ಯೆ ನಡೆದಂದು ಬೆಳಗ್ಗೆ ಪೊಲೀಸರು ಜನರಿಗೆ ತಮ್ಮ ಮನೆಗಳಿಂದ ಹೊರಬರದಂತೆ ನಿರ್ಬಂಧ ಹೇರಿದ್ದರು. ಪೊಲೀಸರು ಜನರನ್ನು ಬೆದರಿಸಿದರು ಮತ್ತು 'ಜಿಸ್ಕೊ ಸರೆಂಡರ್ ಕರ್ನಾ ಹೇ ವೋ ಅಪ್‌ನೆ

*ವರದಿ ಹೇಳುವಂತೆ ಪೊಲೀಸರ ಬಗ್ಗೆ ಅಲ್ಲಿನ ಜನರಿಗೆ ಭಯವೆಷ್ಟಿತ್ತೆಂದರೆ, ನವೆಲ್ ಭಾಗತ್ ಎಂಬವರ ಮಕ್ಕಳು ಪಾಯಾಖನೆಗಾಗಿ ಹೋಗಬೇಕೆಂದಾಗ ಆತನ ಪತ್ನಿಯು ಮಕ್ಕಳನ್ನು ಮನೆಯ ನಿತ್ಯೋಪಯೋಗಿ ವಸ್ತುವಿನಲ್ಲೇ ಪಾಯಖಾನೆ ಮಾಡಿಸಿದ್ದಳು. ನಮ್ಮ ದೇಶದ ಹಲವು ಗುಡ್ಡೆಕಾಡು ಪ್ರದೇಶದ ಮಂದಿ ಈ ರೀತಿಯ ಜೀವನವನ್ನು ನಡೆಸಬೇಕಾಗಿದೆ. ಅದು ಪೊಲೀಸರ ಭಯದಿಂದ ಎಂಬುದು ನಾವು ಅರಿತುಕೊಳ್ಳಬೇಕಾಗಿದೆ. ನಗರದ ಜೀವನವನ್ನು ಅನುಭವಿಸುತ್ತಿರುವವರು ಇಂತಹ ಪರಿಸ್ಥಿತಿಯನ್ನು ಎದುರಿಸಲಾರರು.*

ಘರ್ ಸೆ ಬಾಹರ್ ನಿಕಲೆ (ಸರೆಂಡರ್ ಆಗುವವರು ಮನೆಯಿಂದ ಹೊರ ಬನ್ನಿ) ಎಂದು ಬೊಬ್ಬಿಟ್ಟರು. ಪೊಲೀಸರು ಇಡೀ ಪ್ರದೇಶವನ್ನು ಸುತ್ತುವರಿದಿದ್ದರು ಮತ್ತು ಯಾವಾಗಿನಂತೆ ಹಣ್ಣು ಹಂಪಲುಗಳನ್ನು ತರುವುದಕ್ಕಾಗಿ ಕಾಡಿಗೆ ಹೋಗಲು ಯಾರನ್ನೂ ಅನುಮತಿಸುತ್ತಿರಲಿಲ್ಲ. ಇಂತಹ ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ಈ ಬಂಧನಗಳು ಸರ್ವೇ ಸಾಮಾನ್ಯವಾಗಿದೆ.

ವರದಿ ಹೇಳುವಂತೆ ಪೊಲೀಸರ ಬಗ್ಗೆ ಅಲ್ಲಿನ ಜನರಿಗೆ ಭಯವೆಷ್ಟಿತ್ತೆಂದರೆ, ನವೆಲ್ ಭಾಗತ್ ಎಂಬವರ ಮಕ್ಕಳು ಪಾಯಾಖನೆಗಾಗಿ ಹೋಗಬೇಕೆಂದಾಗ ಆತನ ಪತ್ನಿಯು ಮಕ್ಕಳನ್ನು ಮನೆಯ ನಿತ್ಯೋಪಯೋಗಿ ವಸ್ತುವಿನಲ್ಲೇ ಪಾಯಖಾನೆ ಮಾಡಿಸಿದ್ದಳು. ನಮ್ಮ ದೇಶದ ಹಲವು ಗುಡ್ಡೆಕಾಡು ಪ್ರದೇಶದ ಮಂದಿ ಈ ರೀತಿಯ ಜೀವನವನ್ನು ನಡೆಸಬೇಕಾಗಿದೆ. ಅದು ಪೊಲೀಸರ ಭಯದಿಂದ ಎಂಬುದು ನಾವು ಅರಿತುಕೊಳ್ಳಬೇಕಾಗಿದೆ. ನಗರದ ಜೀವನವನ್ನು ಅನುಭವಿಸುತ್ತಿರುವವರು ಇಂತಹ ಪರಿಸ್ಥಿತಿಯನ್ನು ಎದುರಿಸಲಾರರು.

ಅಂದು ರಾತ್ರಿ ನಡೆಯಬೇಕಾಗಿದ್ದ ಎನ್‌ಕೌಂಟರ್‌ಗೆ ಭಾಗತ್‌ನ ಮನೆ ತುಂಬಾ ಸಮೀಪದಲ್ಲಿತ್ತು. ಭಾಗತ್‌ನಂತಹ ಗ್ರಾಮಸ್ಥರು ಅಂದು ರಾತ್ರಿ ಕೇವಲ ಮೂರು ಗುಂಡಿನ ಶಬ್ದಗಳನ್ನು ಕೇಳಿದ್ದರು. ಸತ್ಯಶೋಧನಾ ಸಮಿತಿಗೆ ಭಾಗತ್ ಹೇಳುವಂತೆ ಘಟನೆ ನಡೆದ ಮರುದಿನ ಬೆಳಗ್ಗೆ ಆಗಮಿಸಿದ ಪೊಲೀಸರು ಕೆಲವು ಕಾಗದಗಳನ್ನು ಆತನ ಮುಂದಿಟ್ಟು ಬಲವಂತದ ಸಹಿಯನ್ನು ಪಡೆದರು. ಘಟನೆ ನಡೆದ ಸ್ಥಳದಿಂದ ಬಂದೂಕು ಹಾಗೂ ಇತರ ಆಯುಧಗಳು ಪತ್ತೆಯಾಗಿದೆಯೆಂದು ಆ ಕಾಗದ ಪತ್ರದಲ್ಲಿ ಬರೆಯಲಾಗಿತ್ತು. ಯಾರಾದರೂ ಈ ಎನ್‌ಕೌಂಟರ್‌ನ ಬಗ್ಗೆ ಕೇಳಿದರೆ ಕೇವಲ ಮೂರು ಸುತ್ತೆಂದಲ್ಲ, ಹಲವು ಸುತ್ತಿನ (50-60) ಗುಂಡಿನ ಶಬ್ದಗಳು ಕೇಳಿವೆಯೆಂದು ಹೇಳುವಂತೆ ಪೊಲೀಸರು ಆತನನ್ನು ಮತ್ತು ಅಲ್ಲಿದ್ದ ಇತರರೊಂದಿಗೆ ಹೇಳಿದ್ದರು.

ಪೊಲೀಸರು ಹೆಣೆದ ಎನ್‌ಕೌಂಟರ್ ಕತೆಯಲ್ಲಿ ತಡ ರಾತ್ರಿಯ ವೇಳೆ ಮೀನಾ ಎಲ್ಲಿಗೆ ಹೊರಟಿದ್ದಳು, ಏನು ಮಾಡುತ್ತಿದ್ದಳು ಎಂಬ ಪ್ರಶ್ನೆಯನ್ನು ಎತ್ತಿ ತೋರಿಸಲಾಗಿತ್ತು. ಜನರ ಕಡೆಯಿಂದ ಬರಬಹುದಾದ ಪ್ರಶ್ನೆಗಳನ್ನು ಮಂಕುಗೊಳಿಸುವುದಕ್ಕಾಗಿ (ಮೀನಾ 5ನೆ ತಾರೀಕಿನಂದು ಸ್ಕರ್ಟ್ ಹಾಗೂ ಬ್ಲೌಸ್‌ನಲ್ಲಿದ್ದಳಾದರೆ, ಪೊಲೀಸರು ನಂತರ ಆಕೆಯನ್ನು ಚಿಕಿತ್ಸೆಗಾಗಿ ಕರೆತರುವಾಗ ಸೀರೆಯಲ್ಲಿದ್ದದ್ದೇಕೆ?, ಪೋಸ್ಟ್‌ಮಾರ್ಟಮ್ ವರದಿಯು ಆಕೆಗೆ ಬಹಳ ಹತ್ತಿರದಿಂದ ಗುಂಡು ಬಡಿದಿದೆಯೆಂಬ ಅಂಶವನ್ನು ಬೆಳಕಿಗೆ ತಂದಿರುವುದರಿಂದ) ರಾಜ್ಯ ಸರಕಾರವು ಮೀನಾಳ ವರ್ತನೆಯ ಬಗ್ಗೆ ಹಲವು ಪ್ರಶ್ನೆಗಳನ್ನು ಎತ್ತಿವೆ.

'2:15 ಗಂಟೆ ರಾತ್ರಿಗೆ ಯಾತಕ್ಕಾಗಿ ಆಕೆ ಮನೆಯಿಂದ ಹೊರಹೋಗಿದ್ದಳು?' ಎಂಬ ಪ್ರಶ್ನೆಯನ್ನು ಬಿಜೆಪಿ ಗೃಹ ಸಚಿವ ನಾನ್ಕಿರಾಮ್ ಕನ್ವಾರ್ ಕೇಳಿದ್ದಾರೆ. ಪೊಲೀಸ್ ಡಿಪಾರ್ಟ್‌ಮೆಂಟ್‌ನಲ್ಲಿರುವ ಆಕೆಯ ರೇಪಿಸ್ಟ್‌ಗಳನ್ನು ರಕ್ಷಿಸುವುದಕ್ಕಾಗಿ ಆಕೆ ಟ್ರಕ್ ಡ್ರೈವರ್‌ಗಳೊಂದಿಗೆ ಸಂಬಂಧ ಹೊಂದಿದ್ದಳು ಎಂದು ಹೇಳಲಾಗಿತ್ತು. ನ್ಯಾಯಾಲಯದ ವಿಚಾರಣೆಯ ವೇಳೆ ಪೊಲೀಸರು ಅತ್ಯಾಚಾರ ನಡೆಸಿರುವ ಪ್ರತಿಪಾದನೆಯು ಸೋಲಬೇಕೆಂಬ ನಿಟ್ಟಿನಲ್ಲಿ ವೈದ್ಯಕೀಯ ವರದಿ ಬಂದ ನಂತರ 'ಅನೈತಿಕ ಸಂಬಂಧ'ದ ಬಗೆಗಿನ ಕತೆಯನ್ನು ಪೊಲೀಸರು ಸೇರಿಸಿದ್ದರು ಎಂಬುದು ಗ್ರಾಮಸ್ಥರ ಆರೋಪವಾಗಿದೆ. ಆದರೆ ಇಂತಹ ಒಂದು ಆಘಾತಕಾರಿ, ಪ್ರಜಾಪ್ರಭುತ್ವ ವಿರೋಧಿ ಕೃತ್ಯವು ಮುಖ್ಯವಾಹಿನಿ ಮಾಧ್ಯಮಗಳ ಕಣ್ಣಿಗೆ ಕಾಣದಿರುವುದು ಅಚ್ಚರಿಯೇ ಸರಿ.

ನಮ್ಮ ದೇಶದಲ್ಲಿ ನಡೆಯುವ ಅಪರಾಧಗಳು ಹಾಗೂ ಅದರ ವಿರುದ್ಧದ ಹೋರಾಟದಲ್ಲಿಯೂ ಜಾತಿ-ವರ್ಗ ತಾರತಮ್ಯಗಳನ್ನು ಕಾಣಬಹುದಾಗಿದೆ. ನಕ್ಸಲಿಸಮ್, ಭಯೋತ್ಪಾದನೆಯ ಹೆಸರಿನಲ್ಲಿ ಆದಿವಾಸಿಗಳು, ಮುಸ್ಲಿಮರ ಮೇಲೆ ನಡೆಯುವ ನಿರಂತರ ಅನ್ಯಾಯಗಳು ದೇಶದಲ್ಲಿ ಯಾವುದೇ ತರ್ಕಕ್ಕೆ ಒಳಗಾಗದೆ ಸಮರ್ಥಿಸಲ್ಪಡುತ್ತವೆ. ಮೀನಾ ಖಲ್ಖೋರಂತಹ ಪರಿಸ್ಥಿತಿಯನ್ನು ಛತ್ತೀಸ್‌ಗಢ, ಕಾಶ್ಮೀರ, ಮಣಿಪುರದ ಹಲವು ಹುಡುಗಿಯರು ಎದುರಿಸಿದ್ದಾರೆ. ಮಹಿಳಾವಾದಿಗಳೂ ಇಂತಹ ಪ್ರಕರಣಗಳ ಬಗ್ಗೆ ತುಟಿಪಿಟಿಕ್ಕೆನ್ನುವುದಿಲ್ಲ. ಇವೆಲ್ಲವೂ ಚರ್ಚಿಸಲ್ಪಡದೆ ಉಳಿಯಬೇಕಾದವುಗಳೇನೋ ಎಂಬಂತೆ ನಮ್ಮ ಮುಖ್ಯವಾಹಿನಿಯ ಮಾಧ್ಯಮಗಳು ರಕ್ಷಿಸುತ್ತಾ ಬಂದಿವೆ.

■ಕೆ.ವೈ ಅಬ್ದುಲ್ ಹಮೀದ್
kukkaje09@gmail.com

# ಹಸನ್‌ನ ಆಫ್ರಿಕನ್ ಹಾಡು

ಇಡೀ ಊರಿನಲ್ಲಿ ಅತ್ಯಂತ ಸಂತೃಪ್ತ ವ್ಯಕ್ತಿ ಎಂದರೆ ಅದು ಹಸನ್ ಎಂದು ಹೇಳುವಷ್ಟು ಆತ ಸದಾ ಸಂತೋಷದಲ್ಲಿರುತ್ತಿದ್ದ. ವಯಸ್ಸು ಹದಿನಾರಾಗಿದ್ದರೂ ದೇಹ, ಬುದ್ಧಿ ವಯಸ್ಸಿಗನುಸಾರವಾಗಿ ಬೆಳೆದಿರಲಿಲ್ಲ. ಚಿಕ್ಕಂದಿನಲ್ಲೆ ಬಡತನದ ಬೇಗೆಯಲ್ಲಿ ಬೆಂದು ಬೆಳೆದ ಆತನಿಗೆ ಬಡತನ, ಸಿರಿತನದ ವ್ಯತ್ಯಾಸ ಗೊತ್ತಿರಲಿಲ್ಲ. ಅದನ್ನು ತಿಳಿದುಕೊಳ್ಳುವ ಕುತೂಹಲವೂ ಅವನಿಗಿರಲಿಲ್ಲ. ಪೋಲಿಯೋ ಪೀಡಿತನಂತೆ ಕಂಡು ಬರುವ ಆತನ ತಲೆ ಆಕೃತಿಯಲ್ಲಿ ಸ್ವಲ್ಪ ದೊಡ್ಡದಾಗಿದ್ದೂ ಅವನ ದೇಹದ ಗಾತ್ರಕ್ಕೆ ಸರಿಹೊಂದುತ್ತಿರಲಿಲ್ಲ. ಯಾರದಾದರೂ ಮನೆಯ ಹೊರಗಿನ ದಿಣ್ಣೆಯಲ್ಲಿ ಮಲಗಿ ದಿನ ಬೆಳಗಾಗಿಸುವ ಅವನು ತನ್ನ ಮನೆಗೆ ಹೋಗುವುದು ಹಗಲು ಹೊತ್ತಿನಲ್ಲಿ ಮಾತ್ರ.ಅದೇನೋ ತಕ್ಷಣ ಮಾಡಿ ಮುಗಿಸಬೇಕಾದ ಕೆಲಸ ಇರುವವನಂತೆ ಬೀದಿಯಲ್ಲಿ ಸದಾ ಓಡಾಡಿಕೊಂಡಿರುವುದು ಅವನ ಹವ್ಯಾಸ. ಯಾವುದೇ ಸಂಕೋಚವಿಲ್ಲದೆ ವಿಚಿತ್ರ ದಾಟಿಯಲ್ಲಿ ಯಾವುದೋ ಬುಡಕಟ್ಟು ಜನಾಂಗದ ಭಾಷೆಯಂತೆ ಕೇಳುವ ಹಾಡನ್ನು ಹಾಡುತ್ತಿರುವ ಅವನು ಇದ್ದಕ್ಕಿಂದ್ದಂತೆ ಸೀರಿಯಸ್ಸಾಗಿ ಏನಾದರು ಹೇಳಿ ಮರು ಕ್ಷಣದಲ್ಲಿ ಅದಕ್ಕೂ ತನಗೂ ಏನೂ ಸಂಬಂಧವೇ ಇಲ್ಲವೆಂಬಂತೆ ಕೇಕೇ ಹಾಕುತ್ತಾ ಇಲ್ಲವೇ ಚಪ್ಪಾಲೆ ತಟ್ಟಿ ಹಾಡುತ್ತಾ ಸಂತೋಷದ ಉತ್ತುಂಗಕ್ಕೆ ಏರುತ್ತಿದ್ದ.



ಆತನ ಉತ್ಸಾಹ ತುಂಬಿದ ಚಟುವಟಿಕೆ ಯಾವುದೇ ದುಮುಗುಡುವ ಮೋರೆಯಲ್ಲೂ ಕಿರುನಗೆ ಮೂಡಿಸುವಲ್ಲಿ ಯಶಸ್ವಿಯಾಗುತ್ತಿತ್ತು. ಯುವಕರ ದಂಡು ಆತನನ್ನು ಎಲ್ಲೆ ಕಂಡರೂ ತಮ್ಮ ಗುಂಪಿನೊಳಗೆ ಸೇರಿಸಿ ತಿಂಡಿ ತಿನಸುಗಳನ್ನು ತರಿಸಿಕೊಟ್ಟು ಅವನಿಂದ ಅದು ಇದು ಮಾತನಾಡಿಸಿ ಮೋಜು ಅನುಭವಿಸುತ್ತಿದ್ದರು. ಎಲ್ಲೇ ಮದುವೆ ನಡೆದರೂ ಅಲ್ಲಿ ಪ್ಲೇಟು ತೊಳೆಯುವ ಕೆಲಸಕ್ಕೆ ಅವನು ಹಾಜರಾಗುತ್ತಿದ್ದ. ದಣಿಯುವಷ್ಟು ಕೆಲಸ ಮಾಡಿದರೂ ಅವನ ಉತ್ಸಾಹ ಬತ್ತುತ್ತಿರಲಿಲ್ಲ. ಆದರೆ ಮೊನ್ನೆ ಮಾತ್ರ ಅವನ ಉತ್ಸಾಹಕ್ಕೆ ತಣ್ಣೀರೆರಚುವಂತಹ ಸನ್ನಿವೇಶ ನಿರ್ಮಾಣವಾಗಿತ್ತು.

ಅಂದು ರಂಝಾನಿನ ಕೊನೆಯ ದಿನ. ಪವಿತ್ರ ರಂಝಾನ್ ತಿಂಗಳು ವಿದಾಯ ಹೇಳಿ ಹೊರಡುವ ಪೂರ್ಣ ಸಿದ್ಧತೆಯಲ್ಲಿತ್ತು. ತಿಂಗಳ ಕಾಲ ಜತೆಯಲ್ಲಿದ್ದು ಅನುಗ್ರಹದಿಂದ ಮಿಂದ ಜನತೆಗೆ ಆ ತಿಂಗಳನ್ನು ವಿದಾಯ ಹೇಳಿ ಕಳಿಸುವುದು ಬೇಸರದ ಸಂಗತಿಯಾಗಿತ್ತು. ಅದರಲ್ಲೂ ಸಮೂಸ ವ್ಯಾಪಾರಿ ಪೊಡಿಯಬ್ಬಾಕ ಸಂಪೂರ್ಣ ಮೂಡ್‌ಔಟಾಗಿ ಬಿಟ್ಟಿದ್ದರು. ಅವರ ಮುಖ ಕಳೆಗುಂದಿ ಹೋಗಿತ್ತು. 'ರಂಝಾನ್ ಮುಗಿಯಿತಲ್ಲಾ ಛೇ...' ಎಂದು ಅವರು ತನ್ನಷ್ಟಕ್ಕೆ ಹೇಳಿಕೊಳ್ಳುತ್ತಿದ್ದರು. ಎಲ್ಲಾ ಸನ್ನಿವೇಶವನ್ನೂ ಒಂದೇ ರೀತಿಯಲ್ಲಿ ಕಾಣುವ ಹಸನ್ ಇದಾವುದರ ಪರಿವಿಯಿಲ್ಲದೆ ಎಂದಿನಂತೆ ತನ್ನ ಮೆಚ್ಚಿನ ಆಫ್ರಿಕನ್ ದಾಟಿಯಲ್ಲಿ ಹಾಡನ್ನು ಗುಣುಗುತ್ತಾ ಪೊಡಿಯಬ್ಬಾಕರ ಹೊಟೇಲ್‌ಗೆ ನುಗ್ಗಿದ್ದನು. ರಂಝಾನ್‌ನ ವಿದಾಯದ ಬೇಗುದಿಯಲ್ಲಿದ್ದ ಪೊಡಿಯಬ್ಬಾಕರ ಪಿತ್ತ ನೆತ್ತಿಗೇರಲು ಇಷ್ಟು ಸಾಕಾಗಿತ್ತು. ''ನಿನ್ನದೊಂದು ಹಾಡು. ಇಲ್ಲಿಂದ ಹೋಗದಿದ್ದರೆ ನಿನ್ನ ಕಾಲು ಕಡಿದು ಹಾಕುತ್ತೇನೆ '' ಎಂಬ ಪೊಡಿಯಬ್ಬಾಕ್ಕರ ಅರಚಾಟಕ್ಕೆ ಜೀವನದಲ್ಲಿ ಇದೇ ಮೊದಲ ಬಾರಿಗೆ ಹುಲಿ ನೋಡಿದವನಂತೆ ದಂಗಾಗಿದ್ದ ಹಸನ್ ತಿರುಗಿ ನೋಡದೆ ಓಡಿದವನು ಮತ್ತೆ ತಿರುಗಿ ನೋಡಿರುವುದು ಫ್ರೂಟ್ಸ್ ಖಾದರ್‌ನ

ಗೂಡಂಗಡಿಯಲ್ಲಾಗಿತ್ತು. ಅಲ್ಲಿ ನಿಂತು ಹಿಂದುರಿಗಿ ನೋಡಿ ತನ್ನನ್ನಾರೂ ಬೆನ್ನಟ್ಟುತ್ತಿಲ್ಲ ಎಂಬುದನ್ನು ಖಾತ್ರಿ ಪಡಿಸಿಕೊಂಡು ಅಂಗಡಿಯ ಮುಂದಿದ್ದ ಮುರುಕಲು ಬೆಂಚಿನ ಮೇಲೆ ಕುಳಿತುಕೊಂಡ. ನಾಲ್ಕು ಊರು ಕೇಳುವಂತೆ ಮನ ಬಿಚ್ಚಿ ಹಾಡಲು ಮನಸ್ಸು ತವಕ ಪಡುತ್ತಿದ್ದರೂ ಅವನ ಮನದಲ್ಲಿ ಆವರಿಸಿದ್ದ ಅಂಜಿಕೆ ಆವನಿಗೆ ಅನುಮತಿ ನೀಡಿರಲಿಲ್ಲ.

ಹಸನ್ ಹಾಡುವುದಕ್ಕೆ ಮೊದಲು ವಾತಾವರಣ ಎಲ್ಲಾ ಸರಿ ಇದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳುತ್ತಿರುವುದು ಜೀವನದಲ್ಲಿ ಇದೇ ಮೊದಲ ಬಾರಿಯಾಗಿತ್ತು. ಕುಳಿತಲ್ಲಿಂದಲೆ ಆತ ಕತ್ತನ್ನು ತಿರುಗಿಸಿ ತನ್ನ ಸುತ್ತಮುತ್ತಲೂ ವೀಕ್ಷಿಸಿದ. ಫ್ರುಟ್ಸ್‌ನ ಅಂಗಡಿ ಖಾದರ್‌ನ ಹೊರತು ಯಾವುದೇ ನರಪಿಳ್ಳೆ ಅಲ್ಲಿರಲಿಲ್ಲ. ಹಾಡುವ ಮೊದಲು ಕೊನೆಯ ಬಾರಿ ಖಾತ್ರಿ ಪಡಿಸಿಕೊಳ್ಳಲು ಹಸನ್ ಅಂಗಡಿ ಖಾದರ್‌ನ ಮುಖದತ್ತ ತನ್ನ ಕಣ್ಣಗಲಿಸಿ ಒಂದು ನೋಟ ಬೀರಿದ. ಪೊಡಿಯಬ್ಬಾಕರ ಮುಖದಲ್ಲಿ ಕಂಡಂತಹ ಕರಾಳ ಛಾಯೆ ಅವನ ಮುಖದಲ್ಲೂ ಆವರಿಸಿದ್ದನ್ನು ಕಾಣತೊಡಗಿದಾಗ ಹಸನ್ ಗಾಬರಿಯಿಂದ ಸಂಪೂರ್ಣ ತತ್ತರಿಸಿ ಹೋಗಿದ್ದ. ಇಲ್ಲಿ ನಿಲ್ಲುವುದು ಅಪಾಯವೆಂದು ಊಹಿಸಿದ ಅವನು ನೇರವಾಗಿ ಮಸೀದಿಯತ್ತ ತೆರಳಿದ. ಅಲ್ಲಿ ನೋಡಿದರೆ ಜನರು ಗುಂಪಾಗಿ ಕುಳಿತು ರಂಝಾನಿನ ವಿದಾಯದ ಕುರಿತು ಚರ್ಚೆ ನಡೆಸುತ್ತಿದ್ದರು. ಅದರ ನೇತೃತ್ವವನ್ನು ಜವುಳಿ ರಫೀಕ್ ವಹಿಸಿದ್ದ. ಸುರಕ್ಷಿತ ತಾಣ ಅರಸಿ ಬಂದ ಹಸನ್‌ಗೆ ಬಾಣಲೆಯಿಂದ ಬೆಂಕಿಗೆ ಬಿದ್ದ ಅನುಭವ. ಎಲ್ಲಾ ಕಡೆ ನಿರಾಶೆ ಎದುರಾಗಿತ್ತು. ಜನರೆಲ್ಲಾ ಸಂಪೂರ್ಣ ಬದಲಾಗಿರುವುದು ಅವನ ಆತಂಕವನ್ನು ಹೆಚ್ಚಿಸಿತ್ತು. ರಂಝಾನಿನಲ್ಲಿ ಜನ ಸಂಚಾರ ಕಡಿಮೆ ಇರುವ ಹಸಿ ಮೀನಿನ ವ್ಯಾಪಾರದ ಜಾಗಕ್ಕೆ ಹೋದರೆ ಹೇಗೆ ಎಂದು ಒಂದು ಕ್ಷಣ ಯೋಚಿಸಿದ ಹಸನ್ ಮತ್ತೆ ತಿರುಗಿ ನೋಡಲಿಲ್ಲ. ನೇರವಾಗಿ ಅಲ್ಲಿಗೆ ಸಾಗಿ ಅಲ್ಲಿದ್ದ ಪ್ಲಾಸ್ಟಿಕ್ ಬಾಕ್ಸಿನ ಮೇಲೇರಿ ಕುಳಿತುಕೊಂಡ. ಮೀನಿನ ಪುತ್ತಾಕ ಕಿರುನಗೆ ಬೀರಿ ಅವನನ್ನು ಸ್ವಾಗತಿಸಿರುವುದು ಹಸನ್‌ಗೆ ಜೀವ ಮರಳಿ ಸಿಕ್ಕಂತಾಗಿತ್ತು. 'ಏನು ಪುತ್ತಾಕ, ಬಾರಿ ಖುಷಿ ' ಎಂದು ಹಸನ್ ಕೇಳಿದಾಗ ''ರಂಝಾನ್ ಮುಗಿಯಿತು. ಇನ್ನು ನಮ್ಮ ವ್ಯಾಪಾರ ಇಂಪ್ರು'' ಎಂಬ ಪುತ್ತಾಕರ ಉತ್ತರ ಸಿಕ್ಕಿದ್ದೇ ತಡ ಹಸನ್‌ನ ಆಫ್ರಿಕನ್ ಹಾಡು ಮತ್ತೆ ಮೊಳಗತೊಡಗಿತ್ತು.

★★★

## ಮಕ್ಕಳನ್ನು ಶಾರೀರಿಕವಾಗಿ ದಂಡಿಸದಿರಿ



ಮಕ್ಕಳಿಗೆ ಶಾರೀರಿಕವಾಗಿ ದಂಡಿಸುವುದರಿಂದ ಅವರ ಸ್ವಭಾವವು ಹಾಳಾಗುತ್ತದೆ ಎಂದು ಒಂದು ಹೊಸ ಸಂಶೋಧನೆಯಿಂದ ತಿಳಿದು ಬಂದಿದೆ. ಒಂದು ವೇಳೆ ನಿಮ್ಮ ಮಗುವನ್ನು ನೀವು ಸುಧಾರಿಸಬೇಕೆಂಬ ನಿಟ್ಟಿನಲ್ಲಿ ಅವರನ್ನು ದಂಡಿಸುವುದಾದರೆ ಇನ್ನು ಮುಂದೆ ಸ್ವಲ್ಪ ಆಲೋಚನೆ ಮಾಡಿರಿ.

ಮಕ್ಕಳನ್ನು ಶಾರೀರಿಕವಾಗಿ ದಂಡಿಸುವುದರಿಂದ ಅವರ ಭಾವನಾತ್ಮಕ ಬುದ್ಧಿಶಕ್ತಿ ಹಾಗೂ ಕಾರ್ಯನಿರ್ವಹಣೆಯ ಕ್ಷಮತೆ ಕುಗ್ಗುತ್ತದೆ. ಭಾವನಾತ್ಮಕ ಬುದ್ಧಿಶಕ್ತಿ ಮತ್ತು ಕಾರ್ಯನಿರ್ವಹಣೆಯ ಕ್ಷಮತೆಯು ಜನರಲ್ಲಿ ತಕ್ಷಣ ಆಲೋಚಿಸುವುದು ಮತ್ತು ಸಂದರ್ಭಕ್ಕನುಸಾರ ತಮ್ಮ ವ್ಯವಹಾರಗಳನ್ನು ಬದಲಿಸಲು ಸಹಕಾರಿಯಾಗುತ್ತದೆ.

ಸಂಶೋಧಕರ ಪ್ರಕಾರ, ನೀವು ನಿಮ್ಮ ಮಕ್ಕಳಿಗೆ ನಿರಂತರವಾಗಿ ಶಾರೀರಿಕವಾಗಿ ದಂಡಿಸುವುದರಿಂದ ಅವರಲ್ಲಿ ಕಾರ್ಯ ಕ್ಷಮತೆಯು ಕುಗ್ಗಿ ಅಶಿಸ್ತು ಅವರಲ್ಲಿ ಮನೆ ಮಾಡುತ್ತದೆ. ಮಕ್ಕಳು ಶಾರೀರಿಕ ದಂಡನೆಯಿಂದ ಕೆಲವು ಸಮಯದ ವರೆಗೆ ಸುಧಾರಿಸಬಹುದು. ಆದರೆ ಆ ಬಳಿಕ ಅವರಲ್ಲಿ ಹೀಗೇಕೆ ಆಗುತ್ತಿದೆ ಎಂಬ ಪ್ರಶ್ನೆ ಕಾಡುತ್ತಲೇ ಇರುತ್ತದೆ.

ಮುಖ್ಯ ಸಂಶೋಧಕ ಮಾಂಟ್ರಿಯಲ್‌ನ ಮೆಕ್‌ಗಿಲ್ ಯುನಿವರ್ಸಿಟಿಯ ಪ್ರೊ.ವಿಕ್ಟೋರಿಯಾ ತಲ್ವಾರ್ ಹೇಳುವಂತೆ, ಶಾರೀರಿಕ ದಂಡನೆಯು ಮಕ್ಕಳಲ್ಲಿ ವ್ಯವಹಾರ ಮತ್ತು ಅವರಲ್ಲಿ ಕಲಿಯುವ ರೀತಿಯನ್ನು ಸುಧಾರಿಸುವುದಿಲ್ಲ ಎಂಬುದನ್ನು ಈ ಸಂಶೋಧನೆಯ ಬಹಿರಂಗಪಡಿಸಿದೆ.

# ನಾಗರಿಕ ಹಕ್ಕುಗಳಿಗಾಗಿ ಎದ್ದೇಳಿ....

● ಮುಹಮ್ಮದ್ ಶಾಕೀರ್
ರಾಜ್ಯಾಧ್ಯಕ್ಷರು,
ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ



ಸಂವಿಧಾನ ನೀಡಿದ ಭರವಸೆ ಮತ್ತು ದೇಶದ ಬಹುತೇಕ ಜನರಿಗೆ ಅದರ ನಿರಾಕರಣೆಯ ಬಗ್ಗೆ ತಿಳಿದಿರುವವರು ಫೋರ್ಬ್ಸ್‌ಗಂಜ್ ಪೊಲೀಸ್ ಗೋಲಿಬಾರ್ ಕೇವಲ ನಮ್ಮ ಕೆಟ್ಟು ಹೋದ ವ್ಯವಸ್ಥೆಯ ಬಗ್ಗೆ ಒಂದು ಕ್ರೂರ ಸ್ಮರಣೆಯಾಗಿದೆ ಎಂಬ ವಾಸ್ತವವನ್ನು ಒಪ್ಪಿಕೊಳ್ಳುತ್ತಾರೆ. ಪ್ರಭುತ್ವ ಅಭಿವೃದ್ಧಿಯ ಹೆಸರಿನಲ್ಲಿ ನಡೆಸುತ್ತಿರುವ ಆರ್ಥಿಕ ಭಯೋತ್ಪಾದನೆಯ ಬಲಿಪಶುಗಳಿಂದ ಹಿಡಿದು, ಪೊಲೀಸ್ ದೌರ್ಜನ್ಯದ ಬಲಿಪಶುಗಳನ್ನು ತೆಗೆದುಕೊಳ್ಳುವಾಗ ಸಮಾಜದ ಮೇಲ್ವರ್ಗದಿಂದ ಪ್ರಜಾಪ್ರಭುತ್ವದ ತತ್ವಗಳು ಬುಡಮೇಲುಗೊಳ್ಳುವುದರಿಂದ ಭಾರತವು ಸುರಕ್ಷಿತವಾಗಿಲ್ಲ ಎನ್ನುವುದು ಸ್ಪಷ್ಟವಾಗಿದೆ. ದಮನ ಮತ್ತು 'ಭಾರತದ ಕಲ್ಪನೆ'ಯೆಂಬುದರ ನಡುವಿನ ಕಣ್ಣಾಮುಚ್ಚಾಲೆಯು ಭಾರತವು ಸಾಂಪ್ರದಾಯಿಕವಾಗಿ ಪ್ರಜಾಪ್ರಭುತ್ವವಾಗಿದೆ ಮತ್ತು ರಹಸ್ಯವಾಗಿ ನಿರಂಕುಶವಾಗಿ ಬದಲಾಗುತ್ತಿದೆ ಎಂದು ಜನ ತೀರ್ಮಾನಿಸುವಂತಾಗಿದೆ.

ಪ್ರಜಾಪ್ರಭುತ್ವದ ಮೇಲೆ ದಾಳಿಯಾಗುತ್ತಿರುವ ಈ ಸಂದರ್ಭದಲ್ಲಿ ಇಲ್ಲಿನ ಸರ್ವಾಧಿಕಾರಿ ಧೋರಣೆಯ ಬಗ್ಗೆ ನಾವು ಅರಿತುಕೊಳ್ಳಬೇಕಾಗಿದೆ. ಬಿನಾಯಕ್ ಸೇನ್‌ರಂತಹ ವ್ಯವಸ್ಥೆಯ ಬಲಿಪಶುಗಳು ದೇಶದ ಮಧ್ಯಮ ವರ್ಗದ ಹಾಗೂ ವಿದೇಶಿಯರಿಂದ ಸಹಾನುಭೂತಿಯನ್ನು ಪಡೆಯಲು ಸಾಕಷ್ಟು ಅದೃಷ್ಟವಂತರಾಗಿದ್ದರು. ಆದರೆ ಕಾರ್ಪೊರೇಟ್ ಮಾಧ್ಯಮಗಳ ಅತಿರಂಜಿತ ಪ್ರಚಾರದ ಆಚೆಗೆ ಇದೇ ರಿತೀಯ ಸಂಕಷ್ಟದಲ್ಲಿರುವ ಅದೆಷ್ಟೋ ಮಂದಿ ನಮ್ಮ ದೇಶದಲ್ಲಿದ್ದಾರೆ. ಅವರಲ್ಲಿ ಹೆಚ್ಚಿನವರ ಪರಿಸ್ಥಿತಿ ಹೀನಾಯವಾಗಿದೆ ಮತ್ತು ತಮ್ಮ ಅಮಾಯಕತೆಯನ್ನು ಬೆಳಕಿಗೆ ತರುವ ಅದೃಷ್ಟದಿಂದ ಅವರು ವಂಚಿತರಾಗಿದ್ದರೆ. ಈ ರೀತಿಯ ನೋವು ಅನುಭವಿಸಿದ ರಾಜಕೀಯ ಕೈದಿಗಳು, ನಕಲಿ ಎನ್‌ಕೌಂಟರ್‌ನ ಬಲಿಪಶುಗಳು, ತಮ್ಮ ಭೂಮಿಯಿಂದ ಅಟ್ಟಲ್ಪಟ್ಟವರು ಮತ್ತು ನಿರಂತರವಾಗಿ ಶಂಕಿತರಾಗಿ ಜೀವಿಸುತ್ತಿರುವ ಮಂದಿ ಪ್ರಜಾಪ್ರಭುತ್ವದ ಪರವಾಗಿ ಹಠಾತ್ತಾಗಿ ಹುಟ್ಟಿಕೊಂಡಿರುವ ಮಾಧ್ಯಮ ವರ್ಗದ ಚರ್ಚೆಯಲ್ಲಿ ಸ್ಥಳ ಪಡೆಯದೆ ಉಳಿದಿದ್ದಾರೆ.

ಬಿನಾಯಕ್ ಸೇನ್‌ರನ್ನು ಬೆಂಬಲಿಸುವುದರಲ್ಲಿ ಸ್ಪಷ್ಟವಾಗಿದ್ದ ಬುದ್ಧಿ ಜೀವಿಗಳು ಮತ್ತು ಸಂಘಟನೆಗಳು ಪ್ರಭುತ್ವದ ದಮನದ ಬಗ್ಗೆ ದೃಢವಾಗಿ ನಿಲುವು ತೋರಲು ಸಾಕಷ್ಟು ಧೈರ್ಯವನ್ನು ಹೊಂದಿಲ್ಲ. ಕರ್ನಾಟಕದ ಬಿಜೆಪಿ ಹಾಗೂ ಕೇರಳದ ಸಿಪಿಎಂನ ಜಂಟಿ ಕಾರ್ಯಚರಣೆಯೊಂದಿಗೆ ಬಂಧಿಸಲ್ಪಟ್ಟ ಅಬ್ದುಲ್ ನಾಸಿರ್ ಮಅದನಿ ಮತ್ತು ತೆಹಲ್ಕಾ ಪತ್ರಕರ್ತೆ ಶಾಹಿನಾ ಕೆ.ಕೆಯ ಮೇಲೆ ನಡೆದ ಕಿರುಕುಳದ ಬಗ್ಗೆ ಭಯಾನಕ ಮೌನವು ಭಾರತೀಯ ಮಾಧ್ಯಮ ಹಾಗೂ ಮಧ್ಯಮ ವರ್ಗದ ಸ್ವಆಯ್ಕೆಯ ಸ್ಮೃತಿ ನಾಶಕ್ಕೆ ಪಾತವಾಗಿದೆ. ಬಿನಾಯಕ್ ಸೇನ್‌ರವರಿಗೆ ಜಾಮೀನು ದೊರೆತಿದ್ದರೆ, ಮಅದನಿ ಇನ್ನೂ ಜೈಲಿನಲ್ಲಿಯೇ ಕೊಳೆಯುತ್ತಿದ್ದಾರೆ.

ಇನ್ನೂ ಹೆಚ್ಚಾಗಿ ನಿಷೇಧಿತ ಸಂಘಟನೆಯಾದ ಸಿಮಿಯೊಂದಿಗೆ ನಂಟಿದೆಯೆಂಬ ಆರೋಪದ ಮೇಲೆ ಬಂಧಿಸಲಾದ ಯುವಕರ ಬಗ್ಗೆ ಮಾತನಾಡಲು ಹಿಂಜರಿಯುತ್ತಿರುವುದು ಹಾಸ್ಯಾಸ್ಪದವಾಗಿದೆ. ನವ ಉದಾರವಾದಿಗಳ ಬೆಂಬಲದೊಂದಿಗೆ ಆಡಳಿತ ವರ್ಗವು

***ಬಿನಾಯಕ್ ಸೇನ್‌ರನ್ನು ಬೆಂಬಲಿಸುವುದರಲ್ಲಿ ಸ್ಪಷ್ಟವಾಗಿದ್ದ ಬುದ್ಧಿ ಜೀವಿಗಳು ಮತ್ತು ಸಂಘಟನೆಗಳು ಪ್ರಭುತ್ವದ ದಮನದ ಬಗ್ಗೆ ದೃಢವಾಗಿ ನಿಲುವು ತೋರಲು ಸಾಕಷ್ಟು ಧೈರ್ಯವನ್ನು ಹೊಂದಿಲ್ಲ. ಕರ್ನಾಟಕದ ಬಿಜೆಪಿ ಹಾಗೂ ಕೇರಳದ ಸಿಪಿಎಂನ ಜಂಟಿ ಕಾರ್ಯಾಚರಣೆಯೊಂದಿಗೆ ಬಂಧಿಸಲ್ಪಟ್ಟ  ಅಬ್ದುಲ್ ನಾಸಿರ್ ಮಅದನಿ ಮತ್ತು ತೆಹಲ್ಕಾ ಪತ್ರಕರ್ತೆ ಶಾಹಿನಾ ಕೆ.ಕೆಯ ಮೇಲೆ ನಡೆದ ಕಿರುಕುಳದ ಬಗ್ಗೆ ಭಯಾನಕ ಮೌನವು ಭಾರತೀಯ ಮಾಧ್ಯಮ ಹಾಗೂ ಮಧ್ಯಮ ವರ್ಗದ ಸ್ವಆಯ್ಕೆಯ ಸ್ಮೃತಿ ನಾಶಕ್ಕೆ ಪಾತವಾಗಿದೆ. ಬಿನಾಯಕ್ ಸೇನ್‌ರವರಿಗೆ ಜಾಮೀನು ದೊರೆತಿದ್ದರೆ, ಮಅದನಿ ಇನ್ನೂ ಜೈಲಿನಲ್ಲಿಯೇ ಕೊಳೆಯುತ್ತಿದ್ದಾರೆ.***







ಮಂಜೂರುಗೊಳಿಸಿದ ಯುಎಪಿಎಯಂತಹ ಕಾನೂನುಗಳ ಕ್ರೂರ ವಿಧಿಗಳಲ್ಲಿ ಸುಪ್ರೀಂ ಕೋರ್ಟ್ ಯಾವುದೇ ಸಮಸ್ಯೆ ಕಾಣದಿರುವುದು ಇನ್ನೊಂದು ಇಂಥಹುದೇ ಹಾಸ್ಯಾಸ್ಪದ ವಿಷಯ.

ಜೈಪುರದಿಂದ ಹೈದರಾಬಾದ್‌ವರೆಗೆ ಸರಣಿ ಬಾಂಬ್ ಸ್ಫೋಟ ನಡೆದ ನಂತರ ಸರಕಾರೀ ಪ್ರಾಯೋಜಿತ ಭಯೋತ್ಪಾದನೆಯಿಂದ ಜೀವ ಹಾಗೂ ಜೀವನ ಎರಡನ್ನೂ ಕಳೆದುಕೊಂಡಿರುವ ಜನರಿಗೋಸ್ಕರ ಕೆಲವೇ ಮಂದಿ ಮಾತ್ರ ಧ್ವನಿ ಎತ್ತಿದ್ದಾರೆ. ಈ ಸಂದರ್ಭದಲ್ಲಿ ಹಲವಾರು ಸಂಘಟನೆಗಳು ಅಸ್ತಿತ್ವದಲ್ಲಿಯೇ ಇಲ್ಲದಂತಹ 'ಇಸ್ಲಾಮಿಕ್ ಭಯೋತ್ಪಾದನೆ'ಯನ್ನು ಖಂಡಿಸುತ್ತಾ, ಪೊಲೀಸರ ಕಾರ್ಯ ದಕ್ಷತೆ (?)ಯನ್ನು ಹಾಡಿ ಹೊಗಳಿದ್ದವು. ಅಂದು ಸ್ಪರ್ಧೆಗಳಿದು ಖಂಡನೆಯನ್ನು ಮಾಡಿದ ಅದೇ ವ್ಯಕ್ತಿಗಳು ಇಂದು ಸ್ವಾಮಿ ಅಸೀಮಾನಂದನ  ಪೂರ್ವಯೋಜಿತ ತಪ್ಪೊಪ್ಪಿಗೆಯನ್ನು ಸೈಂಟ್ ಆಗಸ್ಟಿನ್ ತಪ್ಪೊಪ್ಪಿಗೆಯಂತೆ ಆತನನ್ನು ಹೊಗಳಲು ವೇದಿಕೆಯನ್ನು ಏರುತ್ತಿದ್ದಾರೆ.  ಇದು ಆಡಳಿತಗಾರರ ತಾಳಕ್ಕೆ ತಕ್ಕ ಕುಣಿಯುವವರ ದ್ವಿಮುಖ ನೀತಿಯನ್ನು ಬಯಲಿಗೆಳೆದಿದೆ.

ಹಿಂದುತ್ವವಾದಿ ಶಕ್ತಿಗಳು ನಡೆಸಿದ ಬಾಂಬ್ ಸ್ಫೋಟಗಳಲ್ಲಿ ಬಂಧಿಸಲ್ಪಟ್ಟ ಅಮಾಯಕ ಯುವಕರ ಪರವಾದ ಧ್ವನಿ ಹಾಗೂ ಪ್ರತಿಭಟನೆಗಳು ದೃಶ್ಯ ಹಾಗೂ ಮುದ್ರಣ ಮಾಧ್ಯಮಗಳಲ್ಲಿ ಯಾಕೆ ಸ್ಥಳ ಪಡೆದಿಲ್ಲ? ಎಂಬುದು ಇನ್ನೊಂದು ಬಹುಮುಖ್ಯ ಪ್ರಶ್ನೆಯಾಗಿದೆ. ಪ್ರಗತಿಯು ಮುಸ್ಲಿಮರು, ದಲಿತರು ಹಾಗೂ ಬುಡಕಟ್ಟು ಜನಾಂಗದವರ ವಿರುದ್ಧ ಮಾಧ್ಯಮ ವರ್ಗದ ಪೂರ್ವಗ್ರಹದ ಆಸಕ್ತಿಗೆ ಹೊಂದಿಕೊಂಡಿರುತ್ತದೆಯೇ? ಎಂಬುದನ್ನು ಇದು ಸೂಚಿಸುತ್ತದೆ.

ನಾಗರಿಕತೆಯ ಪ್ರಮುಖ ಕಾರ್ಯಾಚರಣೆಯೆನ್ನಲಾಗುವ 'ಗ್ರೀನ್ ಹಂಟ್'ನ ಭಾಗವಾಗಿ ಮಧ್ಯ ಭಾರತದ ದರಿದ್ರ ಆದಿವಾಸಿಗಳ ಜೀವದ ಮೇಲೆ ಅಮೆರಿಕ ನಿರ್ಮಿತ ಬುಲ್ಡೋಝರ್‌ಗಳು ಚಲಿಸುವಾಗ ಪ್ರಧಾನ ಮಂತ್ರಿ ಅಥವಾ ಗೃಹ ಮಂತ್ರಿಗಳು ಏನೊಂದೂ ಪ್ರತಿಕ್ರಿಯಿಸಲಿಲ್ಲ. ಪೊಲೀಸರು, ಅರೆಸೇನಾ ಪಡೆಗಳು ಮತ್ತು ಕಾರ್ಪೊರೇಟ್ ಬೆಂಬಲಿತ ಪಡೆಗಳು ಆದಿವಾಸಿ ಜನರಲ್ಲಿ ಸಾಮಾನ್ಯ ಶತ್ರುತ್ವವನ್ನು ಉಂಟುಮಾಡಿದಾಗ ಸಾಂವಿಧಾನಿಕ ತತ್ವಗಳು ಮತ್ತು ಅದು ನೀಡಿದ ನಾಗರಿಕ ಹಕ್ಕಿನ ಭರವಸೆಗಳು ಮೂಕ ಪ್ರೇಕ್ಷಕವಾಗಿದ್ದವು. ಜಾಗತಿಕ ರಾಜಧಾನಿಗೆ ಸ್ಥಳವುಂಟುಮಾಡುವುದಕ್ಕಾಗಿ ಕಾರ್ಪೊರೇಟ್-ರಾಜ್ಯ ಜೊತೆಯಾಗಿ ನಡೆಸಿದ ದೊಡ್ಡ ಮಟ್ಟದ ಹಿಂಸೆಗೆ ನ್ಯಾಯಾಂಗ ತನಿಖೆ ಅಥವಾ ಇನ್ನಾವುದೇ ತನಿಖೆಯಿಲ್ಲ.

ವಿಶ್ವದ ಅತ್ಯಂತ ಭ್ರಷ್ಟ ಹಾಗೂ ಕನಿಷ್ಠ ದಕ್ಷ ವ್ಯವಸ್ಥೆಯಲ್ಲಿ, ಮಾಹಿತಿ ಹಕ್ಕು ಎಂಬುದು ಅಧಿಕಾರದಿಂದ ದೂರವಿರುವವರಿಗೆ ಒಂದು ಜೀವವಾಗಿದೆ. ಆದರೆ  ಸಮಾಜದಲ್ಲಿ ಎಲ್ಲಾ ಹಕ್ಕುಗಳನ್ನು ಅನುಭವಿಸುತ್ತಾ ಜೀವಿಸುತ್ತಿರುವ ವರ್ಗವು ಅದನ್ನು ಬುಡಮೇಲು ಮಾಡಿದೆ. ನಿರಂತರ ದಾಳಿ ಮತ್ತು ಸೆಹ್ಲಾ ಮಸೂದ್‌ರಂತಹ ಆರ್‌ಟಿಐ ಕಾರ್ಯಕರ್ತರ ಹತ್ಯೆಗಳು ಅವರು ಎದುರಿಸುತ್ತಿರುವ ಅಭದ್ರತೆಯನ್ನು ತೋರಿಸುತ್ತದೆ. ಮಾನವ ಹಕ್ಕು ಕಾರ್ಯಕರ್ತರಿಗೆ ಯಾವುದೇ ರಕ್ಷಣೆಯ ಅನುಪಸ್ಥಿತಿಯು ಪ್ರಜಾಪ್ರಭುತ್ವದ ಭಾವನೆಯು ಉಡುಗುತ್ತಿರುವುದಕ್ಕೆ ಸೂಚನೆಯಾಗಿದೆ.

ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯು ಸಂವಿಧಾನ ಉಲ್ಲಂಘನೆಗೆ ಜೀವಂತ ಉದಾಹರಣೆಯಾಗಿದೆ. ಇದರ ಬಲಿಪಶುಗಳು ಮತ್ತು ಜನರ ಅಸಮಾಧಾನ ಹಾಗೂ

49ನೇ ಪುಟಕ್ಕೆ...

■ ಅರಬಿ ಮೂಲ: ಸುವರುನ್ ಮಿನ್ ಹಯಾತಿಸ್ಸಹಾಬಾ
ಕನ್ನಡಕ್ಕೆ: ಮುರ್ಷಿದ್

# ಬರ್ರಾಅ್‌ಬ್‌ನು ಮಾಲಿಕ್(ರ)

*ಮುಸ್ಲಿಮ್ ಸೈನ್ಯದ ನಾಯಕತ್ವವನ್ನು ಬರ್ರಾಅ್(ರ)ಗೆ ನೀಡದಿರಿ. ರಣರಂಗದಲ್ಲಿ ಮುನ್ನುಗ್ಗುವುದನ್ನು ಬಿಟ್ಟರೆ ಬೇರಾವುದಕ್ಕೂ ತಯಾರಾಗದ ಅವರು ಸೈನ್ಯದ ಎಲ್ಲ ಸೈನಿಕರ ಮರಣಕ್ಕೆ ಕಾರಣರಾಗುವರೆಂದು ನಾನು ಭಯಪಡುತ್ತೇನೆ. -ಉಮರ್(ರ)*

★★★

ಕೆದರಿದ ಕೂದಲು, ಕೊಳೆ ತುಂಬಿದ ದೇಹ, ಅಸ್ಥಿಪಂಜರದಂತಿರುವ ರೂಪವಿರುವ ಬರ್ರಾಅ್ ಬಿನ್ ಮಾಲಿಕ್‌ರನ್ನು ಎರಡನೇ ಬಾರಿ ನೋಡುವ ಧೈರ್ಯವನ್ನು ಯಾರೂ ತೋರಲಾರರು.

ಆದರೆ ಬರ್ರಾಅ್(ರ)ರ ಕುರಿತಾದ ವಾಸ್ತವ ಸಂಗತಿ ಆ ರೀತಿಯಾಗಿಯಾರಲಿಲ್ಲ. ಮುಶ್ರಿಕ್‌ಗಳ ವಿರುದ್ಧದ ಮುಖಾಮುಖಿಯಲ್ಲಿ ನೂರಕ್ಕೂ ಮಿಕ್ಕಿದ ಎದುರಾಳಿಗಳನ್ನು ಒಂಟಿಯಾಗಿ ಎದುರಿಸಿದ ವೀರಕಲಿಯಾಗಿದ್ದವರು.

ಬರ್ರಾಅ್(ರ) ಶಕ್ತನೂ ವೀರ, ಶೂರ, ಪರಾಕ್ರಮಿಯೂ ಆಗಿದ್ದರು. ಭಯ ಎಂಬುದು ಅವರನ್ನು ಸ್ಪರ್ಶಿಸಲೇ ಇಲ್ಲ. ಇಸ್ಲಾಮ್ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಳ್ಳುತ್ತಿದ್ದ ವೇಳೆ ಉಮರ್(ರ) ದೂರದಲ್ಲಿರುವ ತನ್ನ ಪ್ರತಿನಿಧಿಗಳಿಗೆ ಈ ರೀತಿಯ ಸಂದೇಶವನ್ನು ಕಳಿಸಿದರು. ''ಬರ್ರಾಅ್‌ರಿಗೆ ನೀವು ಸೈನ್ಯದ ನಾಯಕತ್ವವನ್ನು ನೀಡಬಾರದು. ಭಯ ಏನೆಂದೇ ಅರಿಯದ ಅವರು ಯಾವುದೇ ಸಂದಿಗ್ಧಘಟ್ಟದಲ್ಲೂ ಮುನ್ನುಗ್ಗುವರು. ಅದು ಮುಸ್ಲಿಮರನ್ನು ಅಪಾಯಕ್ಕೀಡು ಮಾಡಿಬಿಡಬಹುದು.''

ಪ್ರವಾದಿ(ಸ)ರವರ ಸೇವಕನಾಗಿದ್ದ ಅನಸ್‌ಬ್‌ನು ಮಾಲಿಕ್(ರ)ರವರ ಸಹೋದರನೇ ಈ ಕಥಾನಾಯಕ. ಅವರ ವೀರ ಪರಾಕ್ರಮಗಳ ಕತೆಗಳನ್ನು ಬರೆಯಬೇಕಾದರೆ ಬಹಳಷ್ಟು ಹಾಳೆಗಳೇ ಬೇಕು. ಪ್ರವಾದಿ(ಸ)ಯವರೊಂದಿಗೆ ಸೇರಿಕೊಂಡ ಇಸ್ಲಾಮಿನ ಆರಂಭದ ದಿನಗಳಿಂದಲೇ ಬರ್ರಾಅ್‌ಬ್‌ನು ಮಾಲಿಕ್(ರ) ಅಷ್ಟೊಂದು ವಿಖ್ಯಾತಿಯನ್ನು ಹೊಂದಿದ್ದರು. ಅವೆಲ್ಲವನ್ನು ತಿಳಿಯಲು ಅವರ ರೋಚಕ ಜೀವನದ ಒಂದೇ ಒಂದು ಘಟನೆಯನ್ನು ವಿವರಿಸಿದರೆ ಸಾಕು.

ಪ್ರವಾದಿ(ಸ)ರವರು ದೈವಾಧೀನರಾಗಿ ಕೆಲವು ಗಂಟೆಗಳಷ್ಟೇ ಕಳೆದಿದೆ. ಇಸ್ಲಾಮಿಗೆ ಗುಂಪುಗುಂಪಾಗಿ ಬಂದ ಅರಬ್ ಗೋತ್ರಗಳು ಅಲ್ಲಾಹನ ಮಾರ್ಗದಿಂದ ಗುಂಪುಗುಂಪಾಗಿ ಹಿಂದೆ ಹೋಗುತ್ತಿದ್ದವು. ಮಕ್ಕಾ, ಮದೀನಾ ಮತ್ತು ತಾಯಿಫ್ ಜನರಲ್ಲಿ ಅಲ್ಲಾಹನ ವಿಶ್ವಾಸದಲ್ಲಿ ದೃಢವಾಗಿ ನಿಂತ ಕೆಲವರನ್ನು ಬಿಟ್ಟರೆ ಎಲ್ಲರೂ ಇಸ್ಲಾಮಿನಿಂದ ಹೊರಹೋಗುವಂತಹ ಪರಿಸ್ಥಿತಿ.

ಈ ವೇಳೆಯಲ್ಲಿ ಅಬೂಬಕರ್(ರ) ಪರ್ವತದಂತೆ ದೃಢವಾಗಿ ನಿಂತು ಅವೆಲ್ಲವನ್ನೂ ಎದುರಿಸಿದರು. ಮುಹಾಜಿರ್-ಅನ್ಸಾರ್‌ಗಳನ್ನು ಸೇರಿಸಿ ಹನ್ನೊಂದು ಸೈನಿಕ ಗುಂಪನ್ನು ಸಜ್ಜುಗೊಳಿಸಿದರು. ವಿವಿಧ ತರಹದ ಹನ್ನೊಂದು ಧ್ವಜಗಳನ್ನು ಸೈನ್ಯದ ನಾಯಕರಿಗೆ ನೀಡಿದರು. ನಂತರ ಬಂಡುಕೋರರನ್ನು ಹತ್ತಿಕ್ಕಲು ಮತ್ತು ಇಸ್ಲಾಮಿನಿಂದ ಹೊರ ಹೋದವರನ್ನು ಸತ್ಯದ ಮಾರ್ಗದಲ್ಲಿ ಹಿಂದಕ್ಕೆ ಕರೆಸಿಕೊಳ್ಳಲು ಅರೇಬಿಯಾದ ವಿವಿಧ ಕಡೆಗಳಿಗೆ ಅವರೆಲ್ಲರನ್ನೂ ಕಳುಹಿಸಿದರು. ಸತ್ಯಪಥದಿಂದ ಕವಲೊಡೆದವರನ್ನು ಖಡ್ಗದಿಂದಲೇ ತಿದ್ದಬೇಕೆಂದು ಅವರು ನಿರ್ದೇಶಿಸಿದರು.

ಪ್ರವಾದಿ ಎಂದು ವಾದಿಸಿ ರಂಗಪ್ರವೇಶ ಮಾಡಿದ ಮುಸೈಲಿಮನೆಂಬ ಮಹಾ ಸುಳ್ಳುಗಾರ ಬನೂ ಹನೀಫಾ ಗೋತ್ರದವನಾಗಿದ್ದನು. ಧರ್ಮಪರಿತ್ಯಾಗಿಗಳ ಗುಂಪಿನಲ್ಲಿ ಅವರು ಜನಬಲವುಳ್ಳ ಬಲಿಷ್ಠರಾಗಿದ್ದರು.

*‘ಓ ಜನರೇ, ಹಲ್ಲನ್ನು ಕಚ್ಚಿ ಹಿಡಿದು ನೀವು ಮುಂದುವರಿಯಿರಿ. ಶತ್ರುಗಳನ್ನು ಒಬ್ಬೊಬ್ಬರಂತೆ ಹೊಡೆದುರುಳಿಸಿ. ಓ ಜನರೇ, ಅಲ್ಲಾಹನಾಣೆ, ಈ ಕ್ಷಣದ ನಂತರ ನಾನು ಬೇರೇನೂ ಮಾತನಾಡಲಾರೆನು ಖಂಡಿತ. ಒಂದೋ ಮುಸೈಲಿಮನನ್ನು ಸೋಲಿಸಬೇಕು. ಇಲ್ಲದಿದ್ದರೆ ನಾನು ಅಲ್ಲಾಹನನ್ನು ದರ್ಶಿಸುತ್ತೇನೆ. ಈ ರೀತಿಯಲ್ಲಿ ನಾನು ನನ್ನ ಪಕ್ಷದಲ್ಲಿರುವ ನ್ಯಾಯವನ್ನು ಅಲ್ಲಾಹನ ಮುಂದೆ ಮಂಡಿಸುವೆನು. ಇವೆರೆಡರಲ್ಲಿ ಒಂದು ಸಂಭವಿಸುವ ವರೆಗೆ ನಾನು ಏನನ್ನೂ ಮಾತನಾಡಲಾರೆನು ಖಂಡಿತ!’’*

ಮುಸೈಲಿಮನೊಂದಿಗೆ ಅವನ ಗೋತ್ರದಲ್ಲಿರುವ ನಲ್ವತ್ತು ಸಾವಿರ ಜನರು ಯುದ್ಧಕ್ಕೆ ಸಿದ್ಧರಾಗಿ ಬಂದರು. ಅವರೆಲ್ಲರೂ ಮುಸೈಲಿಮನ ಗೋತ್ರದವರೆಂಬ ಕಾರಣದಿಂದ ಆತನನ್ನು ಬೆಂಬಲಿಸಿದರು. ಆದರೆ ಅವರಿಗೆ ಆತನೊಂದಿಗೆ ಅಷ್ಟೇನೂ ದೊಡ್ಡ ನಂಬಿಕೆ ಇರಲಿಲ್ಲ. ಆದುದರಿಂದಲೇ ಅವರಲ್ಲಿ ಕೆಲವರು ಹೇಳುತ್ತಿದ್ದರು.

‘‘ಮುಸೈಲಿಮ ಸುಳ್ಳನೆಂಬುದಕ್ಕೆ ನಾನು ಸಾಕ್ಷಿಯಾಗಿರುವೆನು. ಮಾತ್ರವಲ್ಲ, ಮುಹಮ್ಮದ್ (ಸ) ಸತ್ಯ ಪ್ರವಾದಿಯಾಗಿರುವರು. ಆದರೆ ರಬೀಅ್ ಗೋತ್ರದ ಸುಳ್ಳನು ಮುಳರ್‌ಗೋತ್ರದ ಸತ್ಯ ಪ್ರವಾದಿಗಿಂತಲೂ ನಮಗೆ ಮೆಚ್ಚುಗೆಯಾಗಿರುವನು.’’

ಇಕ್ರಮತುಬ್‌ನು ಅಬೂ ಜಹಲ್ (ರ) ರವರ ನಾಯಕತ್ವದಲ್ಲಿ ಮುಸೈಲಿಮನನ್ನು ಎದುರಿಸಲು ಮುಂದೆ ನುಗ್ಗಿದ ಮುಸ್ಲಿಂ ಸೈನ್ಯವನ್ನು ಮುಸೈಲಿಮನು ದೃಢವಾಗಿ ನಿಂತು ಎದುರಿಸಿ ಹಿಮ್ಮೆಟ್ಟಿಸಿದನು.

ನಂತರ ಅನ್ಸಾರ್‌ಗಳು ಮತ್ತು ಮುಹಾಜಿರ್‌ಗಳ ಪ್ರಮುಖರನ್ನು ಸೇರಿಸಿ ಖಾಲಿದುಬ್ ವಲೀದ್(ರ)ರ ನಾಯಕತ್ವದಲ್ಲಿ ಅವರನ್ನು ಎದುರಿಸಲು ಅಬೂಬಕರ್(ರ) ಸೈನ್ಯವನ್ನು ಕಳುಹಿಸಿದರು. ಈ ಸೈನ್ಯದ ಮುಂಚೂಣಿಯಲ್ಲಿ ಬರ್‍ರಾಅ್‌ಬಿನ್ ಮಾಲಿಕ್(ರ) ಮತ್ತು ಇತರ ಪ್ರಮುಖರು ಮುಖ್ಯವಾಗಿ ಇದ್ದರು.

ನಜ್ದ್‌ನ ಯಮಾಮದಲ್ಲಿ ಉಭಯ ಸೈನ್ಯವು ಮುಖಾಮುಖಿಯಾಯಿತು. ಈ ವೇಳೆ ಮುಸೈಲಿಮನ ಸೈನ್ಯವು ಮುಸ್ಲಿಮರ ಮೇಲೆ ತೀವ್ರ ಪ್ರಹಾರವನ್ನು ನಡೆಸಿತು. ಮುಸ್ಲಿಂ ಸೈನ್ಯದ ಪಾದತಲದಲ್ಲಿರುವ ಭೂಮಿಯು ಕಂಪಿಸುವಂತೆ ಅವರಿಗೆ ತೋರಿತು. ನಿಂತಿರುವ ಜಾಗದಿಂದ ಕೆಲವರಂತೂ ಹಿಂಜರಿಯುವಷ್ಟರ ಮಟ್ಟಿಗೆ ಎದುರಾಳಿಗಳ ಆಕ್ರಮಣದ ತೀವ್ರತೆ ಇತ್ತು. ಆ ಘಟ್ಟದಲ್ಲಿ ಮುಸೈಲಿಮನ ಜನರು ಖಾಲಿದುಬ್‌ನು ವಲೀದರ ಗುಡಾರಕ್ಕೆ ದಾಳಿ ನಡೆಸಿದರು. ಮುಸ್ಲಿಮರ ಕೇಂದ್ರದಿಂದಲೇ ಅವರನ್ನು ಹೊಡೆದೋಡಿಸಿದರು. ಅದ್ಯಾರೋ ಮಧ್ಯಪ್ರವೇಶಿಸಿ ಖಾಲಿದ್(ರ) ಪತ್ನಿಯನ್ನು ರಕ್ಷಿಸಿದರು. ಇಲ್ಲದಿದ್ದರೆ ಅವರು ಕೊಲ್ಲಲ್ಪಡುತ್ತಿದ್ದರು.

ನಾವು ಗಂಭೀರವಾದ ಆಪತ್ತಿನಲ್ಲಿ ಸಿಲುಕಿಕೊಂಡಿದ್ದೇವೆಂದು ಆಗ ಮುಸ್ಲಿಮರಿಗೆ ತಿಳಿಯಿತು. ನಾವೇನಾದರೂ ಮುಸೈಲಿಮನ ಸೈನ್ಯದ ಮುಂದೆ ಸೋತು ಬಿಟ್ಟರೆ ಇಂದಿನಿಂದ ಇಸ್ಲಾಮ್‌ಗೆ ಉಳಿಗಾಲ ಇರಲಾರದು. ಯಾವುದೇ ಜೊತೆಗಾರನಿಲ್ಲದೆ ಅಲ್ಲಾಹನನ್ನು ಆರಾಧಿಸುವ ಸನ್ನಿವೇಶ ಅರೇಬಿಯಾದ ಭೂಮಿಯಿಂದ ಶಾಶ್ವತವಾಗಿ ಕೊನೆಗೊಳ್ಳುವುದು ಅವರಿಗೆ ಸ್ಪಷ್ಟವಾಯಿತು.

ಖಾಲಿದ್ ಬಿನ್ ವಲೀದ್(ರ)ರವರು ತಕ್ಷಣ ಸೈನ್ಯವನ್ನು ಪುನಃ ಕ್ರಮೀಕರಿಸಿದರು. ಅನ್ಸಾರ್ ಮತ್ತು ಮುಹಾಜಿರ್‌ಗಳನ್ನು ಬೇರೆ ಬೇರೆಯಾಗಿ ಸಾಲು ನಿಲ್ಲಿಸಿದರು. ಇತ್ತೀಚೆಗೆ ಇಸ್ಲಾಮ್‌ಗೆ ಪ್ರವೇಶಿಸಿದ ಬದವೀ ಗೋತ್ರದ ಸೈನಿಕರನ್ನು ಬೇರೆಯಾಗಿ ನಿಲ್ಲಿಸಿದರು. ಒಂದೇ ಕುಟುಂಬದಲ್ಲಿರುವವರನ್ನು ಒಂದೇ ಧ್ವಜದ ಅಡಿಯಲ್ಲಿ ನಿಲ್ಲಿಸಿದರು. ಯುದ್ಧರಂಗದಲ್ಲಿ ಪ್ರತಿಯೊಂದು ಗುಂಪಿನ ಸಾಮರ್ಥ್ಯ ಮತ್ತು ಸಮಸ್ಯೆಗಳನ್ನು ಬೇರ್ಪಡಿಸಿ ತಿಳಿಯಲು, ಯಾವ ಗುಂಪಿನಲ್ಲಿ ಮುಸ್ಲಿಮರು ದುರ್ಬಲರಾಗಿದ್ದಾರೆಂದು ತಿಳಿಯಲು ಮತ್ತು ಇನ್ನಷ್ಟು ಸೈನಿಕ ಸಹಾಯ ದೊರಕಬೇಕಾದುದು ಎಲ್ಲಿಗೆ? ಇವೆಲ್ಲವೂ ವ್ಯಕ್ತವಾಗಿ ತಿಳಿಯಲು ಖಾಲಿದ್(ರ)ರವರು ಈ ರೀತಿ ಮಾಡಿದರು.

ನಂತರ ಉಭಯ ಸೈನ್ಯದ ಮಧ್ಯೆ ಬಿರುಸಿನ ಹೋರಾಟವು ಮುಂದುವರಿಯಿತು. ಇಷ್ಟೊಂದು ವಿನಾಶಕಾರಿಯಾದ ಯುದ್ಧವನ್ನು ಮುಸ್ಲಿಮರಿಗೆ ಈ ಹಿಂದೆ ಎದುರಿಸಬೇಕಾಗಿ ಬಂದಿರಲಿಲ್ಲ. ಕಷ್ಟ ಮತ್ತು ಮರಣವನ್ನು ಸ್ವೀಕರಿಸಬೇಕಾಗಿ ಬಂದರೂ ಮುಸೈಲಿಮನ ಪಡೆಯು ಬಂಡೆಯಂತೆ ಗಟ್ಟಿಯಾಗಿ ನಿಂತಿತ್ತು.

ಈ ಬಾರಿ ಮುಸ್ಲಿಮರು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದರು. ಶೌರ್ಯದ ಹೊಸ ವೀರಗಾಥೆಯನ್ನು ಒಂದರ ನಂತರ ಒಂದು ಎಂಬಂತೆ ಅವರು ಸೃಷ್ಟಿಸಿದರು.

ಅನ್ಸಾರ್‌ಗಳ ಧ್ವಜವಾಹಕನಾದ ಸಾಬಿತ್ ಬಿನ್ ಖೈಸ್(ರ) ತನ್ನೆರಡೂ ಕಾಲುಗಳನ್ನು ಮಂಡಿಯ

ಕೆಳಗಡೆವರೆಗೆ ಗುಂಡಿತೋಡಿ ಮಣ್ಣಿನಲ್ಲಿ ಹೂತಿಟ್ಟು ಯಾವುದೇ ಕಾರಣದಿಂದಲೂ ಹಿಂಜರಿಯುವ ಪ್ರಶ್ನೆಯೇ ಇಲ್ಲ ಎಂಬ ದೃಢಚಿತ್ತದೊಂದಿಗೆ ನಿಂತು ಹೋರಾಟದ ಕೊನೆಯಲ್ಲಿ ತೀವ್ರವಾಗಿ ಗಾಯಗೊಂಡು ಹುತಾತ್ಮರಾದರು.

ಈ ಮಧ್ಯೆ ಉಮರುಬ್‌ನುಲ್ ಖತ್ತಾಬ್(ರ) ರವರ ಸಹೋದರ ಝೈದ್ ಬಿನ್ ಖತ್ತಾಬ್(ರ) ಮುಸ್ಲಿಮರೊಂದಿಗೆ ಈ ರೀತಿ ಕೂಗಿ ಹೇಳಿದರು.

'ಓ ಜನರೇ, ಹಲ್ಲನ್ನು ಕಚ್ಚಿ ಹಿಡಿದು ನೀವು ಮುಂದುವರಿಯಿರಿ. ಶತ್ರುಗಳನ್ನು ಒಬ್ಬೊಬ್ಬರಂತೆ ಹೊಡೆದುರುಳಿಸಿ. ಓ ಜನರೇ, ಅಲ್ಲಾಹನಾಣೆ, ಈ ಕ್ಷಣದ ನಂತರ ನಾನು ಬೇರೇನೂ ಮಾತನಾಡಲಾರೆನು ಖಂಡಿತ. ಒಂದೋ ಮುಸೈಲಿಮನನ್ನು ಸೋಲಿಸಬೇಕು. ಇಲ್ಲದಿದ್ದರೆ ನಾನು ಅಲ್ಲಾಹನನ್ನು ದರ್ಶಿಸುತ್ತೇನೆ. ಈ ರೀತಿಯಲ್ಲಿ ನಾನು ನನ್ನ ಪಕ್ಷದಲ್ಲಿರುವ ನ್ಯಾಯವನ್ನು ಅಲ್ಲಾಹನ ಮುಂದೆ ಮಂಡಿಸುವೆನು. ಇವೆರೆಡರಲ್ಲಿ ಒಂದು ಸಂಭವಿಸುವ ವರೆಗೆ ನಾನು ಏನನ್ನೂ ಮಾತನಾಡಲಾರೆನು ಖಂಡಿತ!''

ಮುಸ್ಲಿಂ ಸೈನ್ಯಕ್ಕೆ ಧೈರ್ಯವನ್ನು ನೀಡುತ್ತಾ, ಶಕ್ತಿ-ಯುಕ್ತಿಗಳನ್ನೆಲ್ಲಾ ಪ್ರಯೋಗಿಸಿ ಕೊನೆಯುಸಿರಿನ ವರೆಗೂ ಅವರು ರಣರಂಗದಲ್ಲಿ ಓಡಾಡಿದರು.

ಇನ್ನೊಂದು ತುದಿಯಲ್ಲಿ ಮುಹಾಜಿರ್‌ಗಳ ಧ್ವಜವನ್ನು ಅಬೂಹುದಾಫ(ರ)ರವರ ನೇತೃತ್ವದಲ್ಲಿ ಸಾಲಿಂ(ರ)ರವರು ಕೈಯಲ್ಲಿ ಹಿಡಿದು ದೃಢವಾಗಿ ನಿಂತಿದ್ದರು. ಅವರ ಪಾದಗಳು ಕಂಪಿಸಿ ಬಿಟ್ಟೀತೇ ಎಂದು ಅವರ ಜೊತೆಗಾರರು ಭಯಪಟ್ಟರು ಮತ್ತು ಅವರೆಲ್ಲರೂ ಕೇಳಿದರು: ''ನಾವೆಲ್ಲರೂ ತಮ್ಮ ಮುಂದೆ ನಿಂತರೆ ಹೇಗೆ?''

''ಅದೇನು, ನೀವು ನನ್ನ ಮುಂದೆ ನಿಲ್ಲುವುದೇ? ಹಾಗಿದ್ದರೆ ಈ ಕುರ್‌ಆನ್‌ನ್ನು ವಹಿಸಿಕೊಂಡು ನಾನೇಕೆ ಜೀವಿಸಬೇಕು?'' ಅವರು ಪ್ರತಿಕ್ರಿಯಿಸಿದರು.

ನಂತರ ಶತ್ರುಗಳ ಮೇಲೆ ಅವರು ಏರಿ ಹೋದರು. ಕೊನೆಗೆ ಶತ್ರುಗಳ ದಾಳಿಯಿಂದ ಗಾಯಗೊಂಡು ಶಹೀದ್ ಆದರು.

ಆದರೆ ಇವರೆಲ್ಲರ ವೀರಾವೇಶವು ಬರ್ರಾಅ್ ಬಿನ್ ಮಾಲಿಕ್(ರ)ರವರ ಮುಂದೆ ಏನೂ ಆಗಿರಲಿಲ್ಲ.

ಯುದ್ಧವು ತೀಕ್ಷ್ಣಗೊಂಡಾಗ ಖಾಲಿದ್ (ರ) ಬರ್ರಾಅ್ ಬಿನ್ ಮಾಲಿಕ್(ರ)ರತ್ತ ತಿರುಗಿ ಹೇಳಿದರು: ''ಓ ಅನ್ಸಾರ್ ಯುವಕನೇ, ಶತ್ರುಗಳ ಮಧ್ಯೆ ಮುನ್ನುಗ್ಗಿರಿ.''

ಅದನ್ನು ಕೇಳಿದ ತನ್ನ ಮುಂದಿರುವ ಸಂಗಡಿಗರೊಂದಿಗೆ ಈ ರೀತಿ ಹೇಳಿದರು. ''ಓ ಅನ್ಸಾರ್ ಸಮುದಾಯವೇ, ಮದೀನಾಗೆ ಮರಳಿ ಹೋಗಬೇಕೆಂಬ ನಿಮ್ಮ ವ್ಯಾಮೋಹವು ನಿಮ್ಮನ್ನು ಸತ್ಯ ನಿಷೇಧಿಗಳಾಗಿ ಮಾರ್ಪಡಿಸದಿರಲಿ. ಈ ದಿನದ ನಂತರ ಮದೀನಾ ಇಲ್ಲ; ಏಕನಾದ ಅಲ್ಲಾಹನು ಮಾತ್ರ, ನಂತರ ಅನುಗ್ರಹಗಳು ತುಂಬಿದ ಸ್ವರ್ಗ!

ನಂತರ ಮುಶ್ರಿಕರ ಗುಂಪಿನ ಮೇಲೆ ಅವರು ಮಿಂಚಿನಂತೆ ಎರಗಿದರು. ಶಸ್ತ್ರಧಾರಿಗಳಾದ ಅನುಚರರು ಅವರನ್ನು ಅನುಸರಿಸಿದರು. ಸೈನಿಕ ಶತ್ರುಗಳ ಗುಂಪನ್ನು ಭೇದಿಸಿ ಅವರು ಮುನ್ನುಗ್ಗಿದರು. ನಂತರ ಅಲ್ಲಾಹನ ಶತ್ರುಗಳನ್ನು ಒಬ್ಬರ ನಂತರ ಒಬ್ಬರನ್ನು ಕತ್ತರಿಸುತ್ತಾ ಮುಂದುವರಿದರು. ಮುಸೈಲಿಮ ಮತ್ತು ಗುಂಪಿನ ಪಾದಗಳು ನಡುಗತೊಡಗಿದವು. ಅವರೆಲ್ಲರೂ ಪಕ್ಕದ ತೋಟವೊಂದಕ್ಕೆ ನುಗ್ಗಿ ಪಾರಾದರು. ಇತಿಹಾಸದಲ್ಲಿ 'ಮೃತ್ಯುತೋಟ' ಎಂದು ಅರಿಯಲ್ಪಟ್ಟ ಅದರಲ್ಲಿ ಬೃಹತ್ ಸಂಖ್ಯೆಯಲ್ಲಿ ಕೊಲ್ಲಲ್ಪಟ್ಟರು.

ಎತ್ತರದ ಭಿತ್ತಿಯಿರುವ ವಿಶಾಲವಾಗಿ ಹರಡಿಕೊಂಡ ತೋಟವಾಗಿತ್ತದು. ಮುಸೈಲಿಮ ಮತ್ತು ಆತನ ಸಾವಿರಾರು ಅನುಚರರು ಆ ತೋಟದೊಳಗೆ ನುಗ್ಗಿ ಅದರ ದ್ವಾರಗಳನ್ನು ಮುಚ್ಚಿಬಿಟ್ಟರು. ಮುಸ್ಲಿಂ ಸೈನ್ಯವು ಆ ಕೋಟೆಯ ಹೊರಗಡೆ ನಿಂತು ದಿಗ್ಬಂಧನವನ್ನು ಹೇರಿದರು. ಆದರೆ ಶತ್ರುಗಳು ತೋಟದ ಭಿತ್ತಿಗಳ ಮೇಲೇರಿ ಮುಸ್ಲಿಮರ ಮುಂದೆ ಬಾಣವನ್ನು ಎಸೆಯತೊಡಗಿದರು. ವರ್ಷಧಾರೆಯಂತೆ ಬಾಣಗಳು ಮುಸ್ಲಿಮ್ ಸೈನ್ಯದ ಮೇಲೆ ವರ್ಷಿಸತೊಡಗಿದವು.

***■ ಬರ್ರಾಅ್ ಬಿನ್ ಮಾಲಿಕ್(ರ)ರವರ ದೇಹವು ಗಾಯಗಳಿಂದ ತುಂಬಿ ಹೋಗಿತ್ತು. ಸೈನಿಕರು ಅವರನ್ನು ಎತ್ತಿಕೊಂಡು ಹೋದರು. ಗಾಯಗಳನ್ನು ಕಟ್ಟಲು ಮತ್ತು ಚಿಕಿತ್ಸೆ ನಡೆಸಲು ಅವರು ವ್ಯವಸ್ಥೆ ಮಾಡಿದರು. ಸುಮಾರು ಒಂದು ತಿಂಗಳ ಅವಧಿಯವರೆಗೆ ಬರ್ರಾಅ್(ರ)ರಿಗೆ ಚಿಕಿತ್ಸೆ ನೀಡಲಾಯಿತು. ಅದರ ಜವಾಬ್ದಾರಿಯನ್ನು ಸೇನಾಧಿಕಾರಿ ಖಾಲಿದ್ ಬಿನ್ ವಲೀದ್(ರ)ರವರು ಸ್ವತಃ ವಹಿಸಿದರು. ಅಲ್ಲಾಹನ ವಿಶೇಷ ಅನುಗ್ರಹವೆಂಬಂತೆ ಅವರ ಮೇಲಿರುವ ಗಾಯಗಳೆಲ್ಲವೂ ಆಶ್ಚರಿಯಂತೆ ವಾಸಿಯಾದವು ಮತ್ತು ಅವರು ಆರೋಗ್ಯವನ್ನು ಮರಳಿ ಪಡೆದರು. ಮುಸ್ಲಿಮ್ ಸೇನೆಗೆ ಆ ವೀರ ಯೋಧನ ಕರಗಳಿಂದ ಆಶ್ಚರಿಯ ಗೆಲುವು ದೊರಕುವಂತಾಯಿತು.■***

**ಅಭಿಲಾಷೆಯನ್ನು ಕೈ ಬಿಡದೆ ಬರ್ರಾಅ್(ರ) ನಂತರದ ಹಲವು ಯುದ್ಧಗಳಲ್ಲಿ ಒಂದರ ನಂತರ ಒಂದರಂತೆ ಭಾಗವಹಿಸಿದರು. ಹುತಾತ್ಮನಾಗಬೇಕೆಂಬ ತನ್ನ ಅತೀವ ಅಭಿಲಾಷೆ ಮತ್ತು ಪುಣ್ಯ ಪ್ರವಾದಿ(ಸ)ಯ ಸನ್ನಿಧಿಗೆ ತಲುಪಬೇಕೆಂಬ ವಾಂಛೆಯಲ್ಲೇ ಅವರು ತೇಲಾಡುತ್ತಿದ್ದರು. ಅದೇ ವೇಳೆ ಪರ್ಷಿಯಾ ಸಾಮ್ರಾಜ್ಯದೊಂದಿಗಿರುವ ಯುದ್ಧಕ್ಕೆ ವೇದಿಕೆ ಸಜ್ಜಾಗುತ್ತಿತ್ತು.**

ಆ ದೃಶ್ಯವಂತೂ ಹೃದಯವನ್ನು ಕಲಕುವಂತಿತ್ತು.

ಬರ್ರಾಅ್ ಬಿನ್ ಮಾಲಿಕ್(ರ)ರಿಗೆ ಅದನ್ನು ಹೆಚ್ಚುಕಾಲ ನೋಡಿ ಸಹಿಸಲು ಸಾಧ್ಯವಾಗಲಿಲ್ಲ. ಅವರು ಧೈರ್ಯದಿಂದ ಮುಂದೆ ಬಂದು ಹೇಳಿದರು:

''ಓ ಜನರೇ, ನೀವು ನನ್ನನ್ನು ಹಲ್ಲುಗಳಿರುವ ಚಕ್ರವೊಂದಕ್ಕೆ ಬಂಧಿಸಿ. ನಂತರ ಆ ಚಕ್ರವನ್ನು ಕಬ್ಬಿಣದ ಸಲಾಕೆಯೊಂದರಲ್ಲಿ ಎತ್ತಿ ತೋಟದ ಬಿತ್ತಿಯ ದ್ವಾರದೊಳಗೆ ಎಸೆಯಿರಿ. ಒಂದೋ ನಾನು ಶಹೀದಾಗುವೆನು. ಇಲ್ಲದಿದ್ದರೆ ತೋಟದ ಮುಖ್ಯದ್ವಾರವನ್ನು ನಿಮಗಾಗಿ ನನಗೆ ತೆರೆದು ಬಿಡಲು ಸಾಧ್ಯವಾಗಬಹುದು.

ನಿಮಿಷಾರ್ಧದಲ್ಲಿ ಹಲ್ಲಿನ ಚಕ್ರದಲ್ಲಿ ಕುಳಿತು ಸಿಲುಕಿಕೊಂಡಿರುವ ಬರ್ರಾಅ್(ರ)ರನ್ನು ಸಲಾಕೆಯಲ್ಲಿ ಎತ್ತಿ ಆ ಮೃತ್ಯುತೋಟಕ್ಕೆ ಅವರು ಎಸೆದರು. ಬರಿ ತೆಳ್ಳಗಾಗಿರುವ ಅವರನ್ನು ಆ ರೀತಿ ಎಸೆಯುವುದು ಅವರಿಗೆ ಕಷ್ಟವಾಗಲಿಲ್ಲ. ಮುಸೈಲಿನ ಸಾವಿರಾರು ಸೈನಿಕರ ಮಧ್ಯೆ ಬರ್ರಾಅ್(ರ)ರವರು ಮಿಂಚಿನಂತೆ ಹೋಗಿ ಅಪ್ಪಳಿಸಿದರು. ನಂತರ ಅಷ್ಟೇ ವೇಗದಲ್ಲಿ ಮೇಲೆದ್ದ ಅವರು ತನ್ನನ್ನು ಸುತ್ತುವರಿದ ಹತ್ತಾರು ವೈರಿಗಳನ್ನು ಕತ್ತರಿಸಿ ಹಾಕಿದರು ಮತ್ತು ತೋಟದ ಭಿತ್ತಿಯ ಬಾಗಿಲನ್ನು ಮುಸ್ಲಿಮರಿಗೆ ತೆರೆದುಕೊಟ್ಟರು. ವೈರಿಗಳು ಅವರ ಮೇಲೆ ಬಾಣಗಳ ಸುರಿಮಳೆಯನ್ನೇ ಹರಿಸಿದರು. ಬಾಣಗಳು ತರಚಿ, ಖಡ್ಗಗಳ ಹೊಡೆತದಿಂದ ಎಂಭತ್ತಕ್ಕೂ ಮಿಕ್ಕಿ ಗಾಯಗಳು ಬರ್ರಾಅ್(ರ)ರವರ ದೇಹದ ಮೇಲಿದ್ದವು.

ಮುಸ್ಲಿಮ್ ಸೈನ್ಯವು ತೋಟದ ದ್ವಾರದ ಒಳಗೆ ಒಮ್ಮೆಲೆ ಪ್ರವೇಶಿಸಿದರು. 'ಮೃತ್ಯು ತೋಟ'ದ ಭಿತ್ತಿಯಯ ಒಳಗಡೆ ಅವಿತಿದ್ದ ಮುಸೈಲಿಮನ ಅನುಚರರನ್ನು ಒಬ್ಬರ ನಂತರ ಒಬ್ಬರನ್ನು ತಮ್ಮ ಖಡ್ಗಗಳಿಗೆ ಬಲಿಯಾಗಿಸಿದರು. ಸುಮಾರು ಇಪ್ಪತ್ತು ಸಾವಿರ ಸತ್ಯ ನಿಷೇಧಿಗಳು ಅಲ್ಲಿ ವಧಿಸಲ್ಪಟ್ಟರು. ಕೊನೆಗೆ ಮುಸೈಲಿಮನನ್ನೂ ಸೆರೆಹಿಡಿದು ಮುಸ್ಲಿಮರು ಕೊಂದು ಹಾಕಿದರು.

ಬರ್ರಾಅ್ ಬಿನ್ ಮಾಲಿಕ್(ರ)ರವರ ದೇಹವು ಗಾಯಗಳಿಂದ ತುಂಬಿ ಹೋಗಿತ್ತು. ಸೈನಿಕರು ಅವರನ್ನು ಎತ್ತಿಕೊಂಡು ಹೋದರು. ಗಾಯಗಳನ್ನು ಕಟ್ಟಲು ಮತ್ತು ಚಿಕಿತ್ಸೆ ನಡೆಸಲು ಅವರು ವ್ಯವಸ್ಥೆ ಮಾಡಿದರು. ಸುಮಾರು ಒಂದು ತಿಂಗಳ ಅವಧಿಯವರೆಗೆ ಬರ್ರಾಅ್(ರ)ರಿಗೆ ಚಿಕಿತ್ಸೆ ನೀಡಲಾಯಿತು. ಅದರ ಜವಾಬ್ದಾರಿಯನ್ನು ಸೇನಾಧಿಕಾರಿ ಖಾಲಿದ್ ಬಿನ್ ವಲೀದ್(ರ)ರವರು ಸ್ವತಃ ವಹಿಸಿದರು. ಅಲ್ಲಾಹನ ವಿಶೇಷ ಅನುಗ್ರಹವೆಂಬಂತೆ ಅವರ ಮೇಲಿರುವ ಗಾಯಗಳೆಲ್ಲವೂ ಅಚ್ಚರಿಯಂತೆ ವಾಸಿಯಾದವು ಮತ್ತು ಅವರು ಆರೋಗ್ಯವನ್ನು ಮರಳಿ ಪಡೆದರು. ಮುಸ್ಲಿಮ್ ಸೇನೆಗೆ ಆ ವೀರ ಯೋಧನ ಕರಗಳಿಂದ ಅಚ್ಚರಿಯ ಗೆಲುವು ದೊರಕುವಂತಾಯಿತು.

'ಮೃತ್ಯುತೋಟ'ದ ಯುದ್ಧದಲ್ಲಿ ತಾನು ಶಹೀದ್ ಆಗುವೆನೆಂದು ಬರ್ರಾಅ್ ಬಿನ್ ಮಾಲಿಕ್(ರ)ರವರು ಭಾವಿಸಿದ್ದರು. ಅದಕ್ಕಾಗಿ ಅವರು ತುಂಬಾ ಆಸೆಪಟ್ಟಿದ್ದರು.

ಅಭಿಲಾಷೆಯನ್ನು ಕೈ ಬಿಡದೆ ಬರ್ರಾಅ್(ರ) ನಂತರದ ಹಲವು ಯುದ್ಧಗಳಲ್ಲಿ ಒಂದರ ನಂತರ ಒಂದರಂತೆ ಭಾಗವಹಿಸಿದರು. ಹುತಾತ್ಮನಾಗಬೇಕೆಂಬ ತನ್ನ ಅತೀವ ಅಭಿಲಾಷೆ ಮತ್ತು ಪುಣ್ಯ ಪ್ರವಾದಿ(ಸ)ಯ ಸನ್ನಿಧಿಗೆ ತಲುಪಬೇಕೆಂಬ ವಾಂಛೆಯಲ್ಲೇ ಅವರು ತೇಲಾಡುತ್ತಿದ್ದರು. ಅದೇ ವೇಳೆ ಪರ್ಷಿಯಾ ಸಾಮ್ರಾಜ್ಯದೊಂದಿಗಿರುವ ಯುದ್ಧಕ್ಕೆ ವೇದಿಕೆ ಸಜ್ಜಾಗುತ್ತಿತ್ತು.

ಇಸ್ತರ್ ನಗರದಲ್ಲಿ ಪರ್ಷಿಯನ್ನರೊಂದಿಗೆ ಮುಸ್ಲಿಮರು ಮುಖಾಮುಖಿಯಾದರು. ಎತ್ತರದ ಭಿತ್ತಿಗಳಿರುವ ಕೋಟೆಯೊಳಗೆ ಪರ್ಷಿಯನ್ನರು ಸುರಕ್ಷಿತರಾಗಿದ್ದಾರೆ. ಮುಸ್ಲಿಮ್ ಸೈನ್ಯವು ಕೋಟೆಯನ್ನು ಸುತ್ತುವರಿಯಿತು. ದಿಗ್ಬಂಧವನ್ನು ತೀವ್ರಗೊಳಿಸಿದ ಮುಸ್ಲಿಮರ ತಂತ್ರದಿಂದ ಪರ್ಷಿಯನ್ನರು ಕಂಗಾಲಾದರು. ತಲೆಕೆಟ್ಟು ಹೋಗುವಷ್ಟು ಯೋಚಿಸಿದ ನಂತರ ಅವರು ಉಪಾಯವೊಂದನ್ನು ಹೂಡಿದರು. ಕಬ್ಬಿಣದ ನೀಳಲಾದ ಸಂಕೋಲೆಯ ತುದಿಗೆ ಚೂಪಾದ ಕಬ್ಬಿಣದ ಆಯುಧವೊಂದನ್ನು ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಿ ಸಿಲುಕಿಸಿ ಅವರು ಕೋಟೆಯ ಹೊರ ಭಾಗಕ್ಕೆ ಮುಸ್ಲಿಮರ ಗುಂಪಿನ ಮಧ್ಯೆ ಎಸೆಯತೊಡಗಿದರು. ಒಮ್ಮೆಯೇನಾದರೂ ಅದು ದೇಹದ ಭಾಗಕ್ಕೆ ಹೊಕ್ಕರೆ ಅದನ್ನು

ಪುನಃ ಹೊರತೆಗೆಯುವುದು ಸುಲಭದ ಮಾತಾಗಿರಲಿಲ್ಲ. ಆಯುಧವು ಯಾವುದಾದರೂ ದೇಹದಲ್ಲಿ ಹೊಕ್ಕಿತು ಎಂದು ತಿಳಿದರೆ ತಕ್ಷಣ ಪರ್ಷಿಯನ್ನರು ಸಂಕೋಲೆಯನ್ನು ಹಿಡಿದು ಒಳಕ್ಕೆಳೆಯುವರು. ಆ ವೇಳೆ ಸಂಕೋಲೆಯೊಂದಿಗೆ ಆಯುಧದಲ್ಲಿ ಸಿಲುಕಲ್ಪಟ್ಟ ವ್ಯಕ್ತಿಯೂ ಒಳಕ್ಕೆಳೆಯಲ್ಪಡುವನು. ಒಂದೋ ಮೃತಗೊಂಡು, ಇಲ್ಲದಿದ್ದರೆ ಜೀವನ್ಮರಣ ಸ್ಥಿತಿಯಲ್ಲಿ.

ಇದೀಗ ಬೆಂಕಿಯಲ್ಲಿ ಕಾಯಿಸಲ್ಪಟ್ಟ ಆಯುಧವು ಬರ್ರಾಅ್(ರ)ರವರ ಸಹೋದರ ಅನಸ್ ಬಿನ್ ಮಾಲಿಕ್(ರ)ರವರ ದೇಹಕ್ಕೆ ಸಿಲುಕಿ ತರಚಿಕೊಂಡಿತು. ಆ ದೃಶ್ಯವನ್ನು ಬರ್ರಾಅ್ ಬಿನ್ ಮಾಲಿಕ್(ರ)ರವರು ನೋಡಿದಾಕ್ಷಣ ಅವರು ಕೋಟೆಯ ಗೋಡೆಯ ಮೇಲೇರಿ ತನ್ನ ಸಹೋದರನನ್ನು ಎಳೆದುಕೊಂಡು ಹೋಗುತ್ತಿರುವ ಸಂಕೋಲೆಯನ್ನು ಹಾರಿ ಹಿಡಿದರು. ಸಂಕೋಲೆಯ ಒಂದು ತುದಿಯಲ್ಲಿ ಕಾದು ಕೆಂಪಗಾದ ಆಯುಧದಲ್ಲಿ ಸಿಲುಕಿಕೊಂಡಿರುವ ಸಹೋದರನನ್ನು ತನ್ನ ಸ್ವಂತ ಕೈಗಳಿಂದ ರಕ್ಷಿಸಲು ಪ್ರಯತ್ನಿಸಿದರು. ಆ ವೇಳೆ ಬರ್ರಾಅ್(ರ)ರವರ ಕೈಗಳು  ಸುಟ್ಟು ಬೆಂದು ಹೋಯಿತು. ಮಾಂಸವು ಬೆಂದ ವಾಸನೆ ಹೊರಬಂದಿತು. ಅದಾವುದನ್ನೂ ಗಮನಿಸದೆ ಬರ್ರಾಅ್(ರ)ರವರು ತನ್ನ ಸಹೋದರನನ್ನು ಶತ್ರುಗಳ ಆಯುಧದಿಂದ ರಕ್ಷಿಸಿಯೇ ಬಿಟ್ಟರು. ಅದರೊಂದಿಗೆ ಬರ್ರಾಅ್(ರ) ನೆಲದ ಮೇಲೆ ಉರುಳಿ ಬಿಟ್ಟರು. ಬರ್ರಾಅ್(ರ)ರವರ ಕೈಗಳಲ್ಲಿ ಇದೀಗ ಎಲುಬು ಮಾತ್ರವೇ ಬಾಕಿಯಾಗಿತ್ತು. ಎಳ್ಳಷ್ಟೂ ಮಾಂಸವು ಅಲ್ಲಿ ಬಾಕಿವುಳಿದಿರಲಿಲ್ಲ.

ತನಗೆ ಶಹಾದತ್ ಒದಗಿ ಬರಲೆಂದು ಬರ್ರಾಅ್ ಬಿನ್ ಮಾಲಿಕ್(ರ) ಯುದ್ಧ ಭೂಮಿಯಲ್ಲಿ ಅತ್ತು ಪ್ರಾರ್ಥಿಸಿದರು. ಅಲ್ಲಾಹನು ಆ ಪ್ರಾರ್ಥನೆಯನ್ನು ಕೊನೆಗೂ ಸ್ವೀಕರಿಸಿದನು. ಅಲ್ಲಾಹನ ಸನ್ನಿಧಿಯನ್ನು ಸೇರಲು ಮೋಹಿಸಿದ ಬರ್ರಾಅ್ ಬಿನ್ ಮಾಲಿಕ್(ರ) ರಣರಂಗದಲ್ಲಿ ಶಹೀದಾದರು.

ಸ್ವರ್ಗಲೋಕದಲ್ಲಿ ಬರ್ರಾಅ್(ರ)ರವರ ಮುಖವನ್ನು ಅಲ್ಲಾಹನು ಅತ್ಯಂತ ಸುಂದರಗೊಳಿಸಲಿ. ತಾನು ಅತ್ಯಂತ ಪ್ರೀತಿಸಿದ ಪ್ರವಾದಿ(ಸ)ಯನ್ನು ಮುಖತಃ ಕಂಡು ಆ ಕಣ್ಣುಗಳು ತಂಪಾಗಲಿ. ಅಲ್ಲಾಹು ಅವರೊಂದಿಗೂ ಅವರು ಅಲ್ಲಾಹನೊಂದಿಗೂ ತೃಪ್ತಿ ಹೊಂದಲಿ.



# ಭ್ರಷ್ಟರ ವಿರುದ್ಧ ಹೋರಾಡಿ ಮಡಿದ ಸೆಹಲಾ



● ಗೌರಿ ಲಂಕೇಶ್

ದೆಹಲಿಯ ರಾಮಲೀಲಾ ಮೈದಾನದಲ್ಲಿ ಅಣ್ಣಾ ಹಝಾರೆ ಅವರು ಭ್ರಷ್ಟಾಚಾರವನ್ನು ನಿಯಂತ್ರಿಸಲು ಜನಲೋಕಪಾಲ್ ಕಾಯಿದೆಯನ್ನು ಜಾರಿಗೆ ತರಬೇಕೆಂದು ಆಗ್ರಹಿಸಿ ಉಪವಾಸ ಕೂತಿದ್ದಾಗಲೇ ಮಧ್ಯಪ್ರದೇಶ ರಾಜ್ಯದಲ್ಲಿ ಭ್ರಷ್ಟರ ವಿರುದ್ಧ ಹೋರಾಡುತ್ತಿದ್ದಾಗ ಸೆಹಲಾ ಮಸೂದ್ ಎಂಬ ಮಹಿಳೆಯನ್ನು ದುಷ್ಕರ್ಮಿಗಳು ಕೊಂದು ಹಾಕಿದರು.

ಅವತ್ತು (ಆಗಸ್ಟ್ 16) ಸೆಹಲಾ ಭೋಪಾಲ್‌ನಲ್ಲಿ ಅಣ್ಣಾ ಹಝಾರೆಗೆ ಬೆಂಬಲ ಸೂಚಿಸಿ ನಡೆಯಲಿದ್ದ ಸಭೆಗೆ ಹೊರಟಿದ್ದಳು. ಮನೆಯಲ್ಲಿದ್ದ ತನ್ನ ವೃದ್ಧ ತಂದೆ ಮತ್ತು ಚಿಕ್ಕಮ್ಮನಿಗೆ ಟಾಟಾ ಹೇಳಿ ಹೊರಟ ಸೆಹಲಾ ತನ್ನ ಕಾರು ಹತ್ತಿ ಡ್ರೈವರ್ ಸೀಟಿನಲ್ಲಿ ಕೂತಳು. ಆದರೆ ಅದ್ಯಾಕೋ ಎಷ್ಟು ಹೊತ್ತಾದರೂ ಆಕೆ ತನ್ನ ಕಾರ್ ಅನ್ನು ಚಾಲು ಮಾಡಲಿಲ್ಲ. ಆಕೆಯ ಚಿಕ್ಕಮ್ಮ ಕಿಟಕಿಯಿಂದ ನೋಡಿದಾಗ ಆಕೆ ಮೂರ್ಛೆ ಹೋಗಿದ್ದಂತೆ ಕಾರಿನಲ್ಲಿ ಕೂತಿದ್ದು ಕಂಡು ಬಂತು. ಅಪ್ಪ ಮತ್ತು ಚಿಕ್ಕಮ್ಮ ಹೊರಗೆ ಓಡಿಹೋಗಿ ಆಕೆಯ ಮುಖಕ್ಕೆ ನೀರು ಚಿಮುಕಿಸಿದರು. ಆಗ ಆಕೆಯ ಕೊರಳ ಸುತ್ತ ಇದ್ದ ದುಪ್ಪಟ್ಟಾ ಜಾರಿ ಬಿತ್ತು. ನೋಡಿದರೆ ಆಕೆಯ ಗಂಟಲನ್ನು ಬಂದೂಕಿನ ಗುಂಡು ಸೀಳಿತ್ತು. ರಕ್ತ ಹರಿಯುತ್ತಿತ್ತು. ಸೆಹಲಾ ಶವವಾಗಿದ್ದಳು.

ಆಕೆಯನ್ನು ಕೊಂದವನು ತನ್ನ ಬಂದೂಕಿಗೆ ಸೈಲನ್ಸರ್ ಅಳವಡಿಸಿಕೊಂಡಿದ್ದರಿಂದ ಗುಂಡು ಹಾರಿದ ಶಬ್ದ ಯಾರಿಗೂ ಕೇಳಿಸಲಿಲ್ಲ. ಅಷ್ಟೇ ಅಲ್ಲ ಆಕೆಯನ್ನು ಕೊಂದಷ್ಟೇ ನಿಶ್ಯಬ್ದವಾಗಿ ಆತ ಕಾಣೆಯಾಗಿದ್ದ. ಸೆಹಲಾ ಸಾವಿನ ಸುದ್ದಿ ಮಿಂಚಿನಂತೆ ಹರಡಿ ಭೋಪಾಲ್ ನಗರವನ್ನು ಬೆಚ್ಚಿ ಬೀಳಿಸಿತು. ವಿವಿಧ ಹೋರಾಟಗಳಲ್ಲಿ ತೊಡಗಿರುವ ಜನರ ರಾಜ್ಯ ಸರಕಾರದಲ್ಲಿ ತಮಗೆ ವಿಶ್ವಾಸ ಇಲ್ಲವೆಂದೂ, ಸೆಹಲಾಳ ಕೊಲೆಯ ತನಿಖೆಯನ್ನು ಸಿಬಿಐಗೆ ವಹಿಸಬೇಕೆಂದೂ ಆಗ್ರಹಿಸಿದರು.

ಆದಕ್ಕೆ ಕಾರಣಗಳೂ ಇದ್ದವು. ಅವೇನೆಂದರೆ ಇದೇ ಮಧ್ಯಪ್ರದೇಶದ ಬಿಜೆಪಿ ಸರಕಾರದ ಹಲವಾರು ಅಕ್ರಮಗಳನ್ನು ಸೆಹಲಾ ಬಯಲಿಗೆಳೆದಿದ್ದಳು. ಭ್ರಷ್ಟ ಪೊಲೀಸರು ವಿರುದ್ಧ ಕೇಂದ್ರ ಗೃಹ ಸಚಿವರಿಗೂ ದೂರು ನೀಡಿದ್ದಳು. ಮಾಹಿತಿ ಹಕ್ಕು ಕಾಯ್ದೆಯಡಿ ಹಲವಾರು ಅರ್ಜಿಗಳನ್ನು ಗುಜರಾಯಿಸಿ ಭ್ರಷ್ಟ ರಾಜಕಾರಣಿಗಳಲ್ಲಿ ದಿಗಿಲು ಮೂಡಿಸಿದ್ದಳು. ತನಗೆ ರಾಜ್ಯ ಪೊಲೀಸರಿಂದ ಪ್ರಾಣ ಬೆದರಿಕೆ ಇದ್ದು ತನಗೆ ರಕ್ಷಣೆ ಕೊಡಬೇಕೆಂದು ಕೋರಿದ್ದಳು. ಆದರೆ ಸೆಹಲಾಳಿಗೆ ರಕ್ಷಣೆ

ನೀಡುವ ಬದಲಾಗಿ ಯಾವ ವ್ಯವಸ್ಥೆಯ ವಿರುದ್ಧ ಆಕೆ ಹೋರಾಡುತ್ತಿದ್ದಳೋ ಅದೇ ವ್ಯವಸ್ಥೆ ಆಕೆಯ ಪ್ರಾಣವನ್ನೇ ತೆಗೆದುಕೊಂಡಿದೆ.

ಸಿರಿವಂತ ಮುಸ್ಲಿಂ ಕುಟುಂಬದಲ್ಲಿ ಜನಿಸಿದ ಸೆಹಲಾ ದೆಹಲಿಯ ಪ್ರತಿಷ್ಠಿತ ಜಾಮಿಯಾ ಮಿಲ್ಲಿಯಾ ಇಸ್ಲಾಮಿಯಾ ಸಂಸ್ಥೆಯಲ್ಲಿ ಓದಿದ್ದಳು. ಸ್ವಲ್ಪ ದಿನ ಅಮಿತಾಬ್ ಬಚ್ಚನ್ ಅವರ ಎಬಿಸಿ ಕಂಪೆನಿಯಲ್ಲಿ ಕೆಲಸ ಮಾಡಿದ್ದಳು. ತವರೂರಾದ ಭೋಪಾಲ್‌ಗೆ ಹಿಂದಿರುಗಿ ಮಿರಕಲ್ಸ್ ಎಂಬ ಕಂಪೆನಿಯನ್ನು ಸ್ಥಾಪಿಸಿ ಕಾರ್ಯಕ್ರಮಗಳನ್ನು ಸಂಯೋಜಿಸುತ್ತಿದ್ದಳು. ಆಗ ಆಕೆ ತೀವ್ರ ಭ್ರಷ್ಟಾಚಾರವನ್ನು ಎದುರಿಸಿದ್ದರಿಂದ ಸಿಡಿದೆದ್ದಳು. ಮಾಹಿತಿ ಹಕ್ಕು ಕಾಯ್ದೆಯನ್ನು ಉಪಯೋಗಿಸಿಕೊಂಡು ರಾಜಕಾರಣಿಗಳ ಮತ್ತು ಅಧಿಕಾರಿಗಳ ಅಕ್ರಮಗಳನ್ನು ಬಯಲು ಮಾಡಿಲಾರಂಭಿಸಿದಳು.

ಉದಾಹರಣೆಗೆ ಮಧ್ಯಪ್ರದೇಶದ ಬಿಜೆಪಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾನ್ ತನ್ನ ಮನೆ ಖರ್ಚಿಗೆಂದು ಎಷ್ಟು ಹಣ ಪಡೆಯುತ್ತಿದ್ದಾರೆ ಎಂದು ಮಾಹಿತಿ ಪಡೆದಳು. ನೋಡಿದರೆ ಆತ ಸ್ವೀಟ್ಸ್‌ಗೆ, ಚಾಟ್‌ಗೆ, ಹೂಗಳಿಗೆ, ಮೊಬೈಲ್ ಬಿಲ್ಲು, ಟೆಲಿಫೋನ್ ಬಿಲ್ಲು ಎಂದೆಲ್ಲಾ ಪ್ರತಿ ತಿಂಗಳು ರಾಜ್ಯದ ಬೊಕ್ಕಸದಿಂದ ಲಕ್ಷಾಂತರ ರೂಪಾಯಿ ಪಡೆಯುತ್ತಿದ್ದುದು ಗೊತ್ತಾಯಿತು. ಅದನ್ನು ಬಹಿರಂಗಪಡಿಸಿದ ಸೆಹಲಾ ಮುಖ್ಯಮಂತ್ರಿಗೆ ಮುಖಭಂಗ ಮಾಡಿದಳು.

ಹಾಗೆಯೇ ಮಧ್ಯಪ್ರದೇಶದ ಹೈಕೋರ್ಟಿನ ನ್ಯಾಯಮೂರ್ತಿಗಳಿಗೂ ಮುಖಭಂಗ ಮಾಡಿದ್ದಳು. ರಾಜ್ಯ ಸರಕಾರ ಹಲವು ನ್ಯಾಯಮೂರ್ತಿಗಳ ವಿಮಾನ ವೆಚ್ಚ ಮತ್ತು ಪಂಚತಾರಾ ಹೊಟೇಲ್‌ಗಳ ಬಿಲ್ಲುಗಳನ್ನು ಭರಿಸಿದ್ದನ್ನು ಪ್ರಶ್ನಿಸಿದ್ದಳು. ಹಾಗೆಯೇ ಯಾರದ್ದೂ ಮದುವೆಗೆಂದು 12 ನ್ಯಾಯಮೂರ್ತಿಗಳು ಹೋದಾಗ ಆ ವೆಚ್ಚವನ್ನೂ ರಾಜ್ಯ ಸರಕಾರವೇ ಭರಿಸಿದ್ದನ್ನು ಪ್ರಶ್ನಿಸಿದ್ದಳು. ಆಗ ಮುಖ್ಯಮಂತ್ರಿ ಚೌಹಾನ್ ಅವರ ನಿಯಮಾವಳಿ ಅಧಿಕಾರಿ ಆಕೆಗೆ ಫೋನ್ ಮಾಡಿ ಬೆದರಿಸಿದ್ದ.

*ಪವನ್ ಶ್ರೀವಾತ್ಸವ ಎಂಬ ಐಜಿ ಲೆವಲ್ಲಿನ ಪೊಲೀಸ್ ಅಧಿಕಾರಿಯ ಅವ್ಯವಹಾರಗಳನ್ನು ಬಯಲಿಗೆಳೆದಿದ್ದಳು. ಈ ಪವನ್ ಶ್ರೀವಾತ್ಸವ ಭ್ರಷ್ಟಾತಿಭ್ರಷ್ಟನಲ್ಲದೇ ಆತ ಹಲವು ಪ್ರಭಾವಿ ಬಿಜೆಪಿ ನಾಯಕರ ಭಂಟ. ಜೊತೆಗೆ ಆರೆಸ್ಸೆಸ್ಸಿನ ನಾಯಕರೊಂದಿಗೂ ಆತನಿಗೆ ಗಳಸ್ಯಕಂಟಸ್ಯ ಸಂಬಂಧವಿದೆ. ಆತನ ಅಕ್ರಮಗಳನ್ನು ಸೆಹಲಾ ಬಯಲು ಮಾಡಿದಾಗ ಆತ ಸೆಹಲಾಳಿಗೆ ಫೋನ್ ಮಾಡಿ ಅವಾಚ್ಯವಾಗಿ ನಿಂದಿಸಿದ್ದಲ್ಲದೆ ಆಕೆಗೆ ಪ್ರಾಣ ಬೆದರಿಕೆಯನ್ನೂ ಒಡ್ಡಿದ್ದ. ಆಗ ಸೆಹಲಾಳ ಸಾವಿನ ಹಿಂದೆ ಈ ದುಷ್ಟ ಪೊಲೀಸ್ ಅಧಿಕಾರಿಯ ಕೈವಾಡವಿರಬಹುದೆಂದು ಶಂಕಿಸಲಾಗಿದೆ.*

ಪವನ್ ಶ್ರೀವಾತ್ಸವ ಎಂಬ ಐಜಿ ಲೆವಲ್ಲಿನ ಪೊಲೀಸ್ ಅಧಿಕಾರಿಯ ಅವ್ಯವಹಾರಗಳನ್ನು ಬಯಲಿಗೆಳೆದಿದ್ದಳು. ಈ ಪವನ್ ಶ್ರೀವಾತ್ಸವ ಭ್ರಷ್ಟಾತಿಭ್ರಷ್ಟನಲ್ಲದೇ ಆತ ಹಲವು ಪ್ರಭಾವಿ ಬಿಜೆಪಿ ನಾಯಕರ ಭಂಟ. ಜೊತೆಗೆ ಆರೆಸ್ಸೆಸ್ಸಿನ ನಾಯಕರೊಂದಿಗೂ ಆತನಿಗೆ ಗಳಸ್ಯಕಂಟಸ್ಯ ಸಂಬಂಧವಿದೆ. ಆತನ ಅಕ್ರಮಗಳನ್ನು ಸೆಹಲಾ ಬಯಲು ಮಾಡಿದಾಗ ಆತ ಸೆಹಲಾಳಿಗೆ ಫೋನ್ ಮಾಡಿ ಅವಾಚ್ಯವಾಗಿ ನಿಂದಿಸಿದ್ದಲ್ಲದೆ ಆಕೆಗೆ ಪ್ರಾಣ ಬೆದರಿಕೆಯನ್ನೂ ಒಡ್ಡಿದ್ದ. ಆಗ ಸೆಹಲಾಳ ಸಾವಿನ ಹಿಂದೆ ಈ ದುಷ್ಟ ಪೊಲೀಸ್ ಅಧಿಕಾರಿಯ ಕೈವಾಡವಿರಬಹುದೆಂದು ಶಂಕಿಸಲಾಗಿದೆ.

ಸೆಹಲಾಳಿಗೆ ಪ್ರಾಣಿಗಳೆಂದರೆ ಪ್ರೀತಿ. ಅದರಲ್ಲೂ ಹುಲಿ ರಕ್ಷಣೆ ಬಗ್ಗೆ ಅಪಾರ ಕಾಳಜಿ. ಆದುದರಿಂದ ಹುಲಿ ಸಂರಕ್ಷಣೆ ಹೆಸರಲ್ಲಿ ಕೇಂದ್ರ ಸರಕಾರದಿಂದ ರಾಜ್ಯ ಸರಕಾರ ಪಡೆದ ಹಣ ಸರಿಯಾಗಿ ಉಪಯೋಗವಾಗುತ್ತಿದೆಯೇ ಎಂದು ವಿಚಾರಿಸುತ್ತಿದ್ದಳು. ಹುಲಿಗಳೇ ಇಲ್ಲದ ಪ್ರದೇಶಗಳಲ್ಲಿ ಹುಲಿ ರಕ್ಷಣೆ ಮಾಡಲು ದುಡ್ಡು ವೆಚ್ಚ ಮಾಡಿದ್ದನ್ನು ಟೀಕಿಸಿದ್ದಳು.

ಇಂತಹ ಪ್ರಾಣಿ ಪ್ರೀತಿ ಸಹಜವಾಗಿಯೇ ಅರಣ್ಯ ಪ್ರೀತಿಯಾಗಿ ಪರಿವರ್ತನೆಗೊಂಡಿತು. ಅರಣ್ಯಗಳ ಬಗ್ಗೆಯೂ ಆಕೆ ಮಾಹಿತಿ ಪಡೆಯಲಾರಂಭಿಸಿದಾಗ ಒಂದು ಅಚ್ಚರಿಯ ಸಂಗತಿ ಗೊತ್ತಾಯಿತು. ಅದೇನೆಂದರೆ ಛಾತರ್ಪುರ್ ಜಿಲ್ಲೆಯಲ್ಲಿನ ಕಾಡುಗಳಲ್ಲಿ ರಿಯೋ ಟಿಂಟೋ ಎಂಬ ಇಂಗ್ಲೆಂಡ್ ಮೂಲದ ಅಂತಾರಾಷ್ಟ್ರೀಯ ಕಂಪೆನಿಗೆ ಗಣಿಗುತ್ತಿಗೆ ನೀಡಲಾಗಿದೆ ಎಂದು. ಮೊದಲನೆಯದಾಗಿ ಕಾನೂನಿನ ಪ್ರಕಾರ ಅರಣ್ಯ ಪ್ರದೇಶದಲ್ಲಿ ಅರಣ್ಯೇತರ ಚಟುವಟಿಕೆಗಳು ನಿಷೇಧ. ಎರಡನೆಯದಾಗಿ ಈ ಪ್ರದೇಶದಲ್ಲಿ ಟೀಕ್ ಮರಗಳು ಹೆಚ್ಚಾಗಿರುವ ಅರಣ್ಯವಿದೆ. ಮೂರನೆಯದಾಗಿ ಈ ಛಾತರ್ಪುರ್ ಪ್ರದೇಶದಲ್ಲಿ ಅಪಾರ ಬೆಲೆಬಾಳುವ ವಜ್ರಗಳ ನಿಕ್ಷೇಪವಿದೆ. ಒಂದು ಅಂದಾಜಿನ ಪ್ರಕಾರ ಅಲ್ಲಿರುವ ವಜ್ರಗಳು 27.4 ಮಿಲಿಯನ್ ಕ್ಯಾರೆಟ್. ಇದೇ ಮಧ್ಯಪ್ರದೇಶದಲ್ಲಿ ಪನ್ನಾ ಎಂಬಲ್ಲಿ (ಇದು ಭಾರತದ



19/1/2010

The Director General of Police
Police Headquarter
Madhya Pradesh

DGP-881
20-1-10

Sub- Police inaction on a complaint filed against an IPS officer for making threatening calls.

Sir,

One and a half year ago I had filed a complaint against IP Officer Pawan Shrivastava for making threatening calls to me while he was on deputation as Director Cultural department. I had Lodged at the Mharana Pratap Nagar police station in Bhopal I had also met the than DGP of MP. Mr. Puwar on 27/2/2008. I had provided the evidence but till now nothing has been done.

Sir I write this in deep anguish as Mr. Shrivastava is harassing me for the past two years and though the home minister had recently announced through newspapers that Madhya Pradesh would be the first state to treat all complaints as FIRs nothing has been done on my complaint.

Also I would like to bring to your notice that I fear for my life from Mr. Pawan Shrivastava. Also I fear that he being a powerful police officer he can implicate me in a false case.

A criminal minded officer, who has been in news for breaking laws, misbehaving with women and for his corrupt practices, has been harassing me since than 2008.

I Fear for my Life.Please do the needfull and oblige.

Regards
Shehla Masood 19/1/2010
RTI Activist/ Social worker
163 Zone 1 MP Nagar Bhopal
982020233

Copy Attached of the Complaint for threatening.
CC- Home Minister Ministry of Home Affairs GOI New Delhi
CC – The Law Minister Madhya Pradesh Govt. Bhopal
BCC-The Chef Minister Madhya Pradesh Govt. Bhopal
BCC- The Home Minister Madhya Pradesh Govt. Bhopal

Please look into this application & a CD, which is in her possession. Legal action or departmental action may be taken as deemed fit as per the contents of the CD & the application.
IGP Bhopal. 20-1-10

**ಐಪಿಎಸ್ ಅಧಿಕಾರಿಯೊಬ್ಬ ತನಗೆ ಬೆದರಿಕೆ ಕರೆಗಳನ್ನು ಮಾಡಿದ್ದರ ವಿರುದ್ಧ ಸೆಹಲಾ ಗೃಹ ಸಚಿವ ಚಿದಂಬರಂ ಮತ್ತು ಮಧ್ಯ ಪ್ರದೇಶದ ಕಾನೂನು ಸಚಿವ, ಮುಖ್ಯಮಂತ್ರಿ ಹಾಗೂ ಗೃಹ ಸಚಿವರಿಗೆ ಕಳುಹಿಸಿದ್ದ ಪತ್ರ.**

ಏಕೈಕ ವಜ್ರದ ಗಣಿ) ಲಭ್ಯವಿರುವ ವಜ್ರಗಳಿಗಿಂತ ಏಳು ಪಟ್ಟು ಹೆಚ್ಚು ವಜ್ರಗಳು ಛಾತರ್ಪುರ್‌ನಲ್ಲಿವೆ. ಇನ್ನೂ ಒಂದು ಅಂದಾಜಿನ ಪ್ರಕಾರ ಜಗತ್ತಿನಲ್ಲಿರುವ ಯಾವುದೇ ನಿಕ್ಷೇಪಕ್ಕಿಂತ ಇಲ್ಲಿ ಹೆಚ್ಚು ವಜ್ರಗಳಿವೆಯಂತೆ.

ಇದೆಲ್ಲಕ್ಕಿಂತ ಮುಖ್ಯವಾಗಿ ಈ ಪ್ರದೇಶದಲ್ಲಿ ರಿಯೋ ಟಿಂಟೋ ಎಂಬ ಕಂಪೆನಿಗೆ ಅಕ್ರಮವಾಗಿ ವಜ್ರಗಳ ಗಣಿಗಾರಿಕೆಗೆ ಅನುಮತಿ ನೀಡುವಲ್ಲಿ ರಾಜ್ಯದ ಬಿಜೆಪಿ ಸರಕಾರ ಕಾನೂನುಗಳನ್ನು ಉಲ್ಲಂಘಿಸಿದೆಯಲ್ಲದೇ, ಈ ಕ್ರಿಮಿನಲ್ ಕೃತ್ಯದಲ್ಲಿ ಸಹಕಾರ ನೀಡದ ಅಧಿಕಾರಿಗಳನ್ನು ಛಾತರ್ಪುರ್‌ನಿಂದಲೇ ವರ್ಗಾವಣೆ ಮಾಡಿದೆ.

ಇನ್ನು ಈ ರಿಯೋ ಟಿಂಟೋ ಕಂಪೆನಿಯ ಇತಿಹಾಸವಂತೂ ಘೋರವಾಗಿದೆ. ಇದು ಜಗತ್ತಿನ ಹಲವಾರು ಕಡೆ ಗಣಿಗಾರಿಕೆಯಲ್ಲಿ ತೊಡಗಿದ್ದು, ಅಲ್ಲಿಯ ಅರಣ್ಯಗಳನ್ನೆಲ್ಲಾ ಸಂಪೂರ್ಣವಾಗಿ ನಾಶಮಾಡಿದೆ. ಮಾತ್ರವಲ್ಲ, ಈ ಕಂಪೆನಿಯು ತನ್ನ ವಿರೋಧಿಗಳನ್ನು ಬಗ್ಗು ಬಡಿಯುವ, ಸರಕಾರಗಳ ಮೇಲೆ ಒತ್ತಡ ಹೇರುವ, ಅಂತಾರಾಷ್ಟ್ರೀಯ ಕಾನೂನುಗಳನ್ನು ಉಲ್ಲಂಘಿಸುವ, ಕಾರ್ಮಿಕ ಸಂಘಟನೆಗಳನ್ನು ಛಿದ್ರ ಮಾಡುವ ಕಲೆಗಳನ್ನು ಕರಗತ ಮಾಡಿಕೊಂಡಿದೆ. ಇದೆಲ್ಲದರಿಂದಾಗಿ ಈ ಕಂಪೆನಿ ಕಾಲಿಟ್ಟ ಕಡೆ ಅಕ್ರಮ, ಅನ್ಯಾಯ, ಕೊಲೆ ಇತ್ಯಾದಿ ಕ್ರಿಮಿನಲ್ ಕೃತ್ಯಗಳು ಗ್ಯಾರಂಟಿ ಎಂಬಂತಾಗಿದೆ.

ಆದುದರಿಂದ ಸೆಹಲಾ ರಿಯೋ ಟಿಂಟೋ ಕಂಪೆನಿಗೆ ಅಕ್ರಮವಾಗಿ ಗಣಿಗಾರಿಕೆ ನಡೆಸಲು ಅನುಮತಿ ಕೊಟ್ಟಿರುವುದನ್ನು ಪ್ರಶ್ನಿಸಿದ್ದಳು. ಕೇಂದ್ರ ಸರಕಾರದ ಅರಣ್ಯ ಮಂತ್ರಿಗೆ ಪತ್ರಗಳನ್ನು ಬರೆದು ದೂರಿದ್ದಳು. ರಿಯೋ ಪಿಂಟೋ ಕಂಪೆನಿಯ ವಿರುದ್ಧ ನ್ಯಾಯಾಲಯದ ಮೆಟ್ಟಲನ್ನು ಹತ್ತಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದಳು. ಕುತೂಹಲಕಾರಿ ಅಂಶ ಯಾವುದೆಂದರೆ ಆಕೆ ಮೃತಪಟ್ಟ ಹಲವು ಸಮಯದ ನಂತರ ಯುಗಾಂಡ ದೇಶದಿಂದ ಯಾರೋ ಹಲವಾರು ಗಂಟೆಗಳ ಕಾಲ ಆಕೆಯ ಮೊಬೈಲ್‌ಗೆ ಫೋನ್ ಮಾಡಿರುವುದು. ಈ ಎಲ್ಲಾ ಕಾರಣಗಳಿಂದ ಸೆಹಲಾ ಸಾವಿನ ಹಿಂದು ಈ ರಿಯೋ ಟಿಂಟೋ ಕಂಪೆನಿಯ ಕೈವಾಡವೂ ಇರಬಹುದೆಂದು ಶಂಕಿಸಲಾಗುತ್ತಿದೆ.

ಆದರೆ ಮಧ್ಯಪ್ರದೇಶದ ಬಿಜೆಪಿ ಸರಕಾರ ಸೆಹಲಾಳದ್ದು ಕೊಲೆಯಲ್ಲ ಬದಲಾಗಿ ಆತ್ಮಹತ್ಯೆ ಎಂದು ಪಿತೂರಿ ನಡೆಸುತ್ತಿದೆ. ಅದಕ್ಕೆ ಸೆಹಲಾಳ ತಂದೆ ''ಆಕೆ ಮೃತಪಟ್ಟಾಗ ಒಂದು ಕೈಯಲ್ಲಿ ಮೊಬೈಲ್ ಇತ್ತು. ಇನ್ನೊಂದು ಕೈಯಲ್ಲಿ ಕಾರಿನ ಕೀಗಳಿದ್ದವು. ಆದುದರಿಂದ ಅದು ಆತ್ಮಹತ್ಯೆ ಹೇಗಾಗುತ್ತದೆ. ಇದೆಲ್ಲಕ್ಕಿಂತ ಮುಖ್ಯವಾಗಿ ಆಕೆ ಓರ್ವ ದಿಟ್ಟ ಹೋರಾಟಗಾರ್ತಿಯಾಗಿದ್ದಳು. ಆತ್ಮಹತ್ಯೆ ಮಾಡುಕೊಳ್ಳುವಂತಹ ವ್ಯಕ್ತಿತ್ವ ಆಕೆಯದ್ದಲ್ಲ'' ಎಂದಿದ್ದಾರೆ. ಅದನ್ನೇ ಆಕೆಯ ಬಲ್ಲವರೂ ಹೇಳುತ್ತಿದ್ದಾರೆ.

ಅದೆಲ್ಲಕ್ಕಿಂತ ಮುಖ್ಯವಾಗಿ ಸೆಹಲಾ ಆತ್ಮಹತ್ಯೆ ಮಾಡಿಕೊಂಡಿದ್ದರೆ ಆ ಬಂದೂಕು ಅವಳ ಶವದ ಹತ್ತಿರ ಇರಬೇಕಿತ್ತಲ್ಲವೇ. ಆದರೆ ಆಕೆ ಮೃತಪಟ್ಟಾಗ ಅವಳ ಹತ್ತಿರ ಯಾವುದೇ ಬಂದೂಕು ಇರಲಿಲ್ಲ. ಆದರೂ ಇದನ್ನು ಆತ್ಮಹತ್ಯೆ ಎಂದು ತೋರಿಸಲು ಭೋಪಾಲದ ಪೊಲೀಸರು ಯತ್ನಿಸುತ್ತಾರೆಂದರೆ ಏನೆನ್ನಬೇಕು?

ದಕ್ಷ ಆಡಳಿತ, ಪಾರದರ್ಶಕತೆ, ಭ್ರಷ್ಟಾಚಾರ ನಿರ್ಮೂಲನೆಗಾಗಿ ಹೋರಾಡಿದ್ದಕ್ಕಾಗಿ ತನ್ನ ಪ್ರಾಣ ಕಳೆದುಕೊಂಡವರಲ್ಲಿ ಸೆಹಲಾ ಮೊದಲನೆಯವಳೇನಲ್ಲ.

ಆಕೆಯಂತೆ ಈ ಹಿಂದೆ ಅನೇಕ ಆರ್‌ಟಿಐ ಕಾರ್ಯಕರ್ತರು ಬಲಿಯಾಗಿದ್ದಾರೆ. ಒಂದು ಅಂದಾಜಿನ ಪ್ರಕಾರ 2010ರಲ್ಲೇ ಸುಮಾರು ಹತ್ತು ಜನರ ದೇಶದ ವಿವಿಧ ಭಾಗಗಳಲ್ಲಿ ಹೀಗೆ ಕೊಲೆಯಾಗಿದ್ದಾರೆ.

ಉದಾಹರಣೆಗೆ, ಮಹಾರಾಷ್ಟ್ರದಲ್ಲಿ ಹಲವು ರಾಜಕಾರಣಿಗಳ ಭೂಕಬಳಿಕೆಯನ್ನು ಹೊರಗೆಳೆದಿದ್ದ ಸತೀಶ್ ಶೆಟ್ಟಿ ಎಂಬ ಆರ್‌ಟಿಐ ಕಾರ್ಯಕರ್ತನನ್ನು ಹಾಡುಹಗಲೇ ಪುಣೆಯಲ್ಲಿ ಕೊಂದು ಹಾಕಿದರು. ಶೆಟ್ಟಿ ಪ್ರಾರಂಭಿಸಿದ್ದ ಕೆಲವನ್ನು ಅವರ ಮಿತ್ರ ಅರುಣ್ ಮಾಣೆ ಎಂಬವರು ಮುಂದುವರಿಸಿ ಪುಣೆ-ಮುಂಬೈ ಎಕ್ಸ್‌ಪ್ರೆಸ್ ಹೈವೇ ಸುತ್ತ ನಡೆದಿದ್ದ ಭೂಹಗರಣಗಳನ್ನು ತೆರಿದಿಟ್ಟರು. ಆಗ ಮಾಣೆ ಅವರನ್ನೂ ಕೆಲವು ಗೂಂಡಾಗಳು ಕೊಂದು ಹಾಕಿದರು.

ಸ್ಥಳೀಯ ಪಂಚಾಯಿತ್ತಿಯಲ್ಲಿ ನಡೆಯುತ್ತಿದ್ದ ಅವ್ಯವಹಾರಗಳನ್ನು ಶೋಧಿಸಿದ ವಿಠಲ್ ಗೀತೆ, ಪಡಿತರ ಚೀಟಿಯಲ್ಲಿ ನಡೆದ ಅಕ್ರಮವನ್ನು ಬಹಿರಂಗಪಡಿಸಿದ ರಾಮದಾಸ್ ಘಡೆಗಾಂವ್ಕರ್, ಜೈತಾಪುರ ಅಣುಸ್ಥಾವರವನ್ನು ವಿರೋಧಿಸಿದ ಇರ್ಫಾನ್ ಕಾಜಿ, ಚುನಾವಣಾ ಆಯೋಗಕ್ಕೆ ತನ್ನ ಸಂಪೂರ್ಣ ಆಸ್ತಿಯನ್ನು ಘೋಷಿಸಿದ್ದ ಕಾರ್ಪೊರೇಟರ್ ಒಬ್ಬನ ಸುಳ್ಳನ್ನು ಎತ್ತಿ ತೋರಿಸಿದ್ದ ಯಶವಂತ್ ಗಾಯ್ಕವಾಡ್, ಗಿರ್ ಅರಣ್ಯದಲ್ಲಿ ಅಕ್ರಮ ಗಣಿಗಾರಿಕೆಯನ್ನು ವಿರೋಧಿಸಿದ್ದ ಅಮಿತ್ ಜೆತ್ವ... ಹೀಗೆ ಬಹಳಷ್ಟು ಜನ ಭ್ರಷ್ಟಾಚಾರವನ್ನು ವಿರೋಧಿಸಿ ತಮ್ಮ ಪ್ರಾಣವನ್ನೇ ಕಳೆದುಕೊಂಡಿದ್ದಾರೆ.

ಸೆಹಲಾ ಕೊಲೆಯಾದಾಗ ಆಕೆ 40ಕ್ಕೂ ಹೆಚ್ಚು ಆರ್‌ಟಿಐ ಅರ್ಜಿಗಳನ್ನು ಸಲ್ಲಿಸಿದ್ದಳು. ಆದುದರಿಂದ ಆಕೆಯ ಸಾವಿಗೆ ಅಂತಹ ಯಾವುದೋ ಒಂದು ಅರ್ಜಿಯೂ ಕಾರಣವಿರಬಹುದು. ತನ್ನ ಈ ಚಟುವಟಿಕೆಗಳಿಂದಾಗಿ ತನ್ನ ಪ್ರಾಣವನ್ನು ಯಾರು ಬೇಕಾದರೂ ತೆಗೆಯಬಹುದೆಂಬ ಅನುಮಾನ ಸೆಹಲಾಳಿಗೆ ಇತ್ತು. ಆಕೆ ಸಾಯುವ ಕೆಲವು ದಿನಗಳ ಮುನ್ನ ಕೊಟ್ಟ ಒಂದು ಸಂದರ್ಶನದಲ್ಲಿ "I fear for my life, but I will go on" ಎಂದು ಹೇಳಿದ್ದಳು.

ದಿಟ್ಟೆದೆಯ ಸೆಹಲಾ ಇವತ್ತು ಆರ್‌ಟಿಐ ಹುತಾತ್ಮರಲ್ಲಿ ಒಬ್ಬಳಾಗಿದ್ದಾಳೆ. ಆಕೆಯ ಸಾವು ನಮ್ಮ ದೇಶದಿಂದ ಭ್ರಷ್ಟಾಚಾರವನ್ನು ತೊಲಗಿಸುವುದು ಅಷ್ಟು ಸುಲಭವಲ್ಲ ಎಂಬುದರಲ್ಲಿ ಮತ್ತೊಮ್ಮೆ ಸಾಬೀತುಪಡಿಸಿದೆ.


# SUHANA TRAVELS

SHIFTED TO NEW LOCATION
FIND YOUR ALL TRAVEL REQUIREMENTS UNDER ONE ROOF

**OUR SERVICES:**

•DOMESTIC AND INTERNATIONAL AIR-TICKETING •VISA STAMPING
•PASSPORT •EMIGRATION •RECRUITMENT •CERTIFICATE ATTESTATOIN

CONTACT ANY ISTHIQDHAM OFFICE IN ALL OVER SAUDI ARABIA

**OUR FREE SERVICES:**

SAUDI AIR-TICKET RE-CONFIRMATION
RE-ENTRY VISA DATE CHECKING

**CONTACT**

**HEAD OFFICE:**
Shop no.25 printing house
2nd floor, behind handloom house
28 D, Police Court Lane,
Fort, Mumbai - 400 001
E-mail: suhanatravel@mail.com
Tel : 0091 22 22692680
Telefax: 0091 22 22692690
Mobile : 091 9820945999

**MANGALORE OFFICE**
No: 5, Ground Floor
Shivali Arcade, Falnir Tower
opp: B.P Petrole Pump, Falnir
Mangalore - 575002
**Tel: 0091 824 2442020. (4lines)**
Telefax: 00918244277690
Mobile: 0091 9448253825
Email:suhanamglr@yahoo.co.in

**FOR OUR WAKALA**



# ಮರ್ಕಝುಲ್‌ನ ಮಡಿಲಲ್ಲಿ ‘ಕಾಶ್ಮೀರಿ ಮಕ್ಕಳು’

‘‘ಯಾರಾದರೂ ಸಹಾಯ ಹಸ್ತದೊಂದಿಗೆ ಮುಂದೆ ಬರದಿದ್ದಲ್ಲಿ ಇವತ್ತು ನಾವು ಇರುತ್ತಿರಲಿಲ್ಲವೇನೋ?!’’- ಕಾಶ್ಮೀರದ ಶೋಪಿಯಾನ್ ಜಿಲ್ಲೆಯ 15ರ ಹರೆಯದ ಇನಾಯತುಲ್ಲಾ ನಜ್ಜಾರ್ ಈ ಮಾತು ಹೇಳುವಾಗ ಸಂಘರ್ಷ ಪೀಡಿತ ಜನ್ಮನಾಡಿನ ಬಗ್ಗೆ ಆತನಲ್ಲಿ ಮಡುಗಟ್ಟಿರುವ ಆತಂಕವು ಎದ್ದು ಕಾಣುತ್ತಿತ್ತು.

ಸೇನೆಯ ಬಂದೂಕಿನ ಮುಂದೆ ಭಯಭೀತಗೊಂಡ ಜೀವಗಳು, ಬಂದ್ ಹರತಾಳದಿಂದಾಗಿ ಶಾಲೆಯ ಹತ್ತಿರ ಸುಳಿಯಲಾಗದ ಬಾಲ್ಯಾವಸ್ಥೆ- ಈ ಎಲ್ಲ ಸನ್ನಿವೇಶದಿಂದ ಮುಕ್ತಿ ಹೊಂದಿ ಶಿಕ್ಷಣದ ಮಡಿಲಲ್ಲಿದ್ದುಕೊಂಡು ಪ್ರಶಾಂತ ವಾತಾವರಣದ ಸವಿ ಉಣ್ಣುತ್ತಿರುವ ಇನಾಯತುಲ್ಲಾ ಈಗ ಕಾರಂದೂ ಮರ್ಕಝಿನ ವಿದ್ಯಾರ್ಥಿ. ಆತನೊಂದಿಗೆ ಆಬಿದ್ ಸನಾವುಲ್ಲಾದಾರ್, ಮುಹಮ್ಮದ್ ಅಶ್ರಫ್ ಶೇಖ್ ಸೇರಿದಂತೆ ಸುಮಾರು 200 ಮಂದಿ ಕಾಶ್ಮೀರಿ ವಿದ್ಯಾರ್ಥಿಗಳು ಈಗ ಮರ್ಕಝುಲ್‌ನಲ್ಲಿ ಜ್ಞಾನಾರ್ಜನೆ ಪಡೆಯುತ್ತಿದ್ದಾರೆ. ಈ ಬಾರಿಯ ರಮಝಾನ್ ಅವರ ಪಾಲಿಗೆ ವಿಶೇಷವಾದದ್ದು.

ಕೇರಳದ ಕ್ಯಾಲಿಕಟ್‌ನಲ್ಲಿರುವ ಮರ್ಕಝುಲ್‌ಗೆ ಮೊದಲ ಬಾರಿಗೆ ಕಾಶ್ಮೀರಿ ಮಕ್ಕಳು ತಲುಪಿದ್ದು 1994ರಲ್ಲಾಗಿತ್ತು. ಅಂದು ಕಾಶ್ಮೀರವನ್ನು ಸಂದರ್ಶಿಸಿದ್ದ ಕಾಂತಪುರಂ ಎ.ಪಿ.ಅಬೂಬಕರ್ ಮುಸ್ಲಿಯಾರ್ ಅವರು ಅಂದಿನ ಮುಖ್ಯಮಂತ್ರಿಯಾಗಿದ್ದ ಫಾರೂಕ್ ಅಬ್ದುಲ್ಲಾರನ್ನು ಭೇಟಿ ಮಾಡಿ ಕಾಶ್ಮೀರಿ ಮಕ್ಕಳ ಶೈಕ್ಷಣಿಕ ಸ್ಥಿತಿಗತಿಯ ಬಗ್ಗೆ ಚರ್ಚೆ ನಡೆಸಿದ್ದರು. ಹೊಸಪೀಳಿಗೆಯು ಆತಂಕಕಾರಿ ಸನ್ನಿವೇಶದಲ್ಲಿ ಬೆಳೆಯುತ್ತಿರುವುದನ್ನು ಮನಗಂಡ ಅಬೂಬಕರ್ ಮುಸ್ಲಿಯಾರ್ ಅವರು ಇಂತಹ ಮಕ್ಕಳಿಗೆ ಲೌಕಿಕ ಮತ್ತು ಧಾರ್ಮಿಕ ಶಿಕ್ಷಣ ನೀಡುವ ಭರವಸೆ ನೀಡಿ ಮೊದಲ ಹಂತದಲ್ಲಿ ಸುಮಾರು 300 ಮಕ್ಕಳನ್ನು ಮರ್ಕಝಿಗೆ ಕರೆತಂದರು. ಹೀಗಾಗಿ ಕೇರಳದ ಕ್ಯಾಲಿಕಟ್‌ಗೆ ಕಾಶ್ಮೀರಿ ಮಕ್ಕಳ ತಂಡವು ಮೊದಲ ಬಾರಿಗೆ ಬಂದು ತಲುಪಿತು. ಈ ಮಕ್ಕಳಿಗಾಗಿ ಮರ್ಕಝಿನಲ್ಲಿ ‘ಕಾಶ್ಮೀರಿ ಹೋಮ್’ ಎಂಬ ಪ್ರತ್ಯೇಕ ವಸತಿ ವ್ಯವಸ್ಥೆ ಇದೆ. ಈ ಮೂಲಕ ಕಾಶ್ಮೀರಿ ಮಕ್ಕಳಿಗೆ ಧಾರ್ಮಿಕ ಮತ್ತು ಲೌಕಿಕ ಶಿಕ್ಷಣ ನೀಡಲಾಗುತ್ತಿದೆ.

ಶೋಪಿಯಾನ್, ಕುಪ್‌ವಾರ, ಶ್ರೀನಗರ, ಬಾರಮುಲ್ಲಾ ಜಿಲ್ಲೆಗಳಿಂದ ಕಾಶ್ಮೀರಿ ಮಕ್ಕಳನ್ನು ಕರೆತರಲಾಗಿದೆ. ಈ ಎಲ್ಲ ಜಿಲ್ಲೆಗಳಲ್ಲಿ ಜನತೆ ಶೋಚನೀಯ ಬದುಕು ಸಾಗಿಸುತ್ತಿದ್ದಾರೆ. ಈ ಪೈಕಿ 30 ಮಂದಿ ವಿದ್ಯಾರ್ಥಿಗಳು ಅನಾಥರು. ಮರ್ಕಝಿನಲ್ಲಿ ಏಳನೆ ತರಗತಿಯಿಂದ ಪದವಿ ದರ್ಜೆಯವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿದ್ದಾರೆ. ಬಿ.ಟೆಕ್‌ನಲ್ಲಿ ಇಬ್ಬರು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ನಾಲ್ಕು



ಮಂದಿ ಕಾಶ್ಮೀರಿ ವಿದ್ಯಾರ್ಥಿಗಳು ಬಿ.ಕಾಂ. ಓದುತ್ತಿದ್ದಾರೆ. ಈಗೀಗ ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ಕಾಶ್ಮೀರಿ ಮಕ್ಕಳು ಸೇರ್ಪಡೆಗೊಳ್ಳುತ್ತಿದ್ದಾರೆ. ವಿಶೇಷವೆಂದರೆ ಈ ಮಕ್ಕಳು ಕೇರಳದ ಆಹಾರ ಮತ್ತು ಹವಾಗುಣಕ್ಕೆ ಒಗ್ಗಿಹೋಗಿದ್ದಾರೆ. ಉರ್ದು ಭಾಷೆಯೊಂದಿಗೆ ಮಲಯಾಳಂ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಕಾಶ್ಮೀರಿ ವಿದ್ಯಾರ್ಥಿಗಳು ವ್ಯವಹರಿಸಬಲ್ಲರು. ಗಾಯನ ಈ ಮಕ್ಕಳ ವಿಶೇಷ ಕಲೆ. ಇವರ ಸುಮಧುರ ಕಂಠದ ಹಾಡುಗಳ ಹಲವು ಧ್ವನಿಸುರುಳಿಗಳು ಹೊರಬಂದಿವೆ.

ಶೈಕ್ಷಣಿಕ ವರ್ಷಾಂತ್ಯದಲ್ಲಿ ಮರ್ಕಝುಲ್‌ನ ಖರ್ಚಿನಲ್ಲೇ ಕಾಶ್ಮೀರಿ ವಿದ್ಯಾರ್ಥಿಗಳನ್ನು ಊರಿಗೆ ಕಳುಹಿಸಿಕೊಡಲಾಗುತ್ತದೆ ಮತ್ತು ಕರೆತರಲಾಗುತ್ತದೆ. ಊರಿಗೆ ತೆರಳಿದ ವಿದ್ಯಾರ್ಥಿಗಳು ಅಲ್ಲಿ ಸಾಮಾಜಿಕ ಜನಜಾಗೃತಿಯನ್ನೂ ಮೂಡಿಸುತ್ತಾರೆ ಎಂದು ಮರ್ಕಝುಲ್‌ನ ವ್ಯವಸ್ಥಾಪಕ ಕೆ.ಮೂಸ ಸಖಾಫಿ ಹೇಳುತ್ತಾರೆ. ಸಂಘರ್ಷಬಾಧಿತ ಕಾಶ್ಮೀರದಲ್ಲಿ ಶೈಕ್ಷಣಿಕ ಮತ್ತು ರಿಲೀಫ್ ಕೆಲಸಗಳಿಗಾಗಿ ಶೋಪಿಯಾನ್ ಜಿಲ್ಲೆಯ ಪಾಂಪೂರಿನಲ್ಲಿ ಮರ್ಕಝುಲ್‌ನ ಕಚೇರಿ ಕಾರ್ಯನಿರ್ವಹಿಸುತ್ತಿದೆ.

ಕಾಶ್ಮೀರದ ಹೊರತಾಗಿ ಉತ್ತರ ಭಾರತದ ರಾಜ್ಯಗಳಿಂದ ಸುಮಾರು 800 ಮಂದಿ ವಿದ್ಯಾರ್ಥಿಗಳು ಮರ್ಕಝುಲ್‌ನಲ್ಲಿ ವಿದ್ಯಾರ್ಜನೆಗೈಯ್ಯುತ್ತಿದ್ದಾರೆ. ಪಶ್ಚಿಮಬಂಗಾಳ, ಬಿಹಾರ, ಒರಿಸ್ಸಾ, ಉತ್ತರಪ್ರದೇಶ, ಮಧ್ಯಪ್ರದೇಶ, ಹರಿಯಾಣ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದಾರೆ. ಇವರೆಲ್ಲರ ಮಧ್ಯೆ ಕಣ್ಣೀರ ಕಣಿವೆ ಎಂದು ಕರೆಯಲ್ಪಡುತ್ತಿರುವ ಕಾಶ್ಮೀರದ ಮಕ್ಕಳು ಕಲಿಯುತ್ತಿರುವುದು ಮಾತ್ರ ವಿಶೇಷ.

ಕೃಪೆ: ತೇಜಸ್

# ಬೀದಿ ನಾಯಿಗಳ ರಂಪಾಟ



ಅದೊಂದು ಊರು. ಎಲ್ಲರೂ ನೆಮ್ಮದಿಯಾಗಿದ್ದರು. ಮಾನವೀಯತೆಯನ್ನು ಅವರು ಮೈಗೂಡಿಸಿಕೊಂಡಿದ್ದರು.

ಆತ ಆ ಊರಿನ ಧಣಿಕ. ಬೆಳಗ್ಗೆ ಎದ್ದು ಊರಿಡೀ ಒಂದು ಸುತ್ತು ಬರುತ್ತಿದ್ದ. ಸಾಕು ನಾಯಿ ಆತನನ್ನು ಹಿಂಬಾಲಿಸುತ್ತಿತ್ತು.

ಬೀದನಾಯಿಗಳು ಗುಂಪು ಗುಂಪಾಗಿ ಸ್ವತಂತ್ರವಾಗಿ ಆಟವಾಡುತ್ತಿದ್ದವು. ತಮಗಿಷ್ಟ ಬಂದದ್ದನ್ನು ತಿನ್ನುತ್ತಿದ್ದವು. ಒಂದೊಂದು ನಾಯಿಯ ಬಾಯಿಯಲ್ಲಿ ಒಂದೊಂದು ಬಗೆಯ ವಸ್ತುಗಳು ಇದ್ದವು. ಒಂದು ಚಪ್ಪಲಿಯನ್ನು ತಿನ್ನುವುದಕ್ಕಾಗಿ ಬೀದಿನಾಯಿಗಳು ಪರಸ್ಪರ ಜಗಳ ಮಾಡುತ್ತಿದ್ದವು.

ಧಣಿಕನ ನಾಯಿ ನಿತ್ಯವೂ ಬೀದಿನಾಯಿಗಳ ಆಟ, ಜಗಳವನ್ನು ನೋಡಿ ಆನಂದಿಸುತ್ತಿತ್ತು. ಆ ಚಪ್ಪಲಿಯಲ್ಲಿ ಏನೋ ವಿಶೇಷ ರುಚಿ ಇರಬೇಕು ಎಂದುಕೊಂಡಿತು. ತಾನೂ ಕೂಡ ಬೀದಿನಾಯಿಗಳಂತೆ ಸ್ವತಂತ್ರವಾಗಿ ಜೀವಿಸಬೇಕು, ಆನಂದಿಸಬೇಕು ಎಂದು ಬಯಸಿತು.

ಮನದೊಳಗಿನ ಆಸೆ ಚಿಗುರೊಡೆದು ಹೆಮ್ಮರವಾಯಿತು. ಬೀದಿನಾಯಿಗಳೊಂದಿಗೆ ತನ್ನ ಆಸೆಯನ್ನು ಹೇಳಿಕೊಂಡಿತು. ಧಣಿಕನ ಕಣ್ಣು ತಪ್ಪಿಸಿ ಅದು ಬೀದಿನಾಯಿಗಳೊಂದಿಗೆ ಸೇರಿಕೊಂಡಿತು. ಬೀದಿ ನಾಯಿಗಳ ಸಂಘರ್ಷದ ಜೀವನ ಅದಕ್ಕೆ ತುಂಬಾ ಇಷ್ಟವಾಯಿತು.

ಚಪ್ಪಲಿ ತಿನ್ನುವ ತನ್ನ ಆಸೆಯನ್ನು ಅದು ಬೀದಿನಾಯಿಗಳ ಮುಂದಿಟ್ಟಿತು. ಬೀದಿನಾಯಿಗಳನ್ನು ಹೊಡೆದೋಡಿಸುವ ಈ ದಿನಗಳಲ್ಲಿ ತಿನ್ನಲು ಸರಿಯಾಗಿ ಮಾಂಸ, ಮೂಳೆಗಳೇ ಸಿಗುತ್ತಿಲ್ಲ, ಇನ್ನು ಚಪ್ಪಲಿ ಸಿಗುವುದಾದರೂ ಹೇಗೆ? ಎಂದು ಬೀದಿ ನಾಯಿಗಳ ನಾಯಕ ಚಿಂತಿಸತೊಡಗಿತು.

ಅದಕ್ಕೊಂದು ಉಪಾಯ ಹೊಳೆಯಿತು. ಹಳೆಯ ಎರಡು ಚಪ್ಪಲಿ, ನಾಲ್ಕೈದು ಕಲ್ಲುಗಳನ್ನು ಆ ಪುರಾತನ ದೇವಸ್ಥಾನದ ಬಾಗಿಲ ಮುಂದೆ ಇಡಲು ಧಣಿಕನ ನಾಯಿಗೆ ತಿಳಿಸಿತು. ಧಣಿಕನ ನಾಯಿ ಹಾಗೆಯೇ ಮಾಡಿತು.

ಮರುದಿನ ಆ ಊರು ಎಂದಿನಂತಿರಲಿಲ್ಲ. ಅಲ್ಲಲ್ಲಿ ಜನರು ಗುಂಪುಗೂಡತೊಡಗಿದರು. ಚರ್ಚೆಗಳು ಕಾವೇರುತ್ತಿದ್ದವು. ವದಂತಿಗಳು ಹರಡತೊಡಗಿದವು. ಉದ್ರಿಕ್ತರು ಬೀದಿಗಿಳಿದು ಕಚ್ಚಾಡತೊಡಗಿದರು. ಭಾರೀ ಗಲಭೆ ಸೃಷ್ಟಿಯಾಯಿತು. ನಾಲ್ಕೈದು ಜೀವಗಳು ಉರುಳಿದವು. ಅಂಗಡಿ ಮುಂಗಟ್ಟುಗಳು ಬೆಂಕಿಗಾಹುತಿಯಾದವು. ಅಲ್ಲಲ್ಲಿ ರಕ್ತ, ಮಾಂಸದ ವಾಸನೆ ಬಡಿಯುತ್ತಿದ್ದವು. ಕರ್ಫ್ಯೂ ಹೇರಲಾದ ಆ ಊರಿನಲ್ಲಿ ನಾಯಿಗಳು ಮಾತ್ರ ರಾಜಾರೋಷದಿಂದ ಬೀದಿಯಲ್ಲಿ ಸಂಚರಿಸುತ್ತಿದ್ದವು.

ಧಣಿಕನ ನಾಯಿಗೆ ಪ್ರಾಯಶ್ಚಿತ ಉಂಟಾಯಿತು. ಪೊಲೀಸ್ ಪಡೆಯ ನಡುವೆ ಬಂದು ತನ್ನದೇ ಭಾಷೆಯಲ್ಲಿ ವಾಸ್ತವ ಸಂಗತಿ ತಿಳಿಯಿತು. ಸತ್ಯವನ್ನು ತಿಳಿಯುವ ಮನಸ್ಸು ಅಲ್ಲಿ ಯಾರಿಗೂ ಇರಲಿಲ್ಲ. ಅವರೆಲ್ಲ ಕಿವುಡರಾಗಿದ್ದರು. ನಾಯಿಯ ವಿಪರೀತ ಬೊಗಳುವಿಕೆ ಪೊಲೀಸರಿಗೆ ಕಿರಿಕಿರಿ ಉಂಟು ಮಾಡಿತು. ಎಲ್ಲರೂ ಸೇರಿ ನಾಯಿಯನ್ನು ಅಟ್ಟಾಡಿಸಿದರು. ಗಾಯಗೊಂಡ ನಾಯಿ ನೋವಿನಿಂದ ಚೀರುತ್ತಾ ಧಣಿಕನ ಮನೆ ಸೇರಿತು.

ಇದನ್ನೆಲ್ಲ ದೂರದಲ್ಲೇ ನಿಂತು ನೋಡುತ್ತಿದ್ದ ಬೀದಿ ನಾಯಿಗಳು ಸುರಕ್ಷಿತವಾಗಿ ಆನಂದದಿಂದ ಕುಣಿದಾಡುತ್ತಿದ್ದವು.

ಅಲ್ತಾಫ್ ಬಿಳಿಗುಳ

# ದೇವನ ಅನುಗ್ರಹ

ಓರ್ವ ವೃದ್ಧ 80 ವರ್ಷ ವಯಸ್ಸಾಗುತ್ತಿದ್ದಂತೆಯೇ ಆತನ ಕಿವಿಗೆ ರೋಗ ಬಾಧಿಸಿತು. ಇದರ ಪರಿಣಾಮವಾಗಿ ಆತ ಕಿವುಡನಾಗುವ ಪರಿಸ್ಥಿತಿಯೂ ಬಂದೊದಗಿತು. ಆ ವೃದ್ಧ ಚಿಕಿತ್ಸೆಗೆಂದು ಆಸ್ಪತ್ರೆಗೆ ಹೋದಾಗ ತಕ್ಷಣ ಆಪರೇಷನ್ ಮಾಡಿಸಬೇಕೆಂದು ವೈದ್ಯರು ಸೂಚಿಸಿದರು. ಕಿವಿಗೆ ಬಾಧಿಸಿದ ರೋಗ ಗುಣಮುಖವಾಗಲು ಆತ ಆಪರೇಷನ್‌ಗೆ ಒಪ್ಪಿಗೆ ಸೂಚಿಸಿದ.

ಆಪರೇಷನ್ ಸಂಪೂರ್ಣವಾಗಿ ಯಶಸ್ವಿಯಾದ ಬಳಿಕ ವೈದ್ಯರು ಎಲ್ಲಾ ವಿವಿಧ ವೆಚ್ಚವನ್ನು ಒಳಗೊಂಡ ಚಿಕಿತ್ಸೆಯ ಬಿಲ್‌ನ್ನು ಆ ವೃದ್ಧನ ಕೈಗಿತ್ತರು. ವೃದ್ಧ ಆ ಬಿಲ್‌ನ್ನು ನೋಡಿ ಅಳಲು ಪ್ರಾರಂಭಿಸಿದನು. ವೃದ್ಧನ ಈ ಪರಿಸ್ಥಿತಿಯನ್ನು ನೋಡಿದ ವೈದ್ಯರು ನಿನ್ನ ಆರ್ಥಿಕ ಪರಿಸ್ಥಿತಿಯು ಚೆನ್ನಾಗಿಲ್ಲ ಎಂದು ನೀನು ಮೊದಲೇ ತಿಳಿಸುತ್ತಿದ್ದರೆ ಇದಕ್ಕಿಂತ ಕಡಿಮೆ ವೆಚ್ಚದಲ್ಲಿ ಆಗುವ ಚಿಕಿತ್ಸೆಯನ್ನು ನೀಡುತ್ತಿದ್ದೆವು ಎಂದು ಹೇಳಿದರು.

ನಾನು ಹಣಕ್ಕಾಗಿ ಅಳುತ್ತಿಲ್ಲ. ಆದರೆ ನನಗೆ ದೇವನು 80 ವರ್ಷಗಳಿಂದ ಕಿವಿ ಕೇಳಿಸುವಂತೆ ಮಾಡಿದ್ದಾನೆ. ಆದರೆ ದೇವನು ಒಮ್ಮೆಯೂ ನನಗೆ ಬಿಲ್‌ನ್ನು ಕಳುಹಿಸಿದ್ದಿಲ್ಲ. ಅದಕ್ಕಾಗಿ ನಾನು ಅಳುತ್ತಿದ್ದೇನೆ ಎಂದು ಆ ವೃದ್ಧ ಹೇಳಿದನು.



ನೀತಿ: ದೇವನು ನಮಗೆ ಅಪಾರವಾದ ಅನುಗ್ರಹಗಳನ್ನು ದಯಪಾಲಿಸಿರುತ್ತಾನೆ. ಆದರೆ ದೇವನು ಅದನ್ನು ನಮ್ಮಿಂದ ಕಸಿದುಕೊಂಡಾಗ ಮಾತ್ರ ಅದರ ಮೌಲ್ಯ ನಮಗೆ ತಿಳಿಯುತ್ತದೆ.

## ಟ್ಯೂಬ್‌ಲೈಟ್ ಹೇಗೆ ಪ್ರಕಾಶಿಸುತ್ತದೆ?

ನಾವು ದಿನಂಪ್ರತಿ ಉಪಯೋಗಿಸುವ ವಿದ್ಯುದ್ಬುರುಡೆಯಲ್ಲಿ ತೆಳುವಾದ ತಂತಿಯ ಸುರುಳಿಯಿದ್ದು ಅದರಲ್ಲಿ ವಿದ್ಯುತ್ ಹರಿದಾಗ ಈ ತಂತಿಯ ತಾಪಮಾನವು ಹೆಚ್ಚಿ ಅದು ಬಿಳಿಯ ಪ್ರಕಾಶವಾಗಿ ಹೊರಹೊಮ್ಮುತ್ತದೆ.

ಆದರೆ ಟ್ಯೂಬ್‌ಲೈಟಿನ ಕೊಳವೆಯಲ್ಲಿ ಏನಾಗುತ್ತದೆ ಎಂದು ಬಲ್ಲಿರಾ? ಟ್ಯೂಬ್‌ಲೈಟ್ ಬೇರೆ ಬಗೆಯಾಗಿ ಕಾರ್ಯ ಮಾಡುವುದು. ಕೊಳವೆಯ ಎರಡೂ ತುದಿಗಳಲ್ಲಿ ವಿದ್ಯುತ್ ಅಗ್ರಗಳಿದ್ದು, ಕೊಳವೆಯಲ್ಲಿ ಕಡಿಮೆ ಒತ್ತಡದಲ್ಲಿರುವ ಅನಿಲವಿದೆ. ಈ ಅನಿಲದಲ್ಲಿ ವಿದ್ಯುತ್ ಹರಿದಾಗ ನೇರಳಾತೀತ ಕಿರಣಗಳು ಹೊರಹೊಮ್ಮುತ್ತವೆ. ಆದರೆ ಇಂಥ ಕಿರಣಗಳು ನಮ್ಮ ಕಣ್ಣಿಗೆ ಕಾಣಿಸುವುದಿಲ್ಲ. ಕೊಳವೆಯ ಒಳಮೈಯನ್ನು ಕಿರಣ ಸ್ಫುರಣಗೊಳಿಸಬಲ್ಲ ರಾಸಾಯನಿಕ ಪದಾರ್ಥದಿಂದ ಸವರಲಾಗಿದ್ದು, ಈ ರಾಸಾಯನಿಕವು (ಅತಿನೀಲಕಿರಣ) ಅಗೋಚರಕಿರಣ ಸ್ಫುರಣ ಮಾಡುವುದೇ ನಮಗೆ ಪ್ರಖರವಾದ ಬೆಳಕನ್ನು ಕೊಡುವುದು. ಈ ತರಹದ ವಿದ್ಯುತ್ ಬುರುಡೆಗಳಲ್ಲಿ ಬಳಸಲಾದ ವಿದ್ಯುತ್ತಿನ ಪ್ರಮಾಣ (ಆದ್ದರಿಂದ ಖರ್ಚು) ಕಡಿಮೆ ಇರುತ್ತದೆ. ಇಂಥ ಕೊಳವೆಯಲ್ಲಿ ರಾಸಾಯನಿಕ ಪ್ರಚೋದನೆ ಬೆಳಕನ್ನು ಕೊಡುತ್ತದೆಯಲ್ಲದೆ ಹಗಲಿನ ಬೆಳಕಿನಂತೆ ಹೋಲುವ ಬೆಳಕನ್ನು ಪಡೆಯಲು ಸಾಧ್ಯ.

ಸಂಗ್ರಹ: ಹುದಾ ಫಾತಿಮಾ ಎಚ್.

# ರಮಝಾನ್‌ನಲ್ಲಿ ಟ್ಯಾಲೆಂಟ್ ಚಟುವಟಿಕೆಗಳು






1. ಸಮಾಜ ಸೇವಕರ ಸ್ನೇಹ ಸಮ್ಮಿಲನ ಮತ್ತು ಇಫ್ತಾರ್ ಕೂಟ
2. ಮರಳಿ ಬಾ ಶಾಲಾ ಸಂಘಟಕರ ಮತ್ತು ಮೌಲವಿಗಳ ಸ್ನೇಹ ಸಮ್ಮಿಲನ ಮತ್ತು ಇಫ್ತಾರ್ ಕೂಟ
3. BSW, MSW ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಮತ್ತು ಇಫ್ತಾರ್ ಕೂಟ
4. ಪ್ರೊಫೆಶನಲ್ ಕೋರ್ಸ್ (ಎಂ.ಬಿ.ಬಿ.ಎಸ್, ಇಂಜಿನಿಯರಿಂಗ್, ಎಂ.ಬಿ.ಎ ಇತ್ಯಾದಿ) ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಮತ್ತು ಇಫ್ತಾರ್ ಕೂಟ
5. ಮರಳಿ ಬಾ ಶಾಲಾ ಶಿಕ್ಷಕರ ಸ್ನೇಹ ಸಮ್ಮಿಲನ
6. ಸ್ವಾವಲಂಬಿ ಮತ್ತು ನಿರ್ಗತಿಕ ಮಹಿಳೆಯರ ಸ್ನೇಹ ಸಮ್ಮಿಲನ ಮತ್ತು ಸಹಾಯ (ಆಸರೆ ವಿಮೆನ್ಸ್ ಫೌಂಡೇಶನ್ ನ ಕಾರ್ಯಕ್ರಮ)
7. ಸ್ವಾತಂತ್ರ್ಯೋತ್ಸವ ದಿನಾಚರಣೆ- ಆನ್ ಲೈನ್ ಕ್ವಿಝ್ ಕಾರ್ಯಕ್ರಮ
8. ದ.ಕ ಜಿಲ್ಲೆಯ ಎಲ್ಲಾ ಜಮಾಅತ್ ಹಂತದಲ್ಲಿ ಸಮಾಜ ಸೇವಕರ ಸಮೀಕ್ಷೆ
9. ಮಹಿಳಾ ವಿಕಲಾಂಗ ಚೇತನರ ಸಮೀಕ್ಷೆ ಮತ್ತು ಸಹಾಯ (ಆಸರೆ ವಿಮೆನ್ಸ್ ಫೌಂಡೇಶನ್ ನ ಕಾರ್ಯಕ್ರಮ)
10. ಭಿಕ್ಷುಕರ ಸಮೀಕ್ಷೆ
11. ಅರ್ಹರಿಗೆ ಈದ್ ಕಿಟ್, ಅಕ್ಕಿ, ಸೀರೆ ವಿತರಣೆ
12. ಸಾಚಾರ್ ವರದಿಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮ
13. ಕುರ್‌ಆನ್ ತರಗತಿ-ಮೌಲಾನಾ ಸದಕತುಲ್ಲಾ ನದ್ವಿಯವರಿಂದ
14. ಸಾಮಾಜಿಕ ಜಾಗೃತಿ ಮೂಡಿಸುವ ಲೇಖನಗಳ ಹಂಚಿಕೆ
15. ಹರೇಕಳ ಹಾಜಬ್ಬ ರವರ ಜೀವನ ಚರಿತ್ರೆ ಪುಸ್ತಕ ಬಿಡುಗಡೆ
16. ರಮಝಾನ್ ಶುಭಾಶಯದ ಗ್ರೀಟಿಂಗ್ಸ್ ಹಂಚಿಕೆ

**ನನ್ನ ಮಸೀದಿಯಲ್ಲಿ (ಮದೀನಾ) ಇತ್ತಿಕಾಫ್ ಕೂರುವುದಕ್ಕಿಂತಲೂ ಓರ್ವನ ಅಗತ್ಯತೆಯನ್ನು ಪೂರೈಸಲು ನಡೆದುಕೊಂಡು ಹೋಗುವುದು ನನಗೆ ಅತ್ಯಂತ ಇಷ್ಟವಾದುದಾಗಿದೆ. (ಪ್ರವಾದಿ ವಚನ)**

ಅಲ್ಲಾಹನ ಅಪಾರವಾದ ಅನುಗ್ರಹದಿಂದ ಪವಿತ್ರ ರಮಝಾನ್ ತಿಂಗಳಲ್ಲಿ ಅಲ್ಲಾಹನ ಆರಾಧನೆಯೊಂದಿಗೆ ಕಿಂಚಿತ್ ಜನಸೇವೆಯನ್ನು (ಹುಖೂಕುಲ್ ಇಬಾದ್)ಮಾಡಲು ಸಾಧ್ಯವಾಗಿದೆ. ನಮ್ಮ ಕಾರ್ಯಕರ್ತರು ಉಪವಾಸ ವ್ರತವಿದ್ದರೂ ಇಡೀ ಜಿಲ್ಲೆಯಾದ್ಯಂತ ಮಸೀದಿಗಳಿಗೆ ಭೇಟಿ ನೀಡಿ ಸಮಾಜ ಸೇವಕರ ಸಮೀಕ್ಷೆ ನಡೆಸಿದ್ದಾರೆ. ಸಮಾಜದ ಬೇರೆ ಬೇರೆ ಸ್ತರದಲ್ಲಿರುವ ಜನರನ್ನು ಆಹ್ವಾನಿಸಿ ಅವರಿಗೆ ಸಾಚಾರ್ ವರದಿಯ ಮಂಡನೆಯ ಮೂಲಕ ಮುಸ್ಲಿಂ ಸಮುದಾಯದ ಸ್ಥಿತಿಗತಿಯನ್ನು ತಿಳಿಸಲಾಗಿದೆ. ಯುವಜನತೆಯನ್ನು ಸಮಾಜಮುಖಿಯಾಗಿ ಪರಿವರ್ತಿಸಲು ಪ್ರಯತ್ನಿಸಲಾಗಿದೆ. ಗುಂಪುಚರ್ಚೆಯ ಮೂಲಕ ಅವರ ಮುಂದಿನ ಹೆಜ್ಜೆಯನ್ನು ತಿಳಿಯಲಾಗಿದೆ. ನಮ್ಮ ಧಾರ್ಮಿಕ ಪಂಡಿತರು ನಮ್ಮೊಂದಿಗೆ ಅದ್ಭುತವಾಗಿ ಸಹಕರಿಸಿದ್ದಾರೆ. ತಮ್ಮ ಪ್ರಭಾಷಣದಲ್ಲಿ ಜನಸೇವೆಯ ಮಹತ್ವವನ್ನು ಬೆರೆಸಿದ್ದಾರೆ. ಈ ಲೇಖನ ಟ್ಯಾಲೆಂಟ್ ಏನು ಮಾಡಿದೆ ಎನ್ನುವುದರ ಜಾಹೀರಾತು ಅಥವಾ ಪ್ರಚಾರಕ್ಕಾಗಿ ಅಲ್ಲ. ಇಲ್ಲಿ ವ್ಯಕ್ತಿ ಅಥವಾ ಸಂಘಟನೆ ಮುಖ್ಯವಲ್ಲ. ಸಮಾಜದ ಕಟ್ಟಕಡೆಯ ವ್ಯಕ್ತಿಗೆ ಸಿಗಬೇಕಾದ ಸವಲತ್ತುಗಳು ಸಿಗಬೇಕು. ಅವರೂ ಸಶಕ್ತರಾಗಬೇಕು ಎನ್ನುವುದೇ ನಮ್ಮ ಉದ್ದೇಶ. ಇದಕ್ಕಿಂತಲೂ ಮಿಗಿಲಾದ ಕೆಲಸ ಮಾಡಿದ ಅನೇಕ ವ್ಯಕ್ತಿಗಳು, ಸಂಘಟನೆಗಳು ಇವೆ. ಅವರ ಕೆಲಸಗಳೂ ಇತರರಿಗೆ ಸ್ಫೂರ್ತಿಯಾಗಲು ಬೆಳಕಿಗೆ ಬರಬೇಕಾಗಿದೆ. ಇವೆಲ್ಲಾ ಸಾಧ್ಯತೆಗಳಿವೆ ಎನ್ನುವುದರ ಮಾದರಿ ಮಾತ್ರ. ಕಾರ್ಯಕ್ರಮ ಚೆನ್ನಾಗಿದ್ದರೆ ನಮ್ಮ ಸಂಸ್ಥೆಯ ಹೆಸರು ತೆಗೆದು ಝೆರಾಕ್ಸ್ ಮಾಡಿ ಹಂಚಬಹುದು. ಮಸೀದಿ ಕೇಂದ್ರವಾಗಿಟ್ಟು ಉಲೆಮಾ ಉಮರಾಗಳ ನೇತೃತ್ವದಲ್ಲಿ ನಿಮ್ಮೂರಿನ ಜಮಾಅತ್ ಸಬಲೀಕರಣಕ್ಕಾಗಿ ಏನೆಲ್ಲಾ ಮಾಡಬಹುದು ಎಂದು ಚಿಂತಿಸಿ ಈಗಲೇ ಯೋಜನೆ ಹಾಕಿರಿ.


## ಟ್ಯಾಲೆಂಟ್ ರಿಸರ್ಚ್ ಫೌಂಡೇಶನ್ (ರಿ) ಮಂಗಳೂರು

ವಿಶ್ವಾಸ್ ಕ್ರೌನ್, ಮಿನ್ನ ಆಸ್ಪತ್ರೆ ಎದುರು, ಕಂಕನಾಡಿ ಫೋನ್-0824-4267883, 9845554868

E Mail: trfmangalore@gmail.com, Website: www.trfmangalore.org

# ಇಸ್ಲಾಮಿನಲ್ಲಿ ಮಹಿಳೆ

● ಅಬ್ದುಲ್ ರಝಾಕ್ ಕೆಮ್ಮಾರ



ಮಹಿಳಾ ಸ್ವಾತಂತ್ರ್ಯದ ಬಗ್ಗೆ ಸಮಕಾಲೀನ ವೇಳೆಯಲ್ಲೂ ಕೂಡ ಸಾಕಷ್ಟು ಚರ್ಚೆಗಳು ನಡೆಯುತ್ತಿದೆ. ಆಕೆಗೆ ನೀಡಿದ ಸ್ವಾತಂತ್ರ್ಯದ ಬಗ್ಗೆ ಮತ್ತು ಸ್ವಾತಂತ್ರ್ಯವನ್ನು ತಡೆಹಿಡಿದ ಬಗ್ಗೆ, ಇನ್ನಷ್ಟು ಸ್ವಾತಂತ್ರ್ಯ ನೀಡುವ ಬಗ್ಗೆ ನಡೆಯುವ ಚರ್ಚೆಗಳಿಗೇನೂ ಕಡಿಮೆಯಿಲ್ಲ. ಆದರೆ ವಾಸ್ತವ ಸಂಗತಿ ಬೇರೆಯೇ ಇದೆ. ಮಹಿಳಾ ಸ್ವಾತಂತ್ರ್ಯ ಮತ್ತು ಆಕೆಯ ಹಕ್ಕುಗಳ ಬಗ್ಗೆ ವಿವಿಧ ರೀತಿಯ ವಿಚಾರ, ಚರ್ಚೆ, ಸಿದ್ಧಾಂತಗಳು ಇತಿಹಾಸದಲ್ಲಿ ಬಹಳಷ್ಟು ಗತಿಸಿ ಹೋಗಿದೆ. ಆದರೆ ಎಲ್ಲಾ ಕಾಲಗಳಲ್ಲೂ ಮಹಿಳಾ ಸಮುದಾಯ ಎಲ್ಲೆ ಮೀರಿದ ಅವಮಾನ, ಆಕ್ರಮಣ, ದೌರ್ಜನ್ಯಕ್ಕೆ ಒಳಗಾಗಿದೆ. ಯಾವ ಸಿದ್ಧಾಂತಗಳು ಕೂಡ ಆಕೆಯನ್ನು ರಕ್ಷಿಸಬೇಕೆಂಬ ವಾಸ್ತವಿಕ ಪ್ರಕ್ರಿಯೆಗೆ ಸಹಕಾರಿಯಾಗಲಿಲ್ಲ ಅನ್ನುವುದು ಕೂಡ ಅಷ್ಟೇ ಐತಿಹಾಸಿಕ ಸತ್ಯವಾಗಿದೆ.

ಜಗತ್ತಿನಲ್ಲಿ ಬಹಳಷ್ಟು ಧರ್ಮ ಸಿದ್ಧಾಂತಗಳು ಇಂದಿಗೂ ಜೀವಂತವಾಗಿದ್ದು, ಹೆಣ್ಣಿನ ಬಗ್ಗೆ ಅವು ತಾಳಿದ ನಿಲುವು ಕೂಡ ಸಮಕಾಲೀನ  ಸಮಾಜದಲ್ಲಿ ಚರ್ಚಿಸಲ್ಪಡುತ್ತಿದೆ. ಇವೆಲ್ಲದರ ಮಧ್ಯೆ ಮಹಿಳೆಯ ಕುರಿತು ಇಸ್ಲಾಮಿನ ನಿಲುವು ಬಹಳ ಸ್ಪಷ್ಟವೂ, ವೈಜ್ಞಾನಿಕವೂ, ಪ್ರಾಯೋಗಿಕವೂ ಆಗಿದೆ.

ಮುಸ್ಲಿಮರ ಒಟ್ಟಾರೆ ಜೀವನ ಕ್ರಮವು ಕುರ್‌ಆನ್ ಮತ್ತು ಹದೀಸ್ (ಪ್ರವಾದಿ ವಚನಗಳು)ಗಳ ಆಧಾರದಲ್ಲಿ ನಿರ್ಣಯಿಸಲ್ಪಟ್ಟಿದೆ. ಕುರ್‌ಆನ್,  ಅಲ್ಲಾಹನಿಂದ ಪ್ರವಾದಿ(ಸ)ಯವರಿಗೆ ಅವತೀರ್ಣಗೊಂಡದ್ದೆಂಬ ವಿಚಾರವು ಮುಸ್ಲಿಮರ ಮೂಲಭೂತ ವಿಶ್ವಾಸದ ಅವಿಭಾಜ್ಯ ಅಂಗವಾಗಿದೆ. ಅಂತಹ ವಿಶ್ವಾಸವಿಲ್ಲದ ಓರ್ವನನ್ನು ಮುಸ್ಲಿಮ್ ಎಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅಂತೆಯೇ ಹದೀಸ್

ಪ್ರವಾದಿ (ಸ)ಯವರ ವಚನಗಳಾಗಿವೆ. ಒಂದರ್ಥದಲ್ಲಿ ಹದೀಸ್ ವಚನಗಳೇ ಪವಿತ್ರ ಕುರ್‌ಆನಿನ ಅಧಿಕೃತ ವ್ಯಾಖ್ಯಾನಗಳಾಗಿವೆ.

ಪವಿತ್ರ ಕುರ್‌ಆನ್ ಮತ್ತು ಹದೀಸ್ ವಚನಗಳು ಮಾನವ ಸಮೂಹದ ಇಹಪರ ಗೆಲುವಿನ ಹಾದಿಯನ್ನು ತೆರೆದುಕೊಡುತ್ತದೆ. ಮಾನವನ ಬದುಕಿನಲ್ಲಿ ಎದುರಾಗುವ ಸಮಸ್ಯೆ, ದುಗುಡಗಳಿಗೆ ಮಾನವನು ವಿವಿಧ ರೀತಿಯ ಪರಿಹಾರಗಳನ್ನು ಹುಡುಕುತ್ತಿರುತ್ತಾನೆ. ಅಂತಹ ವಿಚಾರ ಮತ್ತು ಚಿಂತನೆಯನ್ನು ದೇವನು ಪ್ರತಿಯೊರ್ವ ಮನುಷ್ಯನಿಗೆ ನೀಡಿದ್ದಾನೆ. ಆದರೆ ಕೆಲವೊಂದು ವಿಚಾರಗಳು ಮಾನವ ಬುದ್ಧಿ, ಚಿಂತನೆಗೆ ನಿಲುಕದ ವಿಚಾರಗಳೂ ಇರುತ್ತವೆ. ಆದರೆ ಅಂತಹ ಕೆಲವೊಂದು ವಿಚಾರಗಳಲ್ಲಿ ದೇವ ನಿರ್ಣಯಗಳೇ ಅಂತಿಮವಾಗುತ್ತದೆ. ಹಲಾಲ್ (ಅನುಮತಿಸಲ್ಪಟ್ಟವು) ಹರಾಂ (ನಿಷಿದ್ಧ) ವಿಚಾರಗಳು ಇವುಗಳಲ್ಲಿ ಕೆಲವು.

ಇನ್ನು ಸ್ತ್ರೀ ಪುರುಷರಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ಚರ್ಚೆಗಳ ಮಧ್ಯೆ ಇಸ್ಲಾಮಿನ ನಿಲುವು ಬಹಳ ಸ್ಪಷ್ಟವಾಗಿವೆ. ಮಾನವರು ಎಂಬ ನೆಲೆಯಲ್ಲಿ ಅವರೀರ್ವರೂ ಸಮಾನರಾಗಿದ್ದಾರೆ. ಹೆಣ್ಣಿಗಿಂತ ಪುರುಷ ಮೇಲು, ಹೆಣ್ಣು ಪುರುಷನಿಗಿಂತ ಕೀಳು ಎಂಬ ಧೋರಣೆ ಇಸ್ಲಾಮ್‌ಗೆ ಅನ್ಯವಾದ ವಿಚಾರವಾಗಿದೆ. ಪವಿತ್ರ ಕುರ್‌ಆನ್ ಹೇಳುವುದನ್ನು ಕೇಳಿ.

**'' ಪುರುಷರು ಗಳಿಸಿದುದಕ್ಕನುಸಾರವಾದ ಪಾಲು ಅವರಿಗಿದೆ. ಸ್ತ್ರೀಯರು ಗಳಿಸಿದುದಕ್ಕನುಸಾರವಾದ ಪಾಲು ಅವರಿಗಿದೆ.''- (ಅನ್ನಿಸಾ:32)**

**''ಮಾತಾಪಿತರೂ ಆಪ್ತ ಬಂಧುಗಳೂ ಬಿಟ್ಟು ಹೋದ ಸಂಪತ್ತಿನಲ್ಲಿ ಪುರುಷರಿಗೆ ಪಾಲಿದೆ. ಮಾತಾಪಿತರಿಗೂ ಆಪ್ತ ಬಂಧುಗಳೂ ಬಿಟ್ಟು ಹೋದ ಸಂಪತ್ತಿನಲ್ಲಿ ಸ್ತ್ರೀಯರಿಗೂ ಪಾಲಿದೆ.''- (ಅನ್ನಿಸಾ:7)**

**''... ಅವರ ಪ್ರಭು ಹೇಳಿದನು: ನಾನು ನಿಮ್ಮಲ್ಲಿ ಯಾರೊಬ್ಬನ ಕರ್ಮವನ್ನೂ ನಿಷ್ಫಲಗೊಳಿಸುವವನಲ್ಲ. ಪುರುಷನಾಗಲೀ ಸ್ತ್ರೀಯಾಗಿರಲಿ. ನೀವೆಲ್ಲ ಒಂದೇ ವರ್ಗದವರು...'' - (ಆಲಿ ಇಮ್ರಾನ್:195)**

ಸೊತ್ತನ್ನು ಹೊಂದಲು ಸ್ವಾತಂತ್ರ್ಯ ನೀಡಿದಂತೆ ವೈವಾಹಿಕ ಜೀವನದಲ್ಲೂ ಆಕೆಗೆ ಮುಕ್ತವಾದ ಸ್ವಾತಂತ್ರ್ಯವನ್ನು ನೀಡಿತು. ಇಸ್ಲಾಮೀ ಕಾನೂನಿನಂತೆ ಆಕೆಯ ಒಪ್ಪಿಗೆಯಿಲ್ಲದೆ ಆಕೆಯ ವಿವಾಹ ನಡೆಸಬಾರದು.

**''ವಿಧವೆಯನ್ನು ಆಕೆಯ ಒಪ್ಪಿಗೆಯಿಲ್ಲದೆ ವಿವಾಹ ಮಾಡಿಸಬಾರದು. ಕನ್ಯೆಯನ್ನು ಆಕೆಯ ಒಪ್ಪಿಗೆಯಿಲ್ಲದೇ ವಿವಾಹ ಮಾಡಿಸಬಾರದು. ಆಕೆಯ ಮೌನವು ಸಮ್ಮತಿಯಾಗಿದೆ.'' (ಬುಖಾರಿ, ಮುಸ್ಲಿಮ್)**

ಆದರೆ ಇತಿಹಾಸದಲ್ಲಿ ಎಲ್ಲೂ ಕೂಡ ಯಾವುದೇ ಸಿದ್ಧಾಂತಗಳು ಈ ರೀತಿಯ ಹಕ್ಕನ್ನು ನೀಡಿದಾಗಿ ತಿಳಿದು ಬರುವುದಿಲ್ಲ. ಆದರೆ ಇಸ್ಲಾಂ ಆ ಹಕ್ಕನ್ನು 14 ಶತಮಾನಗಳ ಹಿಂದೆಯೇ ಮಹಿಳೆಗೆ ನೀಡಿದೆ. ಇಸ್ಲಾಮ್ ಮನ್ನಣೆ ನೀಡಿದ ಈ ಹಕ್ಕು ಯುರೋಪಿನಲ್ಲಿ ಅಂಗೀಕಾರ್ಹವಾದದ್ದು ಇಪ್ಪತ್ತನೇ ಶತಮಾನದಲ್ಲಿ! ಆದರೂ ತಮ್ಮ ಸಮುದಾಯ ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನೀಡಿತೆಂದು ಈ ಮಂದಿ ಬೂಟಾಟಿಕೆ ನಡೆಸುತ್ತಿದ್ದಾರೆ! ಮಹಿಳೆ ವಿಜ್ಞಾನವನ್ನು ಹೊಂದುವ ಮತ್ತು ಸೊತ್ತನ್ನು ಹೊಂದುವ ವಿಚಾರದಲ್ಲೂ ಕೂಡ ಯುರೋಪ್ ಇದೇ ರೀತಿಯ ಪ್ರತಿಗಾಮಿ ಚಿಂತನೆಯನ್ನೇ ಹೊಂದಿತ್ತಾದರೂ ಇತ್ತೀಚಿಗಿನ ವರೆಗೂ ಆ ಹಕ್ಕನ್ನು ಕೂಡ ನೀಡಲು ಅವರು ಮುಂದೆ ಬಂದಿರಲಿಲ್ಲ.

ಮಹಿಳೆಯರ ಸರ್ವಾಂಗೀಣ ರಕ್ಷಣೆಯ ಹೊಣೆಯನ್ನು ಇಸ್ಲಾಮ್ ಪುರಷನ ಮೇಲೆ ಹೊರಿಸುತ್ತದೆ. ಪವಿತ್ರ ಕುರ್‌ಆನ್ ಹೇಳುತ್ತದೆ.

**''ಪುರುಷರು ಸ್ತ್ರೀಯರ ಮೇಲ್ವಿಚಾರಕರಾಗಿರುತ್ತಾರೆ. ಇದು**

**ಆದರೆ ಇತಿಹಾಸದಲ್ಲಿ ಎಲ್ಲೂ ಕೂಡ ಯಾವುದೇ ಸಿದ್ಧಾಂತಗಳು ಈ ರೀತಿಯ ಹಕ್ಕನ್ನು ನೀಡಿದಾಗಿ ತಿಳಿದು ಬರುವುದಿಲ್ಲ. ಆದರೆ ಇಸ್ಲಾಂ ಆ ಹಕ್ಕನ್ನು 14 ಶತಮಾನಗಳ ಹಿಂದೆಯೇ ಮಹಿಳೆಗೆ ನೀಡಿದೆ. ಇಸ್ಲಾಮ್ ಮನ್ನಣೆ ನೀಡಿದ ಈ ಹಕ್ಕು ಯುರೋಪಿನಲ್ಲಿ ಅಂಗೀಕಾರ್ಹವಾದದ್ದು ಇಪ್ಪತ್ತನೇ ಶತಮಾನದಲ್ಲಿ! ಆದರೂ ತಮ್ಮ ಸಮುದಾಯ ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನೀಡಿತೆಂದು ಈ ಮಂದಿ ಬೂಟಾಟಿಕೆ ನಡೆಸುತ್ತಿದ್ದಾರೆ! ಮಹಿಳೆ ವಿಜ್ಞಾನವನ್ನು ಹೊಂದುವ ಮತ್ತು ಸೊತ್ತನ್ನು ಹೊಂದುವ ವಿಚಾರದಲ್ಲೂ ಕೂಡ ಯುರೋಪ್ ಇದೇ ರೀತಿಯ ಪ್ರತಿಗಾಮಿ ಚಿಂತನೆಯನ್ನೇ ಹೊಂದಿತ್ತಾದರೂ ಇತ್ತೀಚಿಗಿನ ವರೆಗೂ ಆ ಹಕ್ಕನ್ನು ಕೂಡ ನೀಡಲು ಅವರು ಮುಂದೆ ಬಂದಿರಲಿಲ್ಲ.**

**ಅಲ್ಲಾಹನು ಕೆಲವರಿಗೆ ಕೆಲವರ ಮೇಲೆ ಶ್ರೇಷ್ಠತೆ ಪ್ರದಾನ ಮಾಡಿದುದರಿಂದ ಮತ್ತು ಪುರುಷರು ತಮ್ಮ ಸಂಪತ್ತನ್ನು ಖರ್ಚು ಮಾಡುವುದರಿಂದ ಆಗಿರುತ್ತದೆ. -(ಅನ್ನಿಸಾ: 34)**

ಆದರೆ ಇಸ್ಲಾಮಿನ ವಿಮರ್ಶಕರು ಈ ಸೂಕ್ತವನ್ನೇ ಹಿಡಿದು ಇಸ್ಲಾಮ್ ಮಹಿಳೆಯರನ್ನು ಶೋಷಣೆಗೊಳಪಡಿಸುತ್ತಿದೆ ಎಂದು ವ್ಯಾಖ್ಯಾನಿಸುತ್ತಾರೆ. ಮಹಿಳೆಯರ ಮೇಲೆ ಅಧಿಕಾರ ಚಲಾಯಿಸಲು ಮತ್ತು ಅವಳನ್ನು ದಾಸಿಯಂತೆ ಕಾಣಲು ಇದು ಅಧಿಕಾರ ನೀಡುತ್ತದೆ ಎಂದು ಈ ಸೂಕ್ತವನ್ನು ದುರ್ವ್ಯಾಖ್ಯಾನ ಮಾಡುತ್ತಾರೆ.

ಸಂರಕ್ಷಕ, ಮೇಲ್ವಿಚಾರ, ಕಾರ್ಯನಿರ್ವಾಹಕ ಎಂಬ ಅರ್ಥಗಳಿರುವ ಪದ ವನ್ನು (ಖವ್ವಾಮೂನ) ಪುರುಷನ ಗುಣ ವಾಚಕವಾಗಿ ಇಲ್ಲಿ ಉಪಯೋಗಿಸಲಾಗಿದೆ. ಅದರ ಪ್ರಕಾರ ಈ ಸೂಕ್ತಕ್ಕೆ ಪುರುಷರು ಸ್ತ್ರೀಯರ ಸಂರಕ್ಷಕರು, ಮೇಲ್ವಿಚಾರಕರು ಮತ್ತು ಕಾರ್ಯನಿರ್ವಾಹಕರೆಂಬ ಅರ್ಥ ನೀಡಬಹುದಾಗಿದೆ.

ನೈಸರ್ಗಿಕವಾಗಿ ಮಹಿಳೆಯ ದೈಹಿಕ ಮಾನಸಿಕ ಪ್ರತ್ಯೇಕತೆಯನ್ನು ಪರಿಗಣಿಸುವಾಗ ಖಾಸಗಿ ಮತ್ತು ಸಾಮಾಜಿಕ ಜೀವನದಲ್ಲಿ ಆಕೆಗೆ ಸಂರಕ್ಷಣೆ ನೀಡಬೇಕೆಂಬ ವಿಚಾರದಲ್ಲಿ ಯಾರಿಗೂ ತರ್ಕವಿರಲಾರದು. ಇತಿಹಾಸದಲ್ಲಿ ಅತ್ಯಂತ ಅಸುರಕ್ಷಿತ, ದೌರ್ಜನ್ಯಪೀಡಿತ ಜೀವನವನ್ನು ನಡೆಸಿದಾಕೆ ಮಹಿಳೆಯೇ ಆಗಿದ್ದಳು. ಇಂದೂ ಕೂಡ ಅದೇ ರೀತಿ ಮುಂದುವರಿದೆ. ದೌರ್ಜನ್ಯ ಮುಕ್ತವಾದ ಜೀವನವನ್ನು ಆಕೆಗೆ ಕನಸಿನಲ್ಲೂ ಕಾಣಲು ಸಾಧ್ಯವಾಗುತ್ತಿಲ್ಲ.

2000ನೇ ಇಸವಿಯಲ್ಲಿ ಯುನಿಸೆಫ್ ಪ್ರಕಟಿಸಿದ ವರದಿಯು ಮಹಿಳೆಯರ ಮೇಲೆ ಮನೆಯೊಳಗೆ ನಡೆಯುವ ದೌರ್ಜನ್ಯದ ಕುರಿತು ತಿಳಿಸುವ ವಾಸ್ತವಾಂಶಗಳನ್ನು ಇಲ್ಲಿ ಉಲ್ಲೇಖಿಸುವುದು ಪ್ರಸ್ತುತವೆನಿಸುತ್ತದೆ. ದೈಹಿಕ ಹಲ್ಲೆ, ಲೈಂಗಿಕ ದೌರ್ಜನ್ಯ, ಬಲಾತ್ಕಾರ, ಮಾನಸಿಕ ಮತ್ತು ಭಾವನಾತ್ಮಕ ದೌರ್ಜನ್ಯ ಮಹಿಳಾ ಹತ್ಯೆ, ಲಿಂಗ ತಾರತಮ್ಯತೆಯ ಮೂಲಕ ಭ್ರೂಣ ಹತ್ಯೆ, ಹೆಣ್ಣು ಶಿಶು ಹತ್ಯೆ, ಒತ್ತಾಯ ಪೂರ್ವಕ ವೇಶ್ಯಾವಾಟಿಕೆ ಹೀಗೆ ಮಹಿಳೆಯರ ಮೇಲೆ ನಡೆಯುವ ವಿವಿಧ ರೀತಿಯ ದೌರ್ಜನ್ಯಗಳನ್ನು ವಿಂಗಡಿಸಿ ವರದಿ ಮಾಡಿದೆ.

ಜಗತ್ತಿನಲ್ಲೆಡೆ ಮಹಿಳಾ ದೌರ್ಜನ್ಯ ವ್ಯಾಪಕಗೊಂಡಿದೆ ಎಂಬುದು ಅಧ್ಯಯನ ವರದಿಗಳು ದೃಢಪಡಿಸುತ್ತವೆ. ಪ್ರತಿ ದೇಶದಲ್ಲಿ ಇಪ್ಪತ್ತರಿಂದ ಐವತ್ತು ಶೇಕಡದಷ್ಟು ಮಹಿಳೆಯರು ಗೃಹದೌರ್ಜನ್ಯಕ್ಕೆ ಬಲಿಯಾಗುತ್ತಿದ್ದಾರೆ.
(Domestic violence against women and girls, UNICEF, june 2000 p-4)

ಗೃಹ ದೌರ್ಜನ್ಯಗಳಿಗೆ ಬಲಿಯಾಗುವ ಮಹಿಳೆಯರಲ್ಲಿ ಆತ್ಮಹತ್ಯಾ ಅನುಪಾತ ಹೆಚ್ಚುತ್ತಿದೆ ಎಂದು ವರದಿಯಲ್ಲಿ ಪ್ರಸ್ತಾಪಿಸಲಾಗಿದೆ.

''ಅಮೇರಿಕಾದಲ್ಲಿ ದೌರ್ಜನ್ಯಕ್ಕೊಳಗಾದ 35-40 ಶೇಕಡಾ ಮಹಿಳೆಯರು ಆತ್ಮಹತ್ಯಾ ಪ್ರಯತ್ನ ನಡೆಸುತ್ತಾರೆ. ಶ್ರೀಲಂಕಾದಲ್ಲಿ ಗರ್ಭಧರಿಸುವುದು, ಹೆರಿಗೆ ಮೊದಲಾದ ಕಾರಣಗಳಿಂದ ಸಾಯುವ ಮಹಿಳೆಯರಿಗಿಂತ ಶೇ.55 ಪಟ್ಟು ಹೆಚ್ಚು ಮಹಿಳೆಯರು ದೌರ್ಜನ್ಯ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.
(Domestic violence against women and girls, UNICEF, june 2000 p.4-4)

ಜಗತ್ತಿನ ವಿವಿಧ ದೇಶಗಳ ಮಹಿಳೆಯರಲ್ಲಿ ನಡೆಸಿದ ಅಧ್ಯಯನದ ಮೂಲಕ ಕಂಡುಕೊಡ ಮಹಿಳಾ ದೌರ್ಜನ್ಯಗಳ ಅಂಕಿ ಅಂಶಗಳಲ್ಲಿ ಕೆಲವು ಹೀಗಿದೆ.

ಕೆನಡಾ-29%, ಜಪಾನ್-50%, ಇಂಡಿಯಾ-45%, ಕೆನ್ಯಾ-42, ನಿಕರಾಗುವ-52%, ಪೋಲೆಂಡ್-60%, ಬ್ರಿಟನ್-25%, ಅಮೆರಿಕಾ-28%, ಇಸ್ರೇಲ್-32%, .... (ಅದೇ ಪುಸ್ತಕದ ಪುಟ 5ರಲ್ಲಿ)

ಇವೆಲ್ಲವೂ ಅಧಿಕೃತವಾಗಿ ವರದಿಯಾದ ಮನೆಯೊಳಗಿನ ದೌರ್ಜನ್ಯದ ಅಂಕಿಅಂಶಗಳಾಗಿವೆ. ಅಂದರೆ ಸ್ವಂತ ಮನೆಯೊಳಗೆ ನಡೆದ ದೌರ್ಜನ್ಯದ ಅಂಕಿಅಂಶಗಳು! ದಾಖಲಾಗದ ದೌರ್ಜನ್ಯಗಳನ್ನು ಸೇರಿಸಿದರೆ ಶೇಕಡಾವಾರು ಅಂಶ ಇನ್ನಷ್ಟು ವರ್ಧಿಸಬಹುದು.

ಇನ್ನು ಮನೆಯ ಹೊರಗೆ ಆಕೆ ಅನುಭವಿಸುವ ಯಾತನೆಯನ್ನೂ ಸೇರಿಸಿದರೆ ಒಟ್ಟಾರೆ ಜಗತ್ತಿನಲ್ಲಿ ಆಕೆಯ ಬದುಕಿನ ಯಾತನೆಯ ಚಿತ್ರಣವನ್ನು ನಮಗೆ ಊಹಿಸಿಕೊಳ್ಳಬಹುದು. ಇಂಡಿಯಾದಲ್ಲಿ 2008ರಲ್ಲಿ ಮಹಿಳೆಯರ ವಿರುದ್ಧ ದೌರ್ಜನ್ಯ ನಡೆದ 1,95,856 ಅಪರಾಧಗಳು ದಾಖಲಾಗಿವೆ ಎಂದು National crime records bearue ತಿಳಿಸುತ್ತದೆ.

ಈ ಹಿನ್ನೆಲೆಯನ್ನಿಟ್ಟು ನೋಡುವಾಗ ಪವಿತ್ರ ಕುರ್‌ಆನ್‌ನಲ್ಲಿ ಇಸ್ಲಾಮೀ ವಿಮರ್ಶಕರಿಂದ ಟೀಕೆಗೊಳಗಾದ ಪ್ರಸ್ತುತ ಸೂಕ್ತದ ವಿಶಾಲವಾದ ಅರ್ಥ ನಮಗೆ ಮನವರಿಕೆಯಾಗುತ್ತದೆ. ಪುರುಷನು ತನ್ನ ದೈಹಿಕ ಶಕ್ತಿಯನ್ನು ಮಹಿಳೆಯರ ಮೇಲೆ ದೌರ್ಜನ್ಯ ಹಿಂಸೆ ನೀಡುವ ಬದಲು ಆಕೆಗೆ ಸೂಕ್ತ ಸಂರಕ್ಷಣೆಯನ್ನು ನೀಡಿ ಗೌರವಯುತ ಜೀವನ ನಡೆಸಲು ಅವಕಾಶವನ್ನುಂಟು ಮಾಡಿಕೊಡಬೇಕೆಂದಲ್ಲವೇ ಆ ಸೂಕ್ತ ವಿವರಿಸುತ್ತಿರುವುದು?

ಮಹಿಳೆಯರನ್ನು ಹಿಂಸಿಸದೆ ಆಕೆಯ ಸಂರಕ್ಷಕನಾಗಿ ತನ್ನ ಸಾಮಾಜಿಕ ಕರ್ತವ್ಯವನ್ನು ನಿರ್ವಹಿಸಬೇಕೆಂದು ಪುರುಷನೊಡನೆ ಸಾರಿದ ಸಾರ್ವಕಾಲಿಕ ಮತ್ತು ಉದಾತ್ತವಾದ ಈ ಕುರ್‌ಆನ್ ಸೂಕ್ತವನ್ನು ಟೀಕಾಕಾರರು ಎಷ್ಟೊಂದು ಕೀಳು ಮಟ್ಟದಲ್ಲಿ ದುರ್ವ್ಯಾಖ್ಯಾನಗೊಳಿಸಿದ್ದಾರೆ ಎಂಬುದನ್ನು ಯೋಚಿಸಿ ನೋಡಿ.

ಸಂರಕ್ಷಣೆಯ ವಿಚಾರದಲ್ಲಿ ಮಹಿಳೆಯು ಸ್ವಾಲಂಬಿಯಾಗಲು ನಡೆಸುವ ಪ್ರಯತ್ನವನ್ನು ಇಸ್ಲಾಮ್ ನಿರಾಕರಿಸುತ್ತಿಲ್ಲ. ಕೆಲವೊಂದೆಡೆ ಅದು ಸಾಧ್ಯವಾಗಲೂಬಹುದು. ಆದರೆ ಅದು ಸಂಪೂರ್ಣವಾಗಿ ಮಹಿಳೆಯರಿಗೆ ಸಾಧ್ಯವಲ್ಲ ಎಂಬ ವಾಸ್ತವಿಕತೆಯನ್ನು ಅರಿತ ಇಸ್ಲಾಮ್ ಅದರ ಹೊಣೆಗಾರಿಕೆಯನ್ನು ಪುರುಷನಿಗೆ ನೀಡಿತು. ಇದು ಆತನಿಗೆ ನೀಡಿದ ಅಧಿಕಾರ ಎಂಬುದಕ್ಕಿಂತ ಹೊಣೆಗಾರಿಕೆ ಎಂದು ತಿಳಿಯಬೇಕಾಗುತ್ತದೆ. ಅಲ್ಲದಿದ್ದರೂ ಮಹಿಳೆಯ ರಕ್ಷಣೆಯ ಹೊಣೆಗಾರಿಕೆಯನ್ನು ಇಸ್ಲಾಮಿನ ಟೀಕಾಕಾರರು ಕೂಡ ಸ್ವಯಂ ವಹಿಸಿಕೊಂಡಿದ್ದಾರೆ ಅನ್ನುವುದು ವಾಸ್ತವವಲ್ಲವೇ?

*ಸಂರಕ್ಷಣೆಯ ವಿಚಾರದಲ್ಲಿ ಮಹಿಳೆಯು ಸ್ವಾಲಂಬಿಯಾಗಲು ನಡೆಸುವ ಪ್ರಯತ್ನವನ್ನು ಇಸ್ಲಾಮ್ ನಿರಾಕರಿಸುತ್ತಿಲ್ಲ. ಕೆಲವೊಂದೆಡೆ ಅದು ಸಾಧ್ಯವಾಗಲೂಬಹುದು. ಆದರೆ ಅದು ಸಂಪೂರ್ಣವಾಗಿ ಮಹಿಳೆಯರಿಗೆ ಸಾಧ್ಯವಲ್ಲ ಎಂಬ ವಾಸ್ತವಿಕತೆಯನ್ನು ಅರಿತ ಇಸ್ಲಾಮ್ ಅದರ ಹೊಣೆಗಾರಿಕೆಯನ್ನು ಪುರುಷನಿಗೆ ನೀಡಿತು. ಇದು ಆತನಿಗೆ ನೀಡಿದ ಅಧಿಕಾರ ಎಂಬುದಕ್ಕಿಂತ ಹೊಣೆಗಾರಿಕೆ ಎಂದು ತಿಳಿಯಬೇಕಾಗುತ್ತದೆ. ಅಲ್ಲದಿದ್ದರೂ ಮಹಿಳೆಯ ರಕ್ಷಣೆಯ ಹೊಣೆಗಾರಿಕೆಯನ್ನು ಇಸ್ಲಾಮಿನ ಟೀಕಾಕಾರರು ಕೂಡ ಸ್ವಯಂ ವಹಿಸಿಕೊಂಡಿದ್ದಾರೆ ಅನ್ನುವುದು ವಾಸ್ತವವಲ್ಲವೇ?*

ವರ್ತಮಾನದಲ್ಲೂ ಕೂಡ ಆಕೆಯ ಮೇಲಿನ ದೌರ್ಜನ್ಯವು ಎಲ್ಲೆ ಮೀರುತ್ತಿರುವುದನ್ನು ಅಂಕಿಅಂಶಗಳ ಮೂಲಕ ನಾವು ಅರಿತೆವು. ಆದುದರಿಂದಲೇ ಮಹಿಳೆಯರನ್ನು ಸಬಲೀಕರಣಗೊಳಿಸುವುದರೊಂದಿಗೆ ಪುರುಷನನ್ನು ಸಂಸ್ಕರಿಸಿ ಸ್ತ್ರೀಸಂರಕ್ಷಕನನ್ನಾಗಿ ಮಾರ್ಪಡಿಸುವುದೇ ಪರಿಣಾಮಕಾರಿಯಾದ ಪರಿಹಾರವೆಂದು ಕುರ್‌ಆನ್ ಸೂಚಿಸಿತು.

ಆದುದರಿಂದಲೇ ''ಅಲ್ಲಾಹನು ಕೆಲವರಿಗೆ ಕೆಲವರ ಮೇಲೆ ಶ್ರೇಷ್ಠತೆ ಪ್ರದಾನ ಮಾಡಿದುದರಿಂದ'' ಎಂಬ ಕುರ್‌ಆನಿನ ಪರಾಮರ್ಶೆ ಗಮನಾರ್ಹವಾಗಿದೆ. ಮಾನವನ ಎಲ್ಲ ಸಾಮರ್ಥ್ಯಗಳೂ ಅಲ್ಲಾಹನ ಔದಾರ್ಯವಾಗಿದೆ. ಅದು ಎಲ್ಲರಿಗೂ ಒಂದೇ ರೀತಿಯಲ್ಲಿ ಅಲ್ಲಾಹನು ನೀಡಲಿಲ್ಲ. ಪುರುಷರ ಮಧ್ಯೆ ಭಿನ್ನ ಸಾಮರ್ಥ್ಯವಿರುವಂತೆ, ಮಹಿಳೆಯರ ಮಧ್ಯೆಯೂ ಭಿನ್ನ ಸಾಮರ್ಥ್ಯವಿರುವರಿದ್ದಾರೆ. ಪುರುಷನು ದೈಹಿಕವಾಗಿ, ಮಾನಸಿಕವಾಗಿ ಬಲಿಷ್ಠನಾಗಿರುತ್ತಾನೆ. ಇದನ್ನು ದುರುಪಯೋಗಪಡಿಸಿದ ಪುರುಷನು ಆಯಾ ಕಾಲದಲ್ಲಿ ಮಹಿಳೆಯರನ್ನು ಶೋಷಿಸಿದ್ದಾನೆ. ಆದುದರಿಂದ ಆತ ತನ್ನ ಶಕ್ತಿಯನ್ನು ಮಹಿಳೆಯರ ವಿರುದ್ಧವಾಗಿ ಉಪಯೋಗಿಸದೆ ಆಕೆಯ ಸಂರಕ್ಷಣೆ, ಮೇಲ್ನೋಟಕ್ಕಾಗಿ ಉಪಯೋಗಿಸಬೇಕೆಂದಷ್ಟೇ ಕುರ್‌ಆನ್ ಉಪದೇಶಿಸುತ್ತಿರುವುದು. 'ಖವ್ವಾಮೂನ' ಎಂಬ ಪದದ ಮೂಲಕ ಕುರ್‌ಆನ್ ಈ ರೀತಿಯ ಮಾರ್ಗದರ್ಶನವನ್ನು ಪುರುಷರಿಗೆ ನೀಡುತ್ತಿದೆ.

ಇಲ್ಲಿ ಎಲ್ಲಾದರೂ ಮಹಿಳೆಯ ಸ್ವಾತಂತ್ರ್ಯ ಹನನವಾಗಲೀ, ಆಕೆಯನ್ನು ಗುಲಾಮಳಂತೆ ನಡೆಸಿಕೊಳ್ಳುವುದಾಗಲೀ ಇದೆಯೇ? ಇಸ್ಲಾಮಿನಲ್ಲಿ ಸ್ತ್ರೀಪುರುಷ ಸಂಬಂಧಗಳಲ್ಲಿ ದಾಸ್ಯತನವಾಗಲೀ, ಪುರುಷ ಪ್ರಧಾನವಾಗಲೀ ಇಲ್ಲವೇ ಇಲ್ಲ. ಅಲ್ಲಿರುವುದು ಪರಸ್ಪರ ಪ್ರೀತಿ, ನ್ಯಾಯ, ನೀತಿ, ಸಂರಕ್ಷಣೆ ಮಾತ್ರ.

**''ಪುರುಷರಿಗೆ ಸ್ತ್ರೀಯರ ಮೇಲೆ ಹಕ್ಕಿರುವಂತೆ ಸ್ತ್ರೀಯರಿಗೂ ಪುರುಷರ ಮೇಲೆ ನ್ಯಾಯೋಚಿತ ಹಕ್ಕಿದೆ.- (ಅಲ್‌ಬಖರ:228)**

**''ನಾನು ನಿಮ್ಮಲ್ಲಿ ಯಾರೊಬ್ಬನ ಕರ್ಮವನ್ನೂ ನಿಷ್ಫಲಗೊಳಿಸುವವನಲ್ಲ. ಪುರುಷರಾಗಲಿ, ಸ್ತ್ರೀಯರಾಗಲೀ ನೀವೆಲ್ಲಾ ಒಂದೇ ವರ್ಗದವರು - (3:195)**

**''ಓ ಜನರೇ, ನೀವು ನಿಮ್ಮ ಪಾಲಕ ಪ್ರಭುವನ್ನು ಭಯಪಡಿರಿ. ಅವನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು. ಅದೇ ಜೀವದಿಂದ ಅದರ ಜೋಡಿಯನ್ನುಂಟು ಮಾಡಿದನು ಮತ್ತು ಅವೆರಡರಿಂದ ಅನೇಕಾನೇಕ ಸ್ತ್ರೀಪುರುಷರನ್ನು ಲೋಕದಲ್ಲಿ ಹಬ್ಬಿಸಿದನು. -(4:1)**

**''ನೀವು ಅವರೊಂದಿಗೆ (ಪತ್ನಿಯೊಂದಿಗೆ)ಉತ್ತಮ ಜೀವನ ನಡೆಸಿರಿ''- (4:19)**

**''ನಿಮ್ಮನ್ನು ಒಂದು ವ್ಯಕ್ತಿಯಿಂದ ಸೃಷ್ಟಿಸಿದವನು ಅಲ್ಲಾಹನೇ ಆಗಿರುತ್ತಾನೆ ಮತ್ತು ಅವನು ಅದೇ ವ್ಯಕ್ತಿಯಿಂದ ಅದರ ಜೋಡಿಯನ್ನು ಉಂಟು ಮಾಡಿದನು. (ಇದು) ಅವಳಿಂದ ಮನಶ್ಶಾಂತಿ ಪಡೆಯಲಿಕ್ಕಾಗಿ -(7:189)**

ಲೋಕಪ್ರವಾದಿ ಮುಹಮ್ಮದ್(ಸ) ಕಲಿಸಿದ ಪಾಠಗಳಿಂದ ಕೆಲವು:

**''ಮಹಿಳೆಯರಿಗೆ ಉತ್ತಮರಾದವರು ನಿಮ್ಮಲ್ಲಿ ಉತ್ತಮರು''**

**(ಇಬ್ನು ಮಾಜ)**

**''ಮಹಿಳೆಯರು ಪುರುಷರ ಸಹೋದರಿಗಳಾಗಿರುತ್ತಾರೆ.'' (ಅಬೂದಾವೂದ್)**

**''ತಮ್ಮ ಪತ್ನಿಗೆ ಉತ್ತಮನಾದವನು ನಿಮ್ಮಲ್ಲಿ ಉತ್ತಮನು'' (ತಿರ್ಮಿದಿ)**

**''ಉತ್ತಮ ಸ್ವಭಾವ ಗುಣವುಳ್ಳವನೂ, ತಮ್ಮ ಪತ್ನಿಯೊಡನೆ ಸೌಮ್ಯವಾಗಿ ವರ್ತಿಸುವನು ಪರಿಪೂರ್ಣ ಸತ್ಯವಿಶ್ವಾಸಿಯಾಗಿರುತ್ತಾನೆ'' (ಹಾಕಿಂ)**

**''ಓರ್ವ ಸತ್ಯವಿಶ್ವಾಸಿ ಓರ್ವ ಸತ್ಯವಿಶ್ವಾಸಿನಿಯೊಡನೆ ಬೇಸರ ಪಡಬಾರದು. ಆಕೆಯ ಒಂದು ಸ್ವಭಾವ ಇಷ್ಟವಾಗದಿದ್ದರೂ ಸಂತೃಪ್ತಗೊಳಿಸುವ ಇನ್ನೊಂದು ಸ್ವಭಾವ ಆಕೆಯಲ್ಲಿದೆ ತಾನೆ'' (ಮುಸ್ಲಿಮ್, ಅಹ್ಮದ್)**

ಪುರುಷನು ಪುರುಷ ಎಂಬ ಕಾರಣಕ್ಕಾಗಿ ಶ್ರೇಷ್ಠನೆಂದೂ, ಮಹಿಳೆ ಮಹಿಳೆ ಎಂಬ ಕಾರಣಕ್ಕೆ ಕನಿಷ್ಠ ಎಂಬ ಕೆಲವು ಧರ್ಮ ಸಿದ್ಧಾಂತಗಳ ವಿಚಾರವನ್ನು ಇಸ್ಲಾಂ ಎಂದೂ ಒಪ್ಪುವುದಿಲ್ಲ.

ದೇವಭಯ, ಸದಾಚಾರ, ಧರ್ಮನಿಷ್ಠೆ ಮಾತ್ರವೇ ಇಸ್ಲಾಮಿನಲ್ಲಿ ಪುರುಷ ಮತ್ತು ಮಹಿಳೆಯ ಶ್ರೇಷ್ಠತೆಯ ಮಾನದಂಡವಾಗಿ ವರ್ತಿಸುತ್ತದೆ. ಪವಿತ್ರ ಕುರ್‌ಆನ್ ಹೇಳುವುದನ್ನು ಕೇಳಿ:

*ಪುರುಷನು ಪುರುಷ ಎಂಬ ಕಾರಣಕ್ಕಾಗಿ ಶ್ರೇಷ್ಠನೆಂದೂ, ಮಹಿಳೆ ಮಹಿಳೆ ಎಂಬ ಕಾರಣಕ್ಕೆ ಕನಿಷ್ಠ ಎಂಬ ಕೆಲವು ಧರ್ಮ ಸಿದ್ಧಾಂತಗಳ ವಿಚಾರವನ್ನು ಇಸ್ಲಾಂ ಎಂದೂ ಒಪ್ಪುವುದಿಲ್ಲ.*

*ದೇವಭಯ, ಸದಾಚಾರ, ಧರ್ಮನಿಷ್ಠೆ ಮಾತ್ರವೇ ಇಸ್ಲಾಮಿನಲ್ಲಿ ಪುರುಷ ಮತ್ತು ಮಹಿಳೆಯ ಶ್ರೇಷ್ಠತೆಯ ಮಾನದಂಡವಾಗಿ ವರ್ತಿಸುತ್ತದೆ.*

**''ಪುರುಷನಾಗಿರಲಿ, ಸ್ತ್ರೀ ಆಗಿರಲಿ ಯಾರು ಸತ್ಕರ್ಮವೆಸಗುವರೋ ಅವರು ಸತ್ಯವಿಶ್ವಾಸಿಯಾಗಿದ್ದರೆ ಅವರಿಗೆ ನಾವು ಇಹಲೋಕದಲ್ಲಿ ಪರಿಶುದ್ಧ ಜೀವನವನ್ನು ದಯಪಾಲಿಸುವೆವು ಮತ್ತು ಇಂತಹವರಿಗೆ (ಪರಲೋಕದಲ್ಲಿ) ಅವರ ಅತ್ಯುತ್ತಮ ಕರ್ಮಗಳಿಗನುಸಾರ ಪ್ರತಿಫಲ ನೀಡುವೆವು.''-(16:97)**

ಭೂಮಿಯ ಮೇಲೆ ಜೀವಿಸುವ ವೇಳೆ ಸದಾಚಾರ, ಸತ್ಕರ್ಮಗಳನ್ನು ನಡೆಸಿದರೆ ಇಹಲೋಕದಲ್ಲಿ ಒಳ್ಳೆಯ ಜೀವನವನ್ನು ದಯಪಾಲಿಸುತ್ತೇನೆಂದೂ ಪರಲೋಕದಲ್ಲಿ ಪ್ರತ್ಯೇಕ ಪ್ರತಿಫಲವನ್ನು ನೀಡುತ್ತೇನೆಂದೂ ಹೇಳಿದ ಅಲ್ಲಾಹನು ಉತ್ತಮ ಜೀವನವನ್ನು ನಡೆಸಿ ಭೂಮಿಯ ಮೇಲೆ ನೆಮ್ಮದಿಯ ಬದುಕನ್ನು ನಡೆಸಲು ಪ್ರಚೋದನೆಯನ್ನು ನೀಡುತ್ತಿದಾನೆ.

ಲಿಂಗಭೇದವಿಲ್ಲದೇ ಕರ್ಮಗಳಿಗನುಸಾರವಾಗಿ ಪ್ರತಿಫಲವನ್ನು ನೀಡುತ್ತೇನೆಂದಲ್ಲವೇ ಅಲ್ಲಾಹನು ಘೋಷಿಸುತ್ತಿರುವುದು? ಮತ್ತೆಲ್ಲಿದೆ ಇಸ್ಲಾಮಿನಲ್ಲಿ ಸ್ತ್ರೀ ಪುರುಷ ತಾರತಮ್ಯ?

**''ಖಂಡಿತವಾಗಿಯೂ ಮುಸ್ಲಿಮರೂ, ಸತ್ಯವಿಶ್ವಾಸಿಗಳೂ, ಆಜ್ಞಾಪಾಲಕರೂ ಸತ್ಯಸಂಧರೂ, ಸಹನಶೀಲರೂ, ವಿನಮ್ರರೂ, ದಾನಶೀಲರೂ, ಉಪವಾಸ ವ್ರತವನ್ನಾಚರಿಸುವವರೂ, ತಮ್ಮ ಗುಪ್ತಾಂಗಗಳ ರಕ್ಷಣೆ ಮಾಡಿಕೊಳ್ಳುವವರೂ, ಅಲ್ಲಾಹನನ್ನು ಅತ್ಯಧಿಕವಾಗಿ ಸ್ಮರಿಸುವವರೂ ಆದ ಎಲ್ಲಾ ಪುರುಷರು ಮತ್ತು ಸ್ತ್ರೀಯರಿಗೆ ಅಲ್ಲಾಹನು ಕ್ಷಮೆ ಮತ್ತು ಅತಿದೊಡ್ಡ ಸತ್ಫಲವನ್ನು ಸಿದ್ಧಗೊಳಿಸಿಟ್ಟಿದ್ದಾನೆ.''- (33:35)**

**''ಉತ್ತರವಾಗಿ ಅವನ ಪ್ರಭು ಹೇಳಿದನು ''ನಾನು ನಿಮ್ಮಲ್ಲಿ ಯಾರ ಕರ್ಮವನ್ನೂ ನಿಷ್ಫಲಗೊಳಿಸುವವನಲ್ಲ. ಪುರುಷನಾಗಲಿ ಸ್ತ್ರೀಯರಾಗಲಿ ನೀವೆಲ್ಲ ಒಂದೇ ವರ್ಗದವರು. ಆದುದರಿಂದ ಯಾರು ನನಗಾಗಿ ತಮ್ಮ ದೇಶ ತ್ಯಾಗ ಮಾಡಿದರೋ, ನನ್ನ ಮಾರ್ಗದಲ್ಲಿ ಮನೆಮಾರುಗಳಿಂದ ಹೊರಕ್ಕಟ್ಟಲ್ಪಟ್ಟರೋ, ಸತಾಯಿಸಲ್ಪಟ್ಟರೋ, ನನಗಾಗಿ ಹೋರಾಟ ನಡೆಸಿದರೋ ಮತ್ತು ವಧಿಸಲ್ಪಟ್ಟರೋ, ಅವರೆಲ್ಲರ ಅಪರಾಧಗಳನ್ನು ನಾನು ಕ್ಷಮಿಸಿ ಬಿಡುವೆನು. ಮತ್ತು ಅವರಿಗೆ ತಳಭಾದಲ್ಲಿ ಕಾಲುವೆಗಳು ಹರಿಯುತ್ತಿರುವ ಉದ್ಯಾನಗಳಲ್ಲಿ ಪ್ರವೇಶ ಕೊಡುವೆನು. ಇದು ಅವರಿಗೆ ಅಲ್ಲಾಹನ ಬಳಿ ಇರುವ ಪ್ರತಿಫಲಗಳಾಗಿವೆ. ಅತ್ಯುತ್ತಮ ಪ್ರತಿಫಲ ಅಲ್ಲಾಹನ ಬಳಿಯಲ್ಲೇ ಇದೆ. -(3:195)**

ಆದುದರಿಂದ ವರ್ಗ, ವರ್ಣ, ಲಿಂಗಭೇದವಿಲ್ಲದೇ ಸೃಷ್ಟಿಕರ್ತನಾದ ಅಲ್ಲಾಹನ ತೃಪ್ತಿಗಾಗಿ ಸತ್ಕರ್ಮವೆಸಗುವ ಯಾವುದೇ ವ್ಯಕ್ತಿಯ ದುಡಿಮೆಯನ್ನು ಅಲ್ಲಾಹನು ನಿಷ್ಫಲಗೊಳಿಸಲಾರನೆಂಬ ದೃಢ ವಿಶ್ವಾಸವಿರುವ ಮುಸ್ಲಿಮರು ಅದನ್ನೊಂದು ಜೀವನ ಧ್ಯೇಯವೆಂಬಂತೆ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ.

ಮತ್ತು ಇಹದಲ್ಲಿ ದುಡಿದ ದುಡಿಮೆಗೆ ನ್ಯಾಯೋಚಿತವಾದ ನೂರ್ಮಡಿ ಪ್ರತಿಫಲವು ಪರಲೋಕದಲ್ಲಿ ತಮ್ಮನ್ನು ಕಾದಿದೆ ಎಂಬ ದೃಢವಿಶ್ವಾಸವೇ ಪ್ರತಿಯೋರ್ವ ಮುಸ್ಲಿಮ್ ಗಂಡು ಹೆಣ್ಣಿನ ಸತ್ಕರ್ಮಗಳಿಗಿರುವ ಅತ್ಯಂತ ಮುಖ್ಯ ಪ್ರಚೋದನೆ ಎಂದು ತಿಳಿಯಬೇಕು. ಅಲ್ಲಾಹನ ಆಜ್ಞಾನುವರ್ತಿಗಳಾಗಿ ಜೀವಿಸಲು ಅವನು ಕರುಣಿಸಲಿ.

# ಸಾರ್ವಜನಿಕರಿಗೆ ಸರಕಾರದ ಸೌಲಭ್ಯದ ಬಗ್ಗೆ ಮಾಹಿತಿ



ಅಬ್ದುಲ್ ಮಜೀದ್ ಖಾನ್ (ನ್ಯಾಯವಾದಿ)
majidkhan_aryan@yahoo.com

**ವೃದ್ಧರು, ಅಂಗವಿಕಲರು, ಗರ್ಭಿಣಿ ಮಹಿಳೆ, ಬೆಂಕಿ ಅನಾಹುತ, ನೆರೆ ಹಾವಳಿ, ಸಿಡಿಲು ಬಡಿತ, ಅತಿವೃಷ್ಟಿ ಮುಂತಾದವುಗಳಿಂದಾಗಿ ಹಾನಿಗೊಳಗಾದವರು, ಆಕಸ್ಮಿಕವಾಗಿ ಮೃತನಾದ ಬಡ ವ್ಯಕ್ತಿಯ ಕುಟುಂಬದವರು ಮುಂತಾದವರಿಗಾಗಿ ಕರ್ನಾಟಕ ಸರಕಾರವು ಹಲವಾರು ಯೋಜನೆಗಳಡಿಯಲ್ಲಿ ಅನೇಕ ಸೌಲಭ್ಯಗಳನ್ನು ಕೊಡಮಾಡಿದೆ.**

**1.ವೃದ್ಧಾಪ್ಯ ವೇತನ**

65 ವರ್ಷ ವಯಸ್ಸಾದ, ನಿರ್ಗತಿಕ ಹಾಗೂ ಗಂಡು ಮಕ್ಕಳು ಇಲ್ಲದ ವೃದ್ಧನು ಪ್ರತಿ ತಿಂಗಳು ಐನೂರು ರೂಪಾಯಿಗಳ ಮಾಶಾಸನ ಪಡೆಯುವ ಹಕ್ಕುಳ್ಳವನಾಗಿರುತ್ತಾನೆ.

ಆತನು ಮೂರು ವರ್ಷಗಳ ವರೆಗೆ ಕರ್ನಾಟಕದ ಒಂದೇ ಸ್ಥಳದಲ್ಲಿ ವಾಸ ಮಾಡಿರಬೇಕು. ಅರ್ಜಿಯನ್ನು ತಹಶೀಲ್ದಾರ್‌ರಿಗೆ ನಮೂನೆ ಓ.ಎ.ಪಿ. 1ರಲ್ಲಿ ಸಲ್ಲಿಸತಕ್ಕದ್ದು. ಅದರೊಂದಿಗೆ ಈ ದಾಖಲೆಗಳನ್ನು ಸಲ್ಲಿಸಬೇಕು.

1. ವಯಸ್ಸಿನ ಸಂಬಂಧ ಜನನ ಪ್ರಮಾಣ ಪತ್ರ ಇಲ್ಲವೆ ವೈದ್ಯಾಧಿಕಾರಿಯವರಿಂದ ಪಡೆದ ವಯಸ್ಸಿನ ಪ್ರಮಾಣ ಪತ್ರ.

2. ತನ್ನ ಪಾಸ್‌ಪೋರ್ಟ್ ಅಳತೆಯ ಅರು ಫೋಟೋಗಳು.

3. ಕುಟುಂಬ ಪಡಿತರ ಚೀಟಿ (ರೇಶನ್ ಕಾರ್ಡ್)ಯ ಪ್ರತಿ ಇಲ್ಲವೆ ಮತದಾರರ ಪಟ್ಟಿಯ ಪ್ರತಿ.

**2. ವಿಧವಾ ವೇತನ**

ನಿರ್ಗತಿಕ ವಿಧವೆಯು ಪ್ರತಿ ತಿಂಗಳು ಐನೂರು ರೂಪಾಯಿಗಳ ವೇತನ ಪಡೆಯುವುದಕ್ಕೆ ಹಕ್ಕುಳ್ಳವಳಾಗಿರುತ್ತಾಳೆ. ಆಕೆಯು ಕರ್ನಾಟಕದ ಒಂದೇ ಸ್ಥಳದಲ್ಲಿ ಕನಿಷ್ಠ 3 ವರ್ಷಗಳ ವರೆಗೆ ವಾಸ ಮಾಡಿರಬೇಕು ಮತ್ತು ಆಕೆಗೆ 18 ವರ್ಷದ ಗಂಡು ಮಕ್ಕಳು ಇರಬಾರದು. ಇದರೊಂದಿಗೆ-

1. ತನ್ನ ಗಂಡನು ಮೃತನಾದ ಬಗ್ಗೆ ಮರಣ ಪ್ರಮಾಣ ಪತ್ರ:

2. ಕುಟುಂಬ ಪಡಿತರ ಚೀಟಿ (ರೇಶನ್ ಕಾರ್ಡ್)ಯ ಪ್ರತಿ, ಇಲ್ಲವೇ ಮತದಾರರ ಪ್ರತಿ

3.ಪಾಸ್‌ಪೋರ್ಟ್ ಅಳತೆಯ ತನ್ನ ಆರು ಫೋಟೋ

ಇವುಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ತಹಶೀಲ್ದಾರ್‌ರಿಗೆ ಸಲ್ಲಿಸಬೇಕು.

ತನಗೆ ಅಲ್ಪವಯಿ ಗಂಡು ಮಕ್ಕಳು (ಅಂದರೆ 18ವರ್ಷದ ಒಳಗೆ) ಇದ್ದರೆ ಅವರ ಹೆಸರು, ವಯಸ್ಸು ಮುಂತಾದ ವಿವರಗಳನ್ನು ಅರ್ಜಿಯಲ್ಲಿ ತಿಳಿಸಿರಬೇಕು. ಹಿರಿಯ ಮಗನಿಗೆ 18 ವರ್ಷ ತುಂಬುವವರೆಗೆ ಮಾತ್ರ ವಿಧವೆಯು ವಿಧವಾ ವೇತನ ಪಡೆಯಲು ಅರ್ಹಳಾಗಿರುತ್ತಾಳೆ.

**3. ಅಂಗವಿಕಲ ವೇತನ**

ಅಂಗವಿಕಲತೆ ಹೊಂದಿದವರೆಂದರೆ

ಕೈ ಅಥವಾ ಕಾಲು ಇಲ್ಲದೆ ಶೇಕಡಾ 50ರಷ್ಟು ಅಂಗವಿಕಲತೆಯನ್ನು ಹೊಂದಿದವರು, ಎರಡೂ ಕಣ್ಣು ಇಲ್ಲದ ಕುರುಡರು, ಬುದ್ಧಿಮಾಂದ್ಯರು- ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿರುವರು, ಕುಷ್ಟ ರೋಗದಿಂದ ಬಳಲುತ್ತಿರುವರು, ಎರಡೂ ಕಿವಿ ಕೇಳಿಸದವರು ಹಾಗೂ ಮೂಕ ವ್ಯಕ್ತಿಗಳು.

ಇಂತಹ ಅಂಗವಿಕಲ ವ್ಯಕ್ತಿಯು ಪ್ರತಿ ತಿಂಗಳು 500 ರೂಪಾಯಿಗಳ ವೇತನ ಪಡೆಯಲು ಹಕ್ಕುಳ್ಳವರಾಗಿರುತ್ತಾನೆ.

ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ತಹಶೀಲ್ದಾರ್‌ರಿಗೆ

ಸಲ್ಲಿಸಬೇಕು;

ಅರ್ಹತೆಗಳು:

ಅರ್ಜಿದಾರ- ಅಂಗವಿಕಲನು ಕನಿಷ್ಠ ಮೂರು ವರ್ಷಗಳ ವರೆಗೆ ಕರ್ನಾಟಕದಲ್ಲಿ ಒಂದೇ ಸ್ಥಳದಲ್ಲಿ ವಾಸವಾಗಿರಬೇಕು.

ಮೇಲೆ ವಿವರಿಸಿದ ಅಂಗವಿಕಲತೆಗಳಲ್ಲಿ ಯಾವುದಾದರೊಂದನ್ನು ಹೊಂದಿರಬೇಕು.

ಆತನ ವಾರ್ಷಿಕ ಆದಾಯವು ರೂ.6,000ಗಳಿಗೆ ಮೀರಿರಬಾರದು.

ಆತನು ಅಲ್ಪವಯಿಯಾಗಿದ್ದರೆ ಅವನ ಪಾಲಕರು ಅರ್ಜಿಸಲ್ಲಿಸಬಹುದು. ಈ ಅರ್ಜಿಯಲ್ಲಿ ಅಂಗವಿಕಲತೆಯ ಬಗ್ಗೆ ವೈದ್ಯಾಧಿಕಾರಿಯವರ ಪ್ರಮಾಣಪತ್ರ, ರೇಶನ್ ಕಾರ್ಡ್ ಪ್ರತಿ ಅಥವಾ ಮತದಾರರ ಪಟ್ಟಿಯ ಪ್ರತಿ, ಆರು ಪಾಸ್‌ಪೋರ್ಟ್ ಪ್ರತಿಯ ಫೋಟೋಗಳನ್ನು ಲಗ್ಗತ್ತಿಸಬೇಕು.

**4.ಹೆರಿಗೆ ಭತ್ತೆ**

19 ವರ್ಷಗಳಿಗಿಂತ ಹೆಚ್ಚಿನ ವಯಸ್ಸಾದ ಹಾಗೂ ವಾರ್ಷಿಕ ಆದಾಯ ರೂ. 11,500ಗಳಿಗಿಂತ ಕಡಿಮೆ ಇರುವ ಮಹಿಳೆಗೆ ಇಬ್ಬರು ಜೀವಂತ ಮಕ್ಕಳ ಹೆರಿಗೆಯ ಸಂಬಂಧವಾಗಿ ಪ್ರತಿ ಹೆರಿಗೆಗೆ ರೂ. 500 ಹೆರಿಗೆ ಭತ್ತೆ ನೀಡಲಾಗುತ್ತದೆ. 2 ಮಕ್ಕಳು ಜೀವಂತವಿದ್ದು 3ನೆ ಹೆರಿಗೆಗೆ ಈ ಸೌಲಭ್ಯ ಇರುವುದಿಲ್ಲ. ಈ ಸೌಲಭ್ಯವನ್ನು ಪಡೆಯ ಬಯಸುವ ಮಹಿಳೆಯು ತನ್ನ ಸಮೀಪದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆರಿಗೆಯ ಮೊದಲು ಹೆಸರು ನೋಂದಾಯಿಸುವುದು ಮತ್ತು ನಿಗದಿತ ನಮೂನೆ ಎಮ್.ಬಿ-1 ಇದರಲ್ಲಿ ಗರ್ಭಿಣಿಯಾದ 6 ತಿಂಗಳ ಒಳಗಾಗಿ ಅಂಗನವಾಡಿ ಕಾರ್ಯಕರ್ತೆ ಅಥವಾ ಹಿರಿಯ ಯಾ ಕಿರಿಯ ಆರೋಗ್ಯ ಸಹಾಯಕ (ಕಿ) ಇವರಲ್ಲಿ ನೀಡುವುದು.

**5. ಪ್ರಾಕೃತಿಕ ವಿಕೋಪಗಳು- ಬೆಂಕಿ ಅನಾಹುತ, ನೆರೆ ಹಾವಳಿ, ಸಿಡಿಲು ಬಡಿತ, ಅತಿವೃಷ್ಟಿ:**

ಬಡತನ ರೇಖೆಯ ಕೆಳಗಡೆ ಇರುವವರು ಈ ಮೇಲೆ ತಿಳಿಸಿದ ಪ್ರಕೃತಿ ವಿಕೋಪಕ್ಕೆ ಒಳಗಾಗಿ ತಮ್ಮ ಮನೆ ಗುಡಿಸಲುಗಳನ್ನು ಕಳೆದುಕೊಂಡಲ್ಲಿ ರೂ. 500 ನಗದು, 1000 ಬೆಲೆಯ ಕಟ್ಟಡ ಸಾಮಗ್ರಿಗಳನ್ನು ಪಡೆಯಬಹುದು. ಮತ್ತು ಪ್ರಾಣಿಗಳ ಜೀವ ಹಾನಿಯಾದಲ್ಲಿ ಮಾರುಕಟ್ಟೆಯ ಅರ್ಧದಷ್ಟು ಬೆಲೆಯನ್ನು ಪರಿಹಾರ ಧನವಾಗಿ, ವ್ಯಕ್ತಿಯ ಜೀವ ಹಾನಿಯಾದಲ್ಲಿ ಒಂದು ಲಕ್ಷ ರೂ. ಪರಿಹಾರವನ್ನು ಪಡೆಯಲು ಅರ್ಹನಾಗಿರುತ್ತಾನೆ. ಈ ಅರ್ಜಿಯನ್ನು ತಹಶೀಲ್ದಾರ್‌ರಿಗೆ ಸಲ್ಲಿಸಬೇಕು ಮತ್ತು ಆತನ ವಾರ್ಷಿಕ ಆದಾಯ ರೂ. 18,000ಕ್ಕಿಂತ ಕಡಿಮೆ ಇರಬೇಕು.

**6.ರಾಷ್ಟ್ರೀಯ ಕುಟುಂಬ ನೆರವು ಯೋಜನೆ**

ಬಡತನ ರೇಖೆಯ ಕೆಳಗೆ ಇರುವ ಬಡ ಕುಟುಂಬಕ್ಕೆ ಆದಾಯ ಮೂಲವಾಗಿರುವ ವ್ಯಕ್ತಿಯೊಬ್ಬ ಮೃತನಾದಲ್ಲಿ ಮತ್ತು ಆತನ ವಯಸ್ಸು 18 ವರ್ಷ ಮೇಲ್ಪಟ್ಟು 65 ವರ್ಷ ಕೆಳಗಿನ ವಯಸ್ಸಿನವನಾಗಿದ್ದು, ಮತ್ತು ವಾರ್ಷಿಕ ಆದಾಯ ರೂ. 11,500ಗಿಂತ ಕಡಿಮೆಯಿದ್ದು, ಆ ಕುಟುಂಬದವರು ತಹಶೀಲ್ದಾರ್‌ರಿಗೆ ಅರ್ಜಿ ಸಲ್ಲಿಸಿದಲ್ಲಿ ಆ ಕುಟುಂಬಕ್ಕೆ ರೂ. 10,000 ಸಹಾಯ ಧನ ಪಡೆಯಬಹುದು. ಇದಕ್ಕೆ ಮೃತನ ಮರಣ ಪ್ರಮಾಣ ಪತ್ರ, ವಯಸ್ಸಿನ ಕುರಿತಾಗಿ ಪತ್ರ, ಕುಟುಂಬದ ವಾರ್ಷಿಕ ಆದಾಯ ಪ್ರಮಾಣ ಪತ್ರ, ವಾರಸುದಾರರ ಪತ್ರದ ಅಗತ್ಯವಿದೆ.

**7. ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳಿಗೆ ಹಾಜರಾತಿ ಶಿಷ್ಯ ವೇತನ**

ಅರ್ಜಿದಾರ ವಿದ್ಯಾರ್ಥಿನಿ 1ನೇ ತರಗತಿಯಿಂದ ಕರ್ನಾಟಕ ಸರಕಾರದ ಮಾನ್ಯತೆ ಪಡೆದಿರುವ, ಕರ್ನಾಟಕದಲ್ಲಿರುವ ವಿದ್ಯಾಸಂಸ್ಥೆಯಲ್ಲಿ ವ್ಯಾಸಂಗ ಮಾಡಿರಬೇಕು.

ಆ ಗ್ರಾಮದಲ್ಲಿ 20,000ಕ್ಕಿಂತ ಕಡಿಮೆ ಜನಸಂಖ್ಯೆ ಇರಬೇಕು.

ಮೊದಲ ಪ್ರಯತ್ನದಲ್ಲಿ ಉತ್ತೀರ್ಣ ಆಗಿರಬೇಕು. ಜಿಲ್ಲಾ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಶಾಲಾ ಮುಖ್ಯೋಪಾಧ್ಯಾಯರ ಮುಖಾಂತರ ಅರ್ಜಿ ಸಲ್ಲಿಸುವುದು.

**8. ಸಾಂತ್ವನ**

ದೌರ್ಜನ್ಯ ಹಾಗೂ ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಕಾನೂನು ಸಹಾಯ ಆಶ್ರಯ ಸ್ವ-ಉದ್ಯೋಗ ಕೈಗೊಳ್ಳಲು ತರಬೇತಿ ನೀಡಿ ಅವರನ್ನು ಸ್ವಾವಲಂಬಿಯಾಗಿ ಮಾಡುವುದು. ಇದಕ್ಕೆ ಬೇಕಾಗಿ ಜಿಲ್ಲಾ ಮಟ್ಟದಲ್ಲಿ ಸ್ವಯಂ ಸೇವಾ ಸಂಸ್ಥೆ ಮತ್ತು ಮಹಿಳಾ ಸಹಾಯವಾಣಿ ಮುಖಾಂತರ ಮೂಲಕ ಇದನ್ನು ಮಾಡುವುದು.

**9. ಸಂಕಷ್ಟ ಪರಿಸ್ಥಿತಿಯಲ್ಲಿರುವ ಮಕ್ಕಳಿಗೆ ಶಿಷ್ಯ ವೇತನ**

ಈ ಯೋಜನೆಯಲ್ಲಿ 1ನೇ ತರಗತಿಯಿಂದ ಪದವಿ ಶಿಕ್ಷಣದ ವರೆಗೆ ವ್ಯಾಸಂಗ ಮಾಡುವ ದೇವದಾಸಿಯರ ಮಕ್ಕಳು, ದೌರ್ಜನ್ಯಕ್ಕೆ ಒಳಗಾದ ಮಹಿಳೆಯರ ಮಕ್ಕಳು, ವೇಶ್ಯೆಯರ ಮಕ್ಕಳು, ಖೈದಿಗಳ ಮಕ್ಕಳು ಮತ್ತು ಕುಡಿತದ ದುಷ್ಚಟಕ್ಕೆ ಒಳಗಾದ ಕುಟುಂಬದ ಮಕ್ಕಳು. ಇವರಿಗೆ ಸರಕಾರದಿಂದ ಮಹಿಳಾ ಮತ್ತು ಮಕ್ಕಳ ಸಹಾಯವನ್ನು ಪಡೆಯಬಹುದು.

**10. ಸ್ತ್ರೀ ಶಕ್ತಿ ಯೋಜನೆ**

ಗ್ರಾಮೀಣ ಪ್ರದೇಶದಲ್ಲಿ ಬಡತನ ರೇಖೆಗಿಂತ ಕೆಳಗಡೆ ವಾಸಿಸುವ ಮಹಿಳೆಯರಲ್ಲಿ, ಅವರ ಆರ್ಥಿಕ ಸ್ಥಿತಿಯನ್ನು ಹೆಚ್ಚಿಸುವುದಕ್ಕೆ ಬೇಕಾಗಿ ವಿವಿಧ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳ ಮುಖಾಂತರ ಸಾಲ ದೊರೆಯುವಂತೆ ಮಹಿಳಾ ಗುಂಪಿನ ಸದಸ್ಯರಿಗೆ ತರಬೇತಿಯನ್ನು ನೀಡಿ ಸಾಮಾಜಿಕ ಬದಲಾವಣೆಯನ್ನು ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸುವುದು.

# ಭೂದಾಹಕ್ಕೆ ಕೊನೆ ಎಂದು?

● ನವಾಝ್ ಅಹ್ಮದ್, ಬಂಟ್ವಾಳ

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಪ್ರಾಕೃತಿಕ ಹಾಗೂ ನೈಸರ್ಗಿಕ ಸಂಪನ್ಮೂಲಗಳ ತಾಣಗಳಾಗಿವೆ. ಇದು ಪ್ರಪಂಚದ 18ನೇ ಪರಿಸರ ಸೂಕ್ಷ್ಮ ಪ್ರದೇಶವೆಂಬುದು ಹಲವರಿಗೆ ತಿಳಿಯದ ವಿಚಾರವಾಗಿದೆ. ನೆರೆಯ ಪಶ್ಚಿಮ ಘಟ್ಟಕ್ಕೂ, ಈ ಕರಾವಳಿ ಪ್ರದೇಶಕ್ಕೂ ಪ್ರಾಕೃತಿಕವಾದ ಸಂಬಂಧವಿದೆ. ಒಂದು ಪ್ರದೇಶದಲ್ಲಿ ಏನಾದರೂ ಏರುಪೇರಾದರೂ ಇನ್ನೊಂದು ಪ್ರದೇಶಕ್ಕೆ ಪರಿಣಾಮ ಉಂಟಾಗುತ್ತದೆ. ಇದಕ್ಕೆ ಉದಾಹರಣೆ ಎಂಬಂತೆ ಕರಾವಳಿಯ ತಟದುದ್ದಕ್ಕೂ ತಲೆ ಎತ್ತುತ್ತಿರುವ ಕಂಪೆನಿಗಳಿಂದ ಉಂಟಾಗುವ ಮಾಲಿನ್ಯದ ಪರಿಣಾಮವಾಗಿ ಪಶ್ಚಿಮ ಘಟ್ಟದಲ್ಲಿದ್ದ ಹಲವಾರು ಜೀವ ಪ್ರಭೇದಗಳು ಕಣ್ಮರೆಯಾಗಿವೆ ಹಾಗೂ ಆಗುತ್ತಿವೆ.

ಇವೆಲ್ಲಕ್ಕಿಂತಲೂ ಮುಖ್ಯವಾಗಿ ರೈತನೂ ತನ್ನ ಅಮೂಲ್ಯವಾದ ಭೂಮಿಯನ್ನು ಕಳೆದುಕೊಳ್ಳಬೇಕಾದ ಅನಿವಾರ್ಯತೆಯಲ್ಲಿದ್ದಾನೆ. ಪ್ರಮುಖವಾಗಿ ಕೆಐಎಡಿಬಿ ಭೂಸ್ವಾಧೀನ ಕಾಯ್ದೆ ಸೆಕ್ಷನ್ 28(1) ರ ಅಡಿಯಲ್ಲಿ ಬೇಕಾಬಿಟ್ಟಿಯಾಗಿ ರೈತರ ಫಲವತ್ತಾದ ಭೂಮಿಯನ್ನು ಸ್ವಾಧೀನಪಡಿಸಿ ಕಂಪೆನಿಗಳ ಸ್ಥಾಪನೆಗೆ ನೀಡಲಾಗುತ್ತಿದೆ. ಖಾಸಗಿ ಕುಳಗಳ ಪರವಾಗಿ ಲಾಬಿ ನಡೆಸುವ ರಾಜಕಾರಣಿಗಳಿಂದಾಗಿ ಇಂದು ಸಾವಿರಾರು ರೈತರು ತಮ್ಮಲ್ಲಿದ್ದ ಅಲ್ಪಸ್ವಲ್ಪ ಭೂಮಿಯನ್ನೂ ಕಳೆದುಕೊಂಡು ಅನಾಥ ಪ್ರಜ್ಞೆಯೊಂದಿಗೆ ಬದುಕುತ್ತಿದ್ದಾರೆ. ಎಸ್‌ಇಝಡ್, ಒಎನ್‌ಜಿಸಿ, ಎಂಆರ್‌ಪಿಎಲ್, ಯುಪಿಸಿಎಲ್, ಇನ್ಫೋಸಿಸ್ ಮತ್ತಿತರ ಬಹುರಾಷ್ಟ್ರೀಯ ಕಂಪೆನಿಗಳು ಅದೆಷ್ಟೋ ಎಕರೆಗಳಷ್ಟು ರೈತರ ಭೂಮಿಗಳನ್ನು ಆಹುತಿ ಪಡೆದರು ಕೂಡಾ ಭೂಸ್ವಾಧೀನದ ದಂಡಯಾತ್ರೆಯು ನಿಲ್ಲುವ ಯಾವುದೇ ಲಕ್ಷಣಗಳು ಗೋಚರಿಸುತ್ತಿಲ್ಲ. ಎಸ್‌ಇಝಡ್ ವಿಚಾರವನ್ನು ತೆಗೆದುಕೊಂಡರೆ ಪ್ರಾರಂಭದಲ್ಲಿ ಇದರ ಕಾರ್ಯಾಚರಣೆಯ ಧಾಟಿಯನ್ನು ಅರಿಯದ



ಮುಗ್ಧ ರೈತರು ತಡವಾಗಿಯಾದರೂ ಎಚ್ಚೆತ್ತುಕೊಂಡು ಅದಕ್ಕೊಂದು ಅಂಕುಶ ಹಾಕಿದ್ದಾರೆ. ಆದರೆ ಅಲ್ಲಿಗೆ ಎಲ್ಲವೂ ಸ್ಥಗಿತಗೊಂಡಿದೆ ಎಂದು ನಂಬಿದರೆ ತಪ್ಪಾದೀತು! ಅವುಗಳು ಮಾರುವೇಷದಲ್ಲಿ ತಮ್ಮ ಕಾರ್ಯಾಚರಣೆಯನ್ನು ಮುಂದುವರಿಸುತ್ತಿವೆ.

ಇಲ್ಲಿ ವಿಪರ್ಯಾಸವೇನೆಂದರೆ, ಭೂಸ್ವಾಧೀನ ಕಾಯ್ದೆಯ ಹೆಸರಿನಲ್ಲಿ ವಶಪಡಿಸಲಾಗಿರುವ ಹಲವಾರು ಎಕರೆ ಭೂಮಿಯು ಇಂದಿಗೂ ಬಳಕೆಯಾಗದೇ ಪಾಳು ಬಿದ್ದಿದೆ! ಆದರೂ ಕೂಡ ಇನ್ನಷ್ಟು ಭೂಮಿಯನ್ನು ವಶಪಡಿಸುವ ಹಿಂದಿರುವ ಹುನ್ನಾರವನ್ನು ಬಯಲಿಗೆಳೆಯಬೇಕಾಗಿದೆ. ಯಾಕೆಂದರೆ ಇದರ ಹಿಂದೆ ಲ್ಯಾಂಡ್ ಮಾಫಿಯಾದ ನೆರಳು ಕಾಣಿಸುತ್ತಿದೆ. ಒಂದು ಕಂಪೆನಿಯ ಹೆಸರಿನಲ್ಲಿ ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ವಶಪಡಿಸಿಕೊಂಡು ಉಳಿದಿರುವ ಭೂಮಿಯನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಬಹುದೆಂಬ

***ಇದಕ್ಕೆ ಸ್ಪಷ್ಟ ನಿದರ್ಶನವೆಂಬಂತೆ ಮುಡಿಪು ಸಮೀಪದ ಇನ್ಫೋಸಿಸ್ ಕಂಪೆನಿಯ ಸುತ್ತಮುತ್ತಲಿನ ಇನ್ನಷ್ಟು ಭೂಮಿಯನ್ನು ಸ್ವಾಧೀನಪಡಿಸಲು ಕೆಐಎಡಿಬಿಯನ್ನು ಮುಂದಿಟ್ಟು ಕೆಲವು ದಲ್ಲಾಳಿಗಳು ಹವಣಿಸುತ್ತಿದ್ದಾರೆ. ಬಂಟ್ವಾಳ ತಾಲೂಕಿನ ಫಜೀರು, ಕೈರಂಗಳ, ಬಾಳೆಪುಣಿ, ಕುರ್ನಾಡು, ಇರಾ ಮೊದಲಾದ ಗ್ರಾಮಗಳಲ್ಲಿ ರೈಥರ ಫಲವತ್ತಾದ ಜಮೀನುಗಳನ್ನು ಕಡಿಮೆ ಬೆಲೆಗೆ ಪಡೆದು (ಬಲವಂತವಾಗಿ) ಬಂಡವಾಳಶಾಹಿಗಳ ಕೈಗೊಪ್ಪಿಸುವ ಕುರಿತಾಗಿ ತೆರೆಮರೆಯ ಕಸರತ್ತು ನಡೆಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಇವೆಲ್ಲಾ ಬೆಳವಣಿಗೆಗಳ ನಡುವೆ ಸ್ಥಳೀಯ ಜನತೆ ಎಚ್ಚೆತ್ತುಕೊಂಡು ಈ ಭೂಸ್ವಾಧೀನ ಪ್ರಕ್ರಿಯೆಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವುದು ಸಂತೋಷಕರ ಸಂಗತಿಯಾಗಿದೆ.***

ಗೂಢಾಲೋಚನೆ ಇದೆ ಎಂಬುದು ಇತ್ತೀಚಿಗಿನ ದಿನಗಳಲ್ಲಿ ಬೆಳಕಿಗೆ ಬರುತ್ತಿರುವ ಅಂಶ.

ಇದಕ್ಕೆ ಸ್ಪಷ್ಟ ನಿದರ್ಶನವೆಂಬಂತೆ ಮುಡಿಪು ಸಮೀಪದ ಇನ್ಫೋಸಿಸ್ ಕಂಪೆನಿಯ ಸುತ್ತಮುತ್ತಲಿನ ಇನ್ನಷ್ಟು ಭೂಮಿಯನ್ನು ಸ್ವಾಧೀನಪಡಿಸಲು ಕೆಐಎಡಿಬಿಯನ್ನು ಮುಂದಿಟ್ಟು ಕೆಲವು ದಲ್ಲಾಳಿಗಳು ಹವಣಿಸುತ್ತಿದ್ದಾರೆ. ಬಂಟ್ವಾಳ ತಾಲೂಕಿನ ಫಜೀರು, ಕೈರಂಗಳ, ಬಾಳೆಪುಣಿ, ಕುರ್ನಾಡು, ಇರಾ ಮೊದಲಾದ ಗ್ರಾಮಗಳಲ್ಲಿ ರೈಥರ ಫಲವತ್ತಾದ ಜಮೀನುಗಳನ್ನು ಕಡಿಮೆ ಬೆಲೆಗೆ ಪಡೆದು (ಬಲವಂತವಾಗಿ) ಬಂಡವಾಳಶಾಹಿಗಳ ಕೈಗೊಪ್ಪಿಸುವ ಕುರಿತಾಗಿ ತೆರೆಮರೆಯ ಕಸರತ್ತು ನಡೆಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಇವೆಲ್ಲಾ ಬೆಳವಣಿಗೆಗಳ ನಡುವೆ ಸ್ಥಳೀಯ ಜನತೆ ಎಚ್ಚೆತ್ತುಕೊಂಡು ಈ ಭೂಸ್ವಾಧೀನ ಪ್ರಕ್ರಿಯೆಗೆ ತೀವ್ರ ವಿರೋಧ ವ್ಯಕ್ತಪಡಿಸುತ್ತಿರುವುದು ಉತ್ತಮ ಬೆಳವಣಿಗೆ.

ಈಗಾಗಲೇ ವಶಪಡಿಸಿಕೊಂಡಿರುವ ಭೂಮಿಯನ್ನು ಬಳಸದೆ ಇನ್ನಷ್ಟು ಭೂ ಒತ್ತುವರಿ ಮಾಡುವ ಬಂಡವಾಳಶಾಹಿ ಮನೋಸ್ಥಿತಿಗೆ ಕಡಿವಾಣ ಹಾಕಬೇಕಾಗಿರುವ ಜನಪ್ರತಿನಿಧಿಗಳೇ ಕೆಐಎಡಿಬಿ (ಕರ್ನಾಟಕ ಕೈಗಾರಿಕ ಪ್ರದೇಶ ಅಭಿವೃದ್ಧಿ ಮಂಡಳಿ)ಯ ಮುಖವಾಡದ ಹಿನ್ನೆಲೆಯಲ್ಲಿ ಬಹು ರಾಷ್ಟ್ರೀಯ ಕಂಪೆನಿಗಳನ್ನೂ ಖುಷಿ ಪಡಿಸುತ್ತಿದ್ದಾರೆ ಹಾಗೂ ತಮ್ಮ ಬೇಳೆಯನ್ನು ಬೇಯಿಸುತ್ತಿದ್ದಾರೆ!

ಸುಮಾರು 200 ಎಕರೆಗಳಷ್ಟು ಭೂಮಿಯನ್ನೂ ಬಂಟ್ವಾಳದ ಕೆಲವು ಗ್ರಾಮೀಣ ಪ್ರದೇಶಗಳಿಂದ (ಬಾಳೇಪುಣಿ, ಕೈರಂಗಳ, ಕುರ್ನಾಡು) ವಶಪಡಿಸಲು ಗ್ರೀನ್ ಸಿಗ್ನಲ್ ದೊರೆತಿದ್ದು, ಈ ಜಮೀನುಗಳೂ ಇನ್ನು ಮುಂದೆ ಯಾವುದಕ್ಕೆ ಹಾಗೂ ಯಾರ ಲಾಭಕ್ಕೆ ಬಳಕೆಯಾಗಲಿವೆ ಎಂಬುದನ್ನು ಕಾದು ನೋಡಬೇಕಾಗಿದೆ.

ಕೆಐಎಡಿಬಿಯು ಸದ್ಯಕ್ಕೆ ಬಹುರಾಷ್ಟ್ರೀಯ ಕಂಪೆನಿಗಳ ಹಾಗೂ ಬಂಡವಾಳಶಾಹಿಗಳ 'ಅಕ್ಷಯ ಪಾತ್ರೆ'ಯಂತೆ ಕಾರ್ಯನಿರ್ವಹಿಸುತ್ತಿದ್ದು, ಅವುಗಳಿಗೆ ಬೇಕಾದ ಹಾಗೆ ಜಮೀನುಗಳನ್ನು ರೈತರ ಕೈಯಿಂದ ಕಸಿದುಕೊಡಲಾಗುತ್ತಿದೆ.

ಹೊಸದಾಗಿ ವಶಪಡಿಸಿಕೊಂಡಿರುವ ಜಮೀನಿನ ಸ್ಪಷ್ಟವಾದ ಅಂಕಿಅಂಶ ಹಾಗೂ ಮಾಹಿತಿಯು ಸ್ವತಃ ಪಾಣೆ ಮಂಗಳೂರು ನಾಡ ಕಚೇರಿಯ ಉಪ ತಹಶೀಲ್ದಾರ್‌ರಿಗೆ ತಿಳಿದಿಲ್ಲ ಎಂದ ಮೇಲೆ ಇನ್ನು ಜನ ಸಾಮಾನ್ಯರಿಗೆ ಯಾವ ರೀತಿಯಾಗಿ ಇವರು ಮಾಹಿತಿ ಒದಗಿಸುತ್ತಾರೆ ಎಂಬುದೇ ಇಲ್ಲಿ ಯಕ್ಷ ಪ್ರಶ್ನೆಯಾಗಿದೆ.

ಅಭಿವೃದ್ಧಿ, ಕೈಗಾರಿಕೆಗಳ ವಿಸ್ತರಣೆಯ ಹೆಸರಿನಲ್ಲಿ ನಡೆಯುತ್ತಿರುವ 'ಭೂ ದಂಧೆ'ಯನ್ನು ಎಲ್ಲರೂ ಸೇರಿ ನಿಲ್ಲಿಸಬೇಕಾದ ಅಗತ್ಯವಿದೆ. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ನಾವು ಸೂರನ್ನೂ ಬಂಡವಾಳಶಾಹಿಗಳ ಪಾದಗಳಿಗೆ ಅರ್ಪಿಸುವ ದುರ್ಗತಿ ಬಂದೊದಗಬಹುದು. ಬಂಡವಾಳಶಾಹಿಗಳ ಪರವಾಗಿ ಸರಕಾರವು ದಲ್ಲಾಳಿಯಾಗಿ ಕಾರ್ಯ ನಿರ್ವಹಿಸುವುದನ್ನು ತಡೆಯುವುದು ಪ್ರಜ್ಞಾವಂತರ ಕರ್ತವ್ಯವಾಗಿದೆ.

## ಯಡ್ಡಿ 'ಹರೋ'ಗ್ರಾಫ್



ಸವಿ ಸವಿ ನೆನಪು ಸಾವಿರ ನೆನಪು
ಮೊದ ಮೊದಲು ಕಂಡ ವಿಧಾನ ಸೌಧದ ನೆನಪು
ಮೊದ ಮೊದಲು ಕಂಡ ಸಿಎಂ ಕುರ್ಚಿಯ ನೆನಪು
ಮೊದ ಮೊದಲು ತೆಗೆದ ಗಣಿಯ ಲಂಚ
ಮೊದ ಮೊದಲು ರೈಡಾದ ಲೋಕಾಯುಕ್ತರ ನೆನಪು
ಕೊನೆ ಕೊನೆಗೆ ಕೊಟ್ಟ ರಾಜೀನಾಮೆಯ ನೆನಪು

ಮುಹಮ್ಮದ್ ರೌಫೀದ್ ಎಸ್.ಎಂ.

# ರಕ್ತದಾನಿಯ
# ಆ ಒಂದೆರಡು ಕಣ್ಣೀರ ಹನಿಗಳು...

**97416 58180**

ಈಗೀಗ ಈ ಮೊಬೈಲ್ ನಂಬರ್‌ನ್ನು ತಮ್ಮ ಸೆಟ್‌ಗಳಲ್ಲಿ ಸೇವ್ ಮಾಡುತ್ತಿರುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. (ಅತಿಶಯೋಕ್ತಿಯ ಮಾತಲ್ಲ)

ಸಾಮಾನ್ಯವಾಗಿ ಪ್ರಮುಖ ಸರ್ಜನ್‌ಗಳು ತಮಗೆ ಬರುವ ಎಲ್ಲ ಕರೆಗಳನ್ನು ಸ್ವೀಕರಿಸುವುದಿಲ್ಲ. ಆದರೆ ನಗರದ ಪ್ರಸಿದ್ಧ ಆಸ್ಪತ್ರೆಯೊಂದರ ಸರ್ಜನ್ ಈ ಮೊಬೈಲ್ ನಂಬರ್‌ನಿಂದ ಯಾವುದೇ ಹೊತ್ತಿಗೆ ಕರೆ ಮಾಡಿದರೂ ಸ್ವೀಕರಿಸುತ್ತಾರೆ. ಹಾಗೆಂದ ಮಾತ್ರಕ್ಕೆ 97416 58180 ಯಾವುದೇ ಪ್ರಮುಖ ರಾಜಕೀಯ ವ್ಯಕ್ತಿಯ ನಂಬರ್ ಅಂತೂ ಅಲ್ಲವೇ ಅಲ್ಲ.

ಇವರಿಗೊಂದು ಕರೆ ಮಾಡಿದರೆ ಸಾಕು, ರೋಗಿಗೆ ತಕ್ಷಣವೇ ರಕ್ತದ ಅವಶ್ಯಕತೆ ಇದ್ದು, ಎಲ್ಲಿಯೂ ಲಭ್ಯವಾಗುತ್ತಿಲ್ಲ ಎಂದಾದರೆ ರಕ್ತದ ವ್ಯವಸ್ಥೆಯನ್ನು ಈ ವ್ಯಕ್ತಿ ಮಾಡಿಯೇ ಮಾಡುತ್ತಾರೆ. ಮಂಗಳೂರು ನಗರದಲ್ಲಿ ರಕ್ತದಾನ ಎಂದಾಗಲೆಲ್ಲಾ ಬಹುತೇಕ ಮಂದಿಗೆ ನೆನಪಾಗುವುದು ಇದೇ ನಂಬರ್. ನಗರದ ಪ್ರಮುಖ ಆಸ್ಪತ್ರೆಗಳಾದ ಎ.ಜೆ. ಹಾಸ್ಪಿಟಲ್, ಕೆಎಂಸಿ, ಫಾದರ್‌ಮುಲ್ಲರ್ಸ್, ಯುನಿಟಿ, ಹೈಲ್ಯಾಂಡ್ ಆಸ್ಪತ್ರೆಗಳಿಗೆ ಪ್ರತಿನಿತ್ಯವೂ ಭೇಟಿ ನೀಡುವುದು ಇವರ ನಿತ್ಯದ ಕಾಯಕ. ತುರ್ತು ಚಿಕಿತ್ಸೆಗಾಗಿ ಬರುವ ರೋಗಿಗಳಿಗೆ ಆ ರೋಗದ ಸ್ಪೆಷಲಿಸ್ಟ್ ಡಾಕ್ಟರ್ ಯಾವ ಆಸ್ಪತ್ರೆಯಲ್ಲಿರುತ್ತಾರೆ? ಹೇಗೆ ಸೇರಿಸಬೇಕು? ಕಡಿಮೆ ಖರ್ಚಿನಲ್ಲಿ ಚಿಕಿತ್ಸೆ ದೊರೆಯಲು ಏನು ಮಾಡಬೇಕು? ಯಾವ್ಯಾವ ಆಸ್ಪತ್ರೆಯಲ್ಲಿ ಯಾವ್ಯಾವ ಸೌಲಭ್ಯವಿದೆ? ಎಂಬಿತ್ಯಾದಿ ಮಾಹಿತಿಗಳನ್ನು ಹೊಂದಿರುವ ಈ ಸಾಮಾಜಿಕ ಕಾರ್ಯಕರ್ತ, ಕ್ರಿಯೇಟಿವ್ ಫೌಂಡೇಶನ್‌ನಡಿ ಕಾರ್ಯಾಚರಿಸುತ್ತಿರುವ ಇಂಫರ್ಮೇಶನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್ ಎಂಬ ಮಾಹಿತಿ ಕೇಂದ್ರದ ವೈದ್ಯಕೀಯ (ಮೆಡಿಕಲ್) ವಿಭಾಗದಲ್ಲಿ ಉಚಿತ ಸೇವೆ ಸಲ್ಲಿಸುತ್ತಿದ್ದಾರೆ.

ಇಷ್ಟೆಲ್ಲ ಪೀಠಿಕೆ ನೀಡಿದ ನಂತರ ಆ ವ್ಯಕ್ತಿಯ ಹೆಸರು ತಿಳಿಯುವ ಕುತೂಹಲ ನಿಮಗುಂಟಾಗಿರಬಹುದು. ಯಾವುದೇ



ಇಂಫೋರ್ಮೇಷನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್ ವತಿಯಿಂದ ಆಯೋಜಿಸಲಾಗಿದ್ದ 'ಸಾಮಾಜಿಕ ಕಾರ್ಯಕರ್ತರಿಗಾಗಿ ಸ್ನೇಹ ಮಿಲನ' ಕಾರ್ಯಕ್ರಮದಲ್ಲಿ ಕ್ರಿಯೇಟಿವ್ ಫೌಂಡೇಶನ್‌ನ ಅಧ್ಯಕ್ಷ ಅನ್ವರ್ ಸಾದತ್ ಸಾಮಾಜಿಕ ಕಾರ್ಯಕರ್ತ ಇಲ್ಯಾಸ್‌ರನ್ನು ಸ್ಮರಣಿಕೆ ನೀಡಿ ಸನ್ಮಾನಿಸಿದರು.

ಪ್ರಚಾರವಿಲ್ಲದೆ ತನ್ನಪಾಡಿಗೆ ಸಾಮಾಜಿಕ ಸೇವೆ ಸಲ್ಲಿಸುತ್ತಿರುವ ಕಾರ್ಯಕರ್ತ ಇಲ್ಯಾಸ್. ಬಜ್ಪೆಯಲ್ಲಿ ವಾಸ್ತವ್ಯ ಹೊಂದಿರುವ ಇಲ್ಯಾಸ್ ತೀರಾ ಬಡಕುಟುಂಬದಲ್ಲಿ ಜನಿಸಿದವರು. ಚಿಕ್ಕಂದಿನಿಂದಲೇ ತಂದೆಯನ್ನು ಕಳೆದುಕೊಂಡು ಇಲ್ಯಾಸ್, ತನ್ನ ಕುಟುಂಬಕ್ಕೆ ಆಸರೆಯಾಗಿ ನಿಲ್ಲುವುದಕ್ಕಾಗಿ ಶಿಕ್ಷಣವನ್ನು ತ್ಯಾಗ ಮಾಡಿದರು. ಶಿಕ್ಷಣ ಪಡೆಯುವ ಅದಮ್ಯ ಬಯಕೆ ಇದ್ದರೂ ಸಂಸಾರವನ್ನು ಸಾಗಿಸುವುದಕ್ಕಾಗಿ ಚಿಕ್ಕಂದಿನಿಂದಲೇ ದುಡಿಯಲು ಇಳಿದಿದ್ದ ಇಲ್ಯಾಸ್ ಕಲಿತಿರುವುದು ಬರೇ ಮೂರನೇ ಕ್ಲಾಸು. ಫುಟ್‌ಬಾತ್ ವ್ಯಾಪಾರ ಮಾಡುತ್ತಿದ್ದ ಇಲ್ಯಾಸ್‌ಗೆ ವ್ಯಾಪಾರದಲ್ಲಿ ನಷ್ಟವುಂಟಾಗಿ ಮತ್ತೆ ಓರ್ವರ ಬಳಿ ಕೆಲಸಕ್ಕೆ ಸೇರಿಕೊಂಡರು. ಬೆಳಗ್ಗೆ 4 ಗಂಟೆಗೆ ಮನೆಯಿಂದ ಹೊರಟು ಹಾಲು ಮಾರಾಟ ಮಾಡಿ ಮಧ್ಯಾಹ್ನ 12 ಗಂಟೆಗೆ ಮನೆ ಸೇರುತ್ತಾರೆ. ದಿನದ ಉಳಿದ ಸಮಯವನ್ನು ಸಾಮಾಜಿಕ

ಇಲ್ಯಾಸ್‌ರವರು ಎಂದೂ ಪ್ರಚಾರಕ್ಕಾಗಿ ಸೇವೆ ಮಾಡಿದವರಲ್ಲ. ಪ್ರಮುಖ ಆಸ್ಪತ್ರೆಗಳ ವೈದ್ಯರು ಕೂಡ ಇಲ್ಯಾಸ್‌ರವರ ಸೇವೆಯನ್ನು ಶ್ಲಾಘಿಸುತ್ತಾರೆ. ಕೆಎಂಸಿ, ಎ.ಜೆ., ಫಾದರ್‌ಮುಲ್ಲರ್ಸ್ ಮುಂತಾದ ಆಸ್ಪತ್ರೆಗಳ ಸಹಯೋಗದೊಂದಿಗೆ ಹಲವು ಕಡೆಗಳಲ್ಲಿ ರಕ್ತದಾನ ಶಿಬಿರ ಆಯೋಜಿಸಿರುವ ಇಲ್ಯಾಸ್ ಅವರ ಬಳಿ ರಕ್ತದಾನಿಗಳ ಒಂದು ಪಟ್ಟಿ ಕೂಡ ಇದೆ. ಇಂಫರ್ಮೇಶನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್‌ನ ಮೂಲಕ ಅವರು ಇದಕ್ಕಾಗಿ ಒಂದು ವ್ಯವಸ್ಥೆಯನ್ನೇ ರೂಪಿಸಿಕೊಂಡಿದ್ದಾರೆ. ಯಾರ ರಕ್ತವು ಯಾವ ರೋಗಿಗೆ ದಾನವಾಗುತ್ತಿದೆ ಎಂಬುದರ ಅಂಕಿಅಂಶ ಕೂಡ ಇಲ್ಯಾಸ್ ಅವರ ಬಳಿ ಇದೆ.

ಸೇವಾ ಚಟುವಟಿಕೆಯಲ್ಲಿ ತೊಡಗಿಸುವ ಇಲ್ಯಾಸ್‌ರಿಂದ ಇಂದು ಅದೆಷ್ಟೋ ಬಡ, ಮಧ್ಯಮ ಕುಟುಂಬಗಳು ನೆರವನ್ನು ಪಡೆದಿವೆ. ಆಸ್ಪತ್ರೆಯ ಬಿಲ್ ಪಾವತಿಸಲಾಗದೆ ಕಂಗಾಲಾದ ಕುಟುಂಬಕ್ಕೆ ಸಾಂತ್ವನ ನೀಡಿ, ಆಸ್ಪತ್ರೆಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಬಿಲ್‌ನಲ್ಲಿ ವಿನಾಯಿತಿ ದೊರಕಿಸಿಕೊಡುವಲ್ಲಿಯೂ ಇಲ್ಯಾಸ್ ಯಶಸ್ವಿಯಾಗುತ್ತಾರೆ. ದುಬಾರಿ ವೆಚ್ಚದ ಶಸ್ತ್ರಚಿಕಿತ್ಸೆಯನ್ನು ಕೆಲವೇ ಸಾವಿರ ರೂಪಾಯಿ ವೆಚ್ಚದಲ್ಲಿ ಮಾಡಿಸಿಕೊಡುವ ಇಲ್ಯಾಸ್, ಹಲವು ಮಂದಿಯ ಪ್ರಾರ್ಥನೆಗೆ ಪಾತ್ರರಾಗಿದ್ದಾರೆ.

ಇಲ್ಯಾಸ್‌ರವರು ಎಂದೂ ಪ್ರಚಾರಕ್ಕಾಗಿ ಸೇವೆ ಮಾಡಿದವರಲ್ಲ. ಪ್ರಮುಖ ಆಸ್ಪತ್ರೆಗಳ ವೈದ್ಯರು ಕೂಡ ಇಲ್ಯಾಸ್‌ರವರ ಸೇವೆಯನ್ನು ಶ್ಲಾಘಿಸುತ್ತಾರೆ. ಕೆಎಂಸಿ, ಎ.ಜೆ., ಫಾದರ್‌ಮುಲ್ಲರ್ಸ್ ಮುಂತಾದ ಆಸ್ಪತ್ರೆಗಳ ಸಹಯೋಗದೊಂದಿಗೆ ಹಲವು ಕಡೆಗಳಲ್ಲಿ ರಕ್ತದಾನ ಶಿಬಿರ ಆಯೋಜಿಸಿರುವ ಇಲ್ಯಾಸ್ ಅವರ ಬಳಿ ರಕ್ತದಾನಿಗಳ ಒಂದು ಪಟ್ಟಿ ಕೂಡ ಇದೆ. ಇಂಫರ್ಮೇಶನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್‌ನ ಮೂಲಕ ಅವರು ಇದಕ್ಕಾಗಿ ಒಂದು ವ್ಯವಸ್ಥೆಯನ್ನೇ ರೂಪಿಸಿ ಕೊಂಡಿದ್ದಾರೆ. ಯಾರ ರಕ್ತವು ಯಾವ ರೋಗಿಗೆ ದಾನವಾಗುತ್ತಿದೆ ಎಂಬುದರ ಅಂಕಿಅಂಶ ಕೂಡ ಇಲ್ಯಾಸ್ ಅವರ ಬಳಿ ಇದೆ. ಮತ್ತೊಂದು ವಿಶೇಷವೇನೆಂದರೆ, ರಕ್ತದಾನ ಮಾಡಿದ ವ್ಯಕ್ತಿಗೆ ಆರು ತಿಂಗಳು ಕಳೆಯುತ್ತಿದ್ದಂತೆಯೇ ಇಲ್ಯಾಸ್‌ರವರು ಅವರನ್ನು ನೋಟ್ ಮಾಡಿಟ್ಟುಕೊಳ್ಳುತ್ತಾರೆ. ಹೀಗೆ ರಕ್ತದಾನಕ್ಕೆ ಸಂಬಂಧಿಸಿದಂತೆ ಒಟ್ಟು ಡಾಟಾ ಸಂಗ್ರಹಿಸಿಟ್ಟುಕೊಂಡಿರುವ ಇಲ್ಯಾಸ್‌ರಿಗೆ ಅದನ್ನೆಲ್ಲ ಓದಿ ತಿಳಿಸಲು, ಕಂಪ್ಯೂಟರ್‌ನಲ್ಲಿ ಅದನ್ನು ಸಂಗ್ರಹಿಸಿಡಲು ಓರ್ವ ಸಿಬ್ಬಂದಿಯ ಅಗತ್ಯ ಇದ್ದೇ ಇರುತ್ತದೆ.

ಇಂತಿಂಥ ಗ್ರೂಪ್‌ನ ಬ್ಲಡ್ ಬೇಕು ಎಂದು ಅವರ ಮೊಬೈಲ್‌ಗೆ ಮೆಸೇಜ್ ಬಂದರೆ ಅದನ್ನು ಓದಿ ತಿಳಿದುಕೊಳ್ಳುವಷ್ಟು ಇಲ್ಯಾಸ್ ಶಿಕ್ಷಿತರಲ್ಲ. ಪ್ರತಿಯೊಂದು ಮೆಸೇಜನ್ನು ಯಾರಿಗಾದರೂ ತೋರಿಸಿ ತಿಳಿದುಕೊಳ್ಳುವ ಇಲ್ಯಾಸ್, ನಗರದ ದೊಡ್ಡ ದೊಡ್ಡ ಆಸ್ಪತ್ರೆಗಳ ವೈದ್ಯಾಧಿಕಾರಿಗಳೊಂದಿಗೆ ಮಾತನಾಡುವ ಶೈಲಿಯೂ ಪದವೀಧರರನ್ನೂ ನಾಚಿಸುವಂತಿರುತ್ತದೆ.

ಇಲ್ಯಾಸ್‌ರವರ ವಿಶೇಷ ಪ್ರತಿಭೆ ಕೌನ್ಸಿಲಿಂಗ್. ಅದೆಷ್ಟೋ ಮಂದಿ ರಕ್ತದ ಅವಶ್ಯಕತೆ ಇದೆ ಎಂದು ಫೋನಾಯಿಸಿದಾಗ ಅಲ್ಲಿಗೆ ಧಾವಿಸುವ ಇಲ್ಯಾಸ್ ಅವರು ನೇರವಾಗಿ ರಕ್ತದಾನದ ವ್ಯವಸ್ಥೆ ಮಾಡುವುದಿಲ್ಲ. ಬದಲಾಗಿ ಅವರ ಕುಟುಂಬದ ಸದಸ್ಯರ ಬಗ್ಗೆ ವಿಚಾರಿಸುತ್ತಾರೆ. ಅವರ ಪೈಕಿ ಯಾರಾದರೂ ಆರೋಗ್ಯವಂತಾಗಿದ್ದು, ರಕ್ತದಾನದ ಕುರಿತು ಹಿಂಜರಿಕೆ ಉಳ್ಳವರಾಗಿದ್ದರೆ ಮೊದಲು ಅವರಿಗೆ ಕೌನ್ಸಿಲಿಂಗ್ ಮಾಡಿ ಅವರಿಂದಲೇ ರಕ್ತದಾನ ಮಾಡಿಸುತ್ತಾರೆ. ಇಲ್ಯಾಸ್ ಅವರ ಪ್ರಕಾರ- ''ರಕ್ತದಾನದ ಶಿಬಿರದ ಮೂಲಕ ರಕ್ತವನ್ನು ಸಂಗ್ರಹಿಸಿಟ್ಟುಕೊಂಡಿರುವುದು ಬೇಕಾಬಿಟ್ಟಿ ರಕ್ತದಾನ ಮಾಡುವುದಕ್ಕಲ್ಲ. ಅದು ತುರ್ತು ಸಂದರ್ಭದಲ್ಲಿ ನೆರವಾಗುವುದಕ್ಕಾಗಿ. ಅದೆಷ್ಟೋ ಮಂದಿ ರಕ್ತದಾನ ಮಾಡಲು ಸಮರ್ಥರಿದ್ದೂ ಕೂಡ ತಮ್ಮದೇ ಕುಟುಂಬದವರಿಗೆ ರಕ್ತದಾನ ಮಾಡಲು ಹಿಂಜರಿಯುತ್ತಾರೆ. ಅವರಿಗೆ ಈ ಕುರಿತು ಜಾಗೃತಿ ಮೂಡಿಸುವುದು ಅಗತ್ಯವಾಗಿದೆ'' ಎನ್ನುತ್ತಾರೆ.

ಹಗಲಿಡೀ ಆಸ್ಪತ್ರೆಗಳಿಗೆ ಭೇಟಿ ನೀಡಿ ರೋಗಿಗಳನ್ನು ಸಂದರ್ಶಿಸುವ ಇಲ್ಯಾಸ್ ಅವರನ್ನು ಕಳೆದ ವರ್ಷ ಟ್ಯಾಲೆಂಟ್ ರಿಸರ್ಚ್ ಫೌಂಡೇಶನ್ ಸನ್ಮಾನಿಸಿತ್ತು. ತನ್ನ ನಿಸ್ವಾರ್ಥ ಸೇವೆಗೆ ಇದುವರೆಗೆ ಯಾರಿಂದಲೂ ಯಾವುದೇ ರೀತಿಯ ಪ್ರತಿಫಲ ಬಯಸಿದವರಲ್ಲ. ಮನೆಯಲ್ಲಿ ಬಡತನವಿದ್ದರೂ ಮಾಮೂಲಿ ದುಡಿಮೆಯಿಂದಲೇ ಸಂಸಾರ ಸಾಗಿಸುತ್ತಿರುವ ಇಲ್ಯಾಸ್‌ರದ್ದು ಸ್ವಾಭಿಮಾನ, ಸ್ವಾವಲಂಬನೆಯ ಜೀವನ. ವರದಕ್ಷಿಣೆ ರಹಿತ ಸರಳ ವಿವಾಹದ ಮೂಲಕ ಕಳೆದ ವರ್ಷ ದಾಂಪತ್ಯ ಜೀವನಕ್ಕೆ ಕಾಲಿರಿಸಿದ ನಂತರವೂ ಇಲ್ಯಾಸ್‌ರವರ ಸಾಮಾಜಿಕ ಸೇವಾ ಚಟುವಟಿಕೆಯಲ್ಲಿ ಯಾವುದೇ ಏರುಪೇರು ಉಂಟಾಗಿಲ್ಲ.

ಅವರ ನಿಸ್ವಾರ್ಥ ಪ್ರಾಮಾಣಿಕ ಸೇವೆಗೆ ಇಲ್ಲಿದೆ ಒಂದು ಉದಾಹರಣೆ. ಆಸ್ಪತ್ರೆಯಲ್ಲಿ ನೆರವಾದ ಕಾರಣಕ್ಕೆ ಅಥವಾ ಆ್ಯಂಬುಲೆನ್ಸ್ ವ್ಯವಸ್ಥೆ ಮಾಡಿಕೊಟ್ಟದ್ದಕ್ಕಾಗಿ ರೋಗಿಗಳ ಕುಟುಂಬ

ಸ್ಥರು ಯಾರಾದರೂ ರೂಪಾಯಿ 100- 300 ನೀಡಿದರೆ ಅದನ್ನು ಇಲ್ಯಾಸ್ ಅವರು ಸ್ವೀಕರಿಸುತ್ತಿರಲಿಲ್ಲ. ಆದರೆ ಈಗೀಗ ಅವರು ಅದನ್ನು ಸ್ವೀಕರಿಸುತ್ತಾರೆ. ಕಾರಣ, ಅವರಲ್ಲೊಂದು ಕನಸು ಚಿಗುರೊಡೆದಿದೆ. ಅದು ಆ್ಯಂಬುಲೆನ್ಸ್ ಖರೀದಿಸುವ ಕನಸು. ಜನರಿಗೆ ತುರ್ತು ಸಂದರ್ಭದಲ್ಲಿ ನೆರವಾಗಲು ಆ್ಯಂಬುಲೆನ್ಸ್ ಅಗತ್ಯವಿರುವುದನ್ನು ಮನಗಂಡಿರುವ ಇಲ್ಯಾಸ್, ಯಾರಾದರೂ ಹಣ ನೀಡಿದರೆ ಅದನ್ನು ಇಂಫರ್ಮೇಶನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್‌ನಲ್ಲಿರುವ ಹುಂಡಿಗೆ ಹಾಕುತ್ತಾರೆ. ''ಒಂದಲ್ಲ ಒಂದು ದಿನ ಆ್ಯಂಬುಲೆನ್ಸ್ ಖರೀದಿಸುವ ದಿನ ಬರಲಿದೆ'' ಎಂಬುದು ಇಲ್ಯಾಸ್‌ರವರ ಅಚಲವಾದ ವಿಶ್ವಾಸ. ಅವರ ಕನಸು ನನಸಾಗಲಿ ಎಂದು ಹಾರೈಸೋಣ.

ಇನ್ನೊಂದು ವಿಚಾರ. ಮನೆಯಲ್ಲಿ ಸಾಕಷ್ಟು ಸಂಸಾರ ತಾಪತ್ರಯಗಳಿದ್ದರೂ ಇದುವರೆಗೆ ಯಾರೊಂದಿಗೂ ಅವರು ತಮ್ಮ ಸಂಕಷ್ಟವನ್ನು ಹೇಳಿಕೊಂಡವರಲ್ಲ. ಮಾತ್ರವಲ್ಲ, ತಾನು ಸಕ್ರಿಯವಾಗಿ ದುಡಿಯುತ್ತಿರುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯ ಮುಖಂಡರೊಂದಿಗೂ ಸಂಕಷ್ಟ ಬಿಚ್ಚಿಟ್ಟವರಲ್ಲ. ಅಲ್ಲಾಹನ ಮೇಲೆ ಭರವಸೆ, ಭಾರವನ್ನಿಟ್ಟು ಮುನ್ನಡೆಯುತ್ತಿರುವ ಇಲ್ಯಾಸ್‌ರವರು ಸದಾ ನಗುಮುಖದಲ್ಲೇ ವ್ಯವಹರಿಸುತ್ತಾರೆ. ಯಾವತ್ತೂ ಅವರ ಮುಖದಲ್ಲಿ ದುಗುಡ, ದುಮ್ಮಾನ ಕಂಡು ಬರುವುದೇ ಇಲ್ಲ.

ದಿನಾಂಕ 7-9-2011ರಂದು ಇಂಫರ್ಮೇಶನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್‌ನ ವತಿಯಿಂದ ಮಂಗಳೂರಿನಲ್ಲಿ ಹಮ್ಮಿಕೊಳ್ಳಲಾಗಿದ್ದ 'ಸಾಮಾಜಿಕ ಕಾರ್ಯಕರ್ತರ ಸಮ್ಮಿಲನ' ಕಾರ್ಯಕ್ರಮದಲ್ಲಿ ಸನ್ಮಾನಿಸಲ್ಪಟ್ಟವರಲ್ಲಿ ಇಲ್ಯಾಸ್ ಅವರೂ ಒಬ್ಬರಾಗಿದ್ದರು. ಸನ್ಮಾನ ಸ್ವೀಕರಿಸಿ ಒಂದೆರಡು ಮಾತುಗಳ ನ್ನಾಡಲು ಆಹ್ವಾನಿಸಿದಾಗ, ಮೈಕ್ ಮುಂದೆ ನಿಂತು ಒಂದೆರಡು ಕಣ್ಣೀರ ಹನಿ ಸುರಿಸಿ, ''ಕೊನೆಯ ಉಸಿರಿನವರೆಗೂ ಸಾಮಾಜಿಕ ಸೇವೆ ಸಲ್ಲಿಸಲು ನನ್ನ ಆರೋಗ್ಯಕ್ಕಾಗಿ ಪ್ರಾರ್ಥಿಸಿ'' ಎಂದಷ್ಟೇ ಹೇಳಿದರು.

ಅವರನ್ನು ಸನ್ಮಾನಿಸಲು ಒಂದು ಮುಖ್ಯವಾದ ಕಾರಣವಿದೆ. ರಮಝಾನ್ ತಿಂಗಳು ಆರಂಭವಾಗುವುದಕ್ಕೆ ಒಂದು ವಾರದ ಹಿಂದೆ ಕೃಷ್ಣಾಪುರ ಚೊಕಬೆಟ್ಟುವಿನ ನೌಶಾದ್ ಎಂಬ ಯುವಕ ಚೂರಿ ಇರಿತಕ್ಕೊಳಗಾಗಿದ್ದ. ರಾತ್ರಿ 9.30ರ ವೇಳೆಗೆ ಈ ಘಟನೆ ಸಂಭವಿಸಿತ್ತು. ಅದೇ ದಾರಿಯಾಗಿ ತನ್ನ ದ್ವಿಚಕ್ರ ವಾಹನದಲ್ಲಿ ಬರುತ್ತಿದ್ದ ಇಲ್ಯಾಸ್ ಅವರಿಗೆ ಈ ವಿಷಯ ತಿಳಿದು ಎ.ಜೆ.ಆಸ್ಪತ್ರೆಯ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆಯ ವ್ಯವಸ್ಥೆಯ ಮಾಡಿಸಿದರು. ಗಾಯಾಳುವನ್ನು ಆಸ್ಪತ್ರೆಗೆ ತಲುಪಿಸುವ ಹೊತ್ತಿಗೆ ಆಸ್ಪತ್ರೆಯಲ್ಲಿ ಅದಕ್ಕೆ ಬೇಕಾದ ಎಲ್ಲ ತುರ್ತು ಚಿಕಿತ್ಸೆಯ ಏರ್ಪಾಡು ಗಳನ್ನು ಇಲ್ಯಾಸ್ ಮಾಡಿಸಿದರು. ಮಾತ್ರವಲ್ಲ, ಆ ಸಂದರ್ಭದಲ್ಲಿ ಅಗತ್ಯವಿದ್ದ 38 ಬಾಟಲ್ ರಕ್ತವನ್ನು ಕ್ಲಪ್ತ ಸಮಯಕ್ಕೆ ತಲುಪಿಸಿ ದ್ದರಿಂದ ನೌಶಾದ್‌ರ ಪ್ರಾಣ ಉಳಿಯಿತು ಎಂದು ವೈದ್ಯರು ತಿಳಿಸಿದ್ದಾರೆ.

ನೌಶಾದ್ ಗುಣಮುಖರಾಗುತ್ತಿದ್ದಂತೆಯೇ ಇನ್ನೊಂದು ಸಮಸ್ಯೆಯೂ ಕಾಣಿಸಿಕೊಂಡಿತು. ಅದು ಪಿತ್ತಕೋಶದ ಸಮಸ್ಯೆ. ಅದಕ್ಕೆ ಬೇಕಾದ ಚಿಕಿತ್ಸಾ ವ್ಯವಸ್ಥೆ ಇರುವುದು ಬೆಂಗಳೂರಿನಲ್ಲಿ ಮಾತ್ರ!. ರಮಝಾನ್‌ನ ಉಪವಾಸ ಇರುವ ಆ ಸಂದರ್ಭದಲ್ಲಿ ಸುಮಾರು 350 ಕಿ.ಮೀ. ದೂರ ಇರುವ ಬೆಂಗಳೂರಿಗೆ ಪ್ರಯಾಣಿಸುವುದು ತೀರಾ ಪ್ರಯಾಸದ ಸಂಗತಿ. ಆದರೆ ಇಲ್ಯಾಸ್ ಅವರ ಸಾಮಾಜಿಕ ಸೇವೆಗೆ ದಣಿವು ಪ್ರಯಾಸ ಎಂಬುದೇ ಇಲ್ಲ. ನೌಶಾದ್‌ರನ್ನು ವಿಶೇಷ ಆ್ಯಂಬುಲೈನ್ಸ್‌ನಲ್ಲಿ ಬೆಂಗಳೂರಿಗೆ ಸಾಗಿಸಿದ್ದು ಇದೇ ಇಲ್ಯಾಸ್ ಅವರು. ಅಂದರೆ ಆ್ಯಂಬುಲೆನ್ಸ್ ನಲ್ಲಿ ಇಲ್ಯಾಸ್ ಅವರು ಕೂಡ ಕುಳಿತುಕೊಂಡಿ ದ್ದರು. ನೌಶಾದ್ ಮತ್ತು ಇಲ್ಯಾಸ್ ಪರಸ್ಪರ ರಕ್ತ ಸಂಬಂಧಿಕರೇನೂ ಅಲ್ಲ. ಮಾನವೀಯ ಸಂಬಂಧವು ರಕ್ತಸಂಬಂಧಕ್ಕಿಂತಲೂ ಮಿಗಿಲಾದದ್ದು ಎಂಬುದನ್ನು ಇಲ್ಯಾಸ್ ನಿರೂಪಿಸಿದರು. ಕ್ಲಪ್ತ ಸಮಯದಲ್ಲಿ ದೊರೆತ ಚಿಕಿತ್ಸೆಯಿಂದಾಗಿ ಇದೀಗ ನೌಶಾದ್ ಚೇತರಿಸಿಕೊಳ್ಳುತ್ತಿದ್ದಾರೆ. ಅವರು ಶೀಘ್ರ ಗುಣಮುಖರಾಗಲು ಪ್ರಾರ್ಥಿಸಿ ಎಂದು ಇಲ್ಯಾಸ್ ಅವರ ಮೊಬೈಲ್‌ನಿಂದ ಮೆಸೇಜ್‌ಗಳು ಹರಿದಾಡುತ್ತಿದ್ದವು. ಹೀಗೆ ಆಪದ್ಬಾಂಧವನಾಗಿ ಆಗಮಿಸಿದ ಅದೆಷ್ಟೋ ಉದಾಹರಣೆಗಳಿವೆ. ಮುಖ್ಯವಾಗಿ ವಿಮಾನ ದುರಂತದ ಸಂದರ್ಭದಲ್ಲಿ ಎರಡು ಮೂರು ದಿನ ಇಲ್ಯಾಸ್ ಅವರು ಆಸ್ಪತ್ರೆಯಲ್ಲೇ ಉಳಿದಿದ್ದರು.

ಕಾರ್ಯಕ್ರಮದಲ್ಲಿ ಕಿವಿಗೆ ಕೇಳಿಸಿದ ಒಂದೂವರೆ ಗಂಟೆಯ ಮಾತುಗಳಿಗಿಂತ ಇಲ್ಯಾಸ್‌ರವರ ಒಂದೆರಡು ಹನಿಗಳು ಎರಡು ಪುಟದ ಈ ಲೇಖನ ಬರೆಯಲು ನನ್ನನ್ನು ನಿರ್ಬಂಧಿಸಿತು.

ಇಲ್ಯಾಸ್ ಅವರ ಕಣ್ಣಿನಿಂದ ತೊಟ್ಟಿಕ್ಕಿದ ಆ ಹನಿಗಳು ಸಮುದಾಯದ ಪರಿಸ್ಥಿತಿಯನ್ನು ಪ್ರತಿನಿಧಿಸುವಂಥದ್ದು. ಆಸ್ಪತ್ರೆಗಳಲ್ಲಿ ನರಕಯಾತನೆ ಅನುಭವಿಸುತ್ತಿರುವವರ ಪರವಾದ ಹನಿಗಳು...

ಕಾರ್ಯಕ್ರಮ ಮುಗಿಯುವವರೆಗೆ ಕಾಯದೆ ತುರ್ತಾಗಿ ಅಲ್ಲಿಂದ ನಿರ್ಗಮಿಸಲು ಸಿದ್ಧರಾದ ಇಲ್ಯಾಸ್‌ರನ್ನು - ''ಕಾರ್ಯಕ್ರಮ ಮುಗಿಯುವವರೆಗೆ ನಿಲ್ಲಿ, ನಿಮ್ಮ ಸಂದರ್ಶನ ಬೇಕಾಗಿದೆ'' ಎಂದಾಗ ಅವರು ಹೇಳಿದ್ದಿಷ್ಟು- ''ಬೇಡ, ಎ+ ಬ್ಲಡ್ ಬೇಕು ಎಂದು ಮೆಸೇಜ್ ಬಂದಿದೆ. ಪೇಶೆಂಟ್ ಅಲ್ಲಿ ಕಾಯುತ್ತಿದ್ದಾರೆ...''

ಇಲ್ಯಾಸ್ ಅವರು ಯುವಪೀಳಿಗೆಗೆ ಮಾದರಿಯಾಗಲಿ ಎಂದಷ್ಟೇ ಹಾರೈಸುವೆ.

● ಫಯಾಝ್ ಎನ್.

23ನೇ ಪುಟದಿಂದ...

# ನಾಗರಿಕ ಹಕ್ಕುಗಳಿಗಾಗಿ ಎದ್ದೇಳಿ...





*ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆಯು ಸಂವಿಧಾನ ಉಲ್ಲಂಘನೆಗೆ ಜೀವಂತ ಉದಾಹರಣೆಯಾಗಿದೆ. ಇದರ ಬಲಿಪಶುಗಳು ಮತ್ತು ಜನರ ಅಸಮಾಧಾನ ಹಾಗೂ ಅಂತಾರಾಷ್ಟ್ರೀಯ ಮಾನವ ಹಕ್ಕು ಸಂಘಟನೆಗಳ ಖಂಡನೆಯ ಹೊರತಾಗಿಯೂ ವಿಶೇಷಾಧಿಕಾರ ಕಾಯ್ದೆಯು ಯಾವುದೇ ಅಡ್ಡಿಯಿಲ್ಲದೆ ಮುಂದುವರಿಯುತ್ತಿದೆ. ತನ್ನ ನಾಗರಿಕರಿಗೆ ಸುಭದ್ರ ಜೀವನದ ಭರವಸೆಯನ್ನು ನೀಡುವಲ್ಲಿ ರಾಜ್ಯದ ವೈಫಲ್ಯವು ಪೋಟಾ ಮತ್ತು ಯುಎಪಿಎಯಂತಹ ಇನ್ನಷ್ಟು ಬೇಡಿಗಳನ್ನು ಸೃಷ್ಟಿಸಿವೆ.*

ಅಂತಾರಾಷ್ಟ್ರೀಯ ಮಾನವ ಹಕ್ಕು ಸಂಘಟನೆಗಳ ಖಂಡನೆಯ ಹೊರತಾಗಿಯೂ ವಿಶೇಷಾಧಿಕಾರ ಕಾಯ್ದೆಯು ಯಾವುದೇ ಅಡ್ಡಿಯಿಲ್ಲದೆ ಮುಂದುವರಿಯುತ್ತಿದೆ. ತನ್ನ ನಾಗರಿಕರಿಗೆ ಸುಭದ್ರ ಜೀವನದ ಭರವಸೆಯನ್ನು ನೀಡುವಲ್ಲಿ ರಾಜ್ಯದ ವೈಫಲ್ಯವು ಪೋಟಾ ಮತ್ತು ಯುಎಪಿಎಯಂತಹ ಇನ್ನಷ್ಟು ಬೇಡಿಗಳನ್ನು ಸೃಷ್ಟಿಸಿವೆ.

ನಗರದ ಮಧ್ಯಮ ವರ್ಗದ ನಿಷ್ಠೂರ ನಿರಂತರ ಸ್ಪರ್ಧಾತ್ಮಕತೆಯಲ್ಲಿ ಅಲ್ಪಸಂಖ್ಯಾತರು, ದಲಿತರ ಮತ್ತು ಆದಿವಾಸಿಗಳ ಮೂಲಭೂತ ಹಕ್ಕುಗಳು ಪ್ರಧಾನವಾಗಿ ಹಾನಿಗೊಳಪಡುತ್ತಿವೆ. ತುನೀಶಿಯಾ ಮತ್ತು ಈಜಿಪ್ಟ್‌ನಲ್ಲಿ ಉಂಟಾಗಿರುವ ಜನ ಬಂಡಾಯದ ಅಲೆಗಳು ಇಡೀ ಜಗತ್ತಿಗೆ ವಸಾಹತೋತ್ತರ ಸರ್ವಾಧಿಕಾರದ ವಿರುದ್ಧ ಸಂದೇಶವಾಗಿದೆ. ಭ್ರಷ್ಟಾಚಾರ, ದಮನಕಾರಿ ನೀತಿಯ ವಿರುದ್ಧ ಇತ್ತೀಚೆಗೆ ಮಧ್ಯ ಪ್ರಾಚ್ಯದಲ್ಲಿ ಎದ್ದ ಜನಬಂಡಾಯದ ವೇಳೆ ಅರಬ್ ಜಗತ್ತಿನ ಪ್ರಜಾಪ್ರಭುತ್ವ ಪರ ಮೋಹದ ಬಗ್ಗೆ ನಮ್ಮ ಆಡಳಿತ ವರ್ಗದ ಉದಾಸೀನತೆಯು ಸ್ಪಷ್ಟವಾಗಿದೆ. ನಮ್ಮ ಆಡಳಿತ ವರ್ಗವು ನೆರೆಯ ರಾಷ್ಟ್ರಗಳಲ್ಲಿ ಸರ್ವಾಧಿಕಾರಿ ವ್ಯವಸ್ಥೆಯನ್ನು ಬಯಸುತ್ತವೆ. ಪ್ರಭುತ್ವದ ಹೆಚ್ಚುತ್ತಿರುವ ದಮನದ ವಿರುದ್ಧ ವಿಸ್ತಾರಗೊಳ್ಳುತ್ತಿರುವ ಅಸಮಾಧಾನವು ಅವರಿಗೆ ತಮ್ಮ ಯೋಚನೆಯನ್ನು ಬದಲಾಯಿಸುವಂತೆ ಒತ್ತಡ ಉಂಟುಮಾಡಬೇಕು.

ಸರ್ವಾಧಿಕಾರಿ ಧೋರಣೆಯ ಬೆಳವಣಿಗೆಯನ್ನು ತಡೆಯುವುದಕ್ಕಾಗಿ ಮತ್ತು ಹುದುಗಿ ಹೋಗುತ್ತಿರುವ ಪ್ರಜಾಪ್ರಭುತ್ವವನ್ನು ರಕ್ಷಿಸುವುದಕ್ಕಾಗಿ ನಾಗರಿಕ ಹಕ್ಕುಗಳಿಗಾಗಿ ಧ್ವನಿಯೆತ್ತುವುದು ದೇಶದ ಪ್ರಜೆಗಳ ಕರ್ತವ್ಯವಾಗಿದೆ. ಜಗತ್ತಿನಲ್ಲಿ ಬದಲಾವಣೆಗಾಗಿ ನಡೆದ ಹಲವು ಚಳುವಳಿಗಳಲ್ಲಿ ವಿದ್ಯಾರ್ಥಿಗಳೂ ಪ್ರಮುಖ ಪಾತ್ರವಹಿಸಿರುವುದರಿಂದ ನಾಗರಿಕ ಹಕ್ಕುಗಳಿಗಾಗಿ ನಡೆಸುವ ಹೋರಾಟದಲ್ಲಿ ಅವರ ಪಾಲ್ಗೊಳ್ಳುವಿಕೆಯು ಇನ್ನೂ ಮುಖ್ಯವಾಗಿದೆ.

ಸರಕಾರವು ತನ್ನ ದೇಶದ ವ್ಯಾಪ್ತಿಯೊಳಗಿನ ಜನರ ಬೇಕು-ಬೇಡಗಳನ್ನು ನೋಡುತ್ತಿರಬೇಕು. ಪ್ರಜೆಗಳನ್ನು ರಕ್ಷಿಸಬೇಕಾದ ಅದೇ ಸರಕಾರಗಳು ಪ್ರಜೆಗಳ ಹಕ್ಕುಗಳನ್ನು ದಮನಿಸುವ ಕಾರ್ಯದಲ್ಲಿ ತೊಡಗಿಕೊಂಡರೆ ಅದನ್ನು ಪ್ರಶ್ನಿಸಲು ಸಮಾಜದಲ್ಲಿ ಗೌರವಿಸಲ್ಪಡುವ ವಿದ್ಯಾರ್ಥಿ ವರ್ಗವು ಮುಂದೆ ಬರಬೇಕು. ಭಾರತವನ್ನೊಳಗೊಂಡಂತೆ ಹಲವು ದೇಶಗಳ ಸ್ವಾತಂತ್ರ್ಯ ಚಳವಳಿ ಹಾಗೂ ಬದಲಾವಣೆಗಾಗಿ ನಡೆದ ಇನ್ನಿತರ ಚಳುವಳಿಗಳಲ್ಲಿ ವಿದ್ಯಾರ್ಥಿ ಸಮುದಾಯವು ಪ್ರಮುಖ ಪಾತ್ರವಹಿಸಿರುವುದಕ್ಕೆ ಇತಿಹಾಸವು ನಮ್ಮ ಮುಂದೆ ಸಾಕ್ಷಿಯಾಗಿ ನಿಂತಿದೆ. ನಮ್ಮ ದೇಶದಲ್ಲಿ ನಾಗರಿಕ ಹಕ್ಕುಗಳಿಗಾಗಿ ನಡೆಯುವ ಎಲ್ಲಾ ಹೋರಾಟದಲ್ಲೂ ವಿದ್ಯಾರ್ಥಿಗಳ ಪಾಲು ದೊಡ್ಡದಿರಲಿ ಎಂದು ಆಶಿಸೋಣ....

## ■ ಮಡಿಕೇರಿಯಲ್ಲಿ ಈದ್ ಕಿಟ್ ವಿತರಣೆ



ಮಡಿಕೇರಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಮಡಿಕೇರಿ ವಲಯದ ವತಿಯಿಂದ ಈದ್ ಉಲ್ ಫಿತ್ರ್ ಹಬ್ಬದ ಅಂಗವಾಗಿ ಈದ್ ಕಿಟ್ ವಿತರಣಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಪ್ರಯುಕ್ತ ಸುಮಾರು 80 ಬಡ ಕುಟುಂಬಗಳಿಗೆ ಈದ್ ಕಿಟ್‌ಗಳನ್ನು ವಿತರಿಸಲಾಯಿತು.

ಜಿಲ್ಲಾ ಕಚೇರಿಯಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷ ಅಫ್ಸರ್ ಕೆ.ಬಿ ವಹಿಸಿದ್ದರು.

ಮಡೀಕೇರಿ ಜಾಮಿಯಾ ಮಸ್ಜಿದ್ ಖತೀಬ್ ಅಝೀಝುರ್ ರಿಝ್ವಿ, ಬದ್ರಿಯಾ ಮಸ್ಜಿದ್ ಖತೀಬ್ ಮೊಯ್ದು ಫೈಝಿ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಮಡಿಕೇರಿ ಅಧ್ಯಕ್ಷ ಅಬೂ ಹುರೈರಾ, ಎಸ್‌ಡಿಪಿಐ ಕಾರ್ಯದರ್ಶಿ ಅಡ್ವೋಕೇಟ್ ಅಮೀನ್ ಮುಹ್ಸಿನ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಅಬೂ ಹುರೈರ ಸ್ವಾಗತಿಸಿ ವಂದಿಸಿದರು. ರಫೀಕ್ ಕಾರ್ಯಕ್ರಮ ನಿರೂಪಿಸಿದರು.




ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಕಲ್ಲಡ್ಕ ವಲಯದ ವತಿಯಿಂದ ಈದುಲ್ ಫಿತ್ರ್‌ನ ಪ್ರಯುಕ್ತ ಹಲವು ಬಡ ಕುಟುಂಬಗಳಿಗೆ ಈದ್ ಕಿಟ್‌ಗಳನ್ನು ವಿತರಿಸಲಾಯಿತು. ವಲಯ ಸಮಿತಿ ಸದಸ್ಯರಾದ ಜವಾಝ್, ಹಸೈನಾರ್, ಶರೀಫ್ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

## ■ ತುಮಕೂರು: ಎಸ್‌ಡಿಪಿಐಯಿಂದ ಇಫ್ತಾರ್ ಕೂಟ

ತುಮಕೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ತುಮಕೂರು ಜಿಲ್ಲಾ ಘಟಕದ ವತಿಯಿಂದ ಇತ್ತೀಚೆಗೆ ತುಮಕೂರಿನಲ್ಲಿ ಇಫ್ತಾರ್ ಕೂಟವೊಂದನ್ನು ಏರ್ಪಡಿಸಲಾಗಿತ್ತು.

ಪಕ್ಷದ ಜಿಲ್ಲಾ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ■ ಮಣಿಪುರದಲ್ಲಿ ಈದ್‌ಕಿಟ್ ವಿತರಣೆ



ಮಣಿಪುರ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಮಣಿಪುರ ರಾಜ್ಯದ ಹಲವೆಡೆಗಳಲ್ಲಿ ಬಡ ಕುಟುಂಬಗಳಿಗೆ ಈದ್‌ಕಿಟ್‌ಗಳನ್ನು ವಿತರಿಸಲಾಯಿತು.

ಲಿಲಾಂಗ್, ಸೋರ, ಕ್ವಾಕ್ಚಿಂಗ್ ಕೀರಕ್, ಇರೋಂಗ್ ಮೊದಲಾದ ಪ್ರದೇಶಗಳಲ್ಲಿ ಕಿಟ್‌ಗಳನ್ನು ವಿತರಿಸಲಾಯಿತು. ಅಲ್ಲದೆ ಈದ್ ಉಲ್ ಫಿತ್ರ್ ದಿನದಂದು ಈದ್ ಉಪಹಾರ ಕಾರ್ಯಕ್ರಮವನ್ನೂ ಏರ್ಪಡಿಸಲಾಗಿತ್ತು.

## ■ ಗುಲ್ಬರ್ಗಾ: ಬಡ ಕುಟುಂಬಗಳಿಗೆ ಈದ್‌ಕಿಟ್ ವಿತರಣೆ

ಗುಲ್ಬರ್ಗಾ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಗುಲ್ಬರ್ಗಾ ಜಿಲ್ಲಾ ಘಟಕದ ವತಿಯಿಂದ ಜಿಲ್ಲೆಯ ಹಲವೆಡೆಗಳಲ್ಲಿ ಬಡ ಕುಟುಂಬಗಳಿಗೆ ಈದ್ ಕಿಟ್ ವಿತರಿಸಲಾಯಿತು.

ಜಿಲ್ಲೆಯಲ್ಲಿ 627 ಕುಟುಂಬಗಳಿಗೆ ಕಿಟ್‌ಗಳನ್ನು ವಿತರಿಸಲಾಗಿದೆಯೆಂದು ಜಿಲ್ಲಾಧ್ಯಕ್ಷ ಶಹೀದ್ ನಾಸೀರ್ ತಿಳಿಸಿದ್ದಾರೆ. ಶಹಬಾದ್ ನಗರ, ಜವಾರ್ಗಿ ನಗರ, ಕಾದ್ರಿ ಚೌಕ್, ಜಿಲ್ಲಾ ಕಚೇರಿ ಮುಂಭಾಗದಲ್ಲಿ ಹಾಗೂ ಜಿಲ್ಲೆಯ ಇನ್ನಿತರ ಕಡೆಗಳಲ್ಲಿ ವಿತರಣಾ ಕಾರ್ಯಕ್ರಮಗಳನ್ನು ನಡೆಸಲಾಯಿತು.




ಶಿವಮೊಗ್ಗ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಶಿವಮೊಗ್ಗ ಹಾಗೂ ಚಿಕ್ಕಮಗಳೂರಿನಲ್ಲಿ ಈದ್ ಉಲ್ ಫಿತ್ರ್‌ನ ಮುನ್ನಾ ದಿನದಂದು ಈದ್ ಕಿಟ್‌ಗಳನ್ನು ವಿತರಿಸಲಾಯಿತು.



ಹಳೆಯಂಗಡಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಹಳೆಯಂಗಡಿ ಘಟಕದ ವತಿಯಿಂದ ಇಂದಿರಾನಗರ, ಬೊಳ್ಳೂರು, ಜಾಮಿಯಾ ಮೊಹಲ್ಲಾ ತೋಕೂರಿನ ಅರ್ಹ ಬಡ ಕುಟುಂಬಗಳಿಗೆ ಈದುಲ್ ಫಿತ್ರ್ ಹಬ್ಬದಂದು ಈದ್ ಕಿಟ್ ವಿತರಿಸಲಾಯಿತು.

70 ಕುಟುಂಬಗಳಿಗೆ ಈದ್ ಕಿಟ್ ವಿತರಿಸಲಾಯಿತು. ಇದಕ್ಕೂ ಮುನ್ನ ಬೊಳ್ಳೂರು ಖತೀಬರಾದ ಅಲ್‌ಹಾಜ್ ಅಝ್‌ಹರ್ ಫೈಝಿ ಈ ಈದ್ ಕಿಟ್ ವಿತರಣೆಗೆ ಚಾಲನೆ ನೀಡಿದರು. ಈ ಸಂದರ್ಭ ಬೊಳ್ಳೂರು ಜುಮಾ ಮಸೀದಿಯ ಕಾರ್ಯದರ್ಶಿ ಹಾಜಿ ಅಬ್ದುಲ್ ಖಾದರ್ ಉಪಸ್ಥಿತರಿದ್ದರು.

ಯಾದಗಿರಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಯಾದಗಿರಿ ಜಿಲ್ಲಾ ಘಟಕದ ವತಿಯಿಂದ ಜಿಲ್ಲೆಯ ಹಲವೆಡೆಗಳಲ್ಲಿ ಈದ್ ಉಲ್ ಫಿತ್ರ್‌ನ ಮುನ್ನಾ ದಿನದಂದು ಈದ್ ಕಿಟ್‌ಗಳನ್ನು ವಿತರಿಸಲಾಯಿತು.




## ■ಬಾಬರಿ ಮಸ್ಜಿದ್ ಪ್ರಕರಣ: ಸುಪ್ರೀಂ ಕೋರ್ಟ್‌ಗೆ ಪಾಪ್ಯುಲರ್ ಫ್ರಂಟ್ ಮೇಲ್ಮನವಿ

ದೆಹಲಿ: ಬಾಬರಿ ಮಸ್ಜಿದ್‌ನ್ನು ಮೂರು ಭಾಗವಾಗಿ ವಿಭಾಗಿಸಿ ಮೂರನೆ ಎರಡು ಭಾಗವನ್ನು ಹಿಂದೂಗಳಿಗೆ ಮತ್ತು ಒಂದು ಭಾಗವನ್ನು ಮುಸ್ಲಿಮರಿಗೆ ವರ್ಗೀಕರಿಸಿದ ಅಲಹಾಬಾದ್ ಹೈಕೋರ್ಟ್‌ನ ತೀರ್ಪನ್ನು ಪ್ರಶ್ನಿಸಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿದೆ.

## ■ಕೋಲಾರದಲ್ಲಿ ಈದ್ ಕಿಟ್ ವಿತರಣೆ



ಕೋಲಾರ (ಕರ್ನಾಟಕ): ಈದ್ ಉಲ್ ಫಿತ್ರ್ ಹಬ್ಬದ ಪ್ರಯುಕ್ತ ಜಿಲ್ಲೆಯ ಹಲವೆಡೆ ಈದ್ ಕಿಟ್ ವಿತರಣಾ ಕಾರ್ಯಕ್ರಮಗಳನ್ನು ನಡೆಸಲಾಯಿತು.

ಕೋಲಾರ, ಮುಲ್ಬಾಗಲ್, ಮಲೂರ್, ಸಿದ್ಲಘಟ್ಟ, ಕ್ಯಾಲೂರ್, ವಿಜಯ್‌ಪುರ, ಜಂಗಮ್‌ಕೊಟ್ಟೆ ಮತ್ತು ಇತರ ಕಡೆಗಳಲ್ಲಿ ಈದ್ ಕಿಟ್‌ಗಳನ್ನು ವಿತರಿಸಲಾಯಿತು.

## ■ದೆಹಲಿ ಸ್ಫೋಟ : ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಖಂಡನೆ

ಹೊಸದಿಲ್ಲಿ: ಹಲವು ಅಮಾಯಕರ ಸಾವು ಹಾಗೂ ನೋವಿಗೆ ಕಾರಣವಾದ ದೆಹಲಿಯ ಕೋರ್ಟ್ ಬಳಿ ನಡೆದ ಸ್ಫೋಟವನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಚೆಯರ್‌ಮ್ಯಾನ್ ಇ.ಎಂ.ಅಬ್ದುರ್ರಹ್ಮಾನ್ ತೀವ್ರವಾಗಿ ಖಂಡಿಸಿದ್ದಾರೆ. ಕೇಂದ್ರ ಮತ್ತು ದೆಹಲಿ ರಾಜ್ಯ ಸರಕಾರಗಳು ಈ ಭೀಕರ ಸ್ಫೋಟದ ಹಿಂದಿರುವ ನೈಜ ಅಪರಾಧಿಗಳನ್ನು ಪತ್ತೆಹಚ್ಚಲು ತ್ವರಿತಗತಿಯ ಹೆಜ್ಜೆಗಳನ್ನಿಡಬೇಕೆಂದು ಅವರು ಆಗ್ರಹಿಸಿದ್ದಾರೆ.

ಪೊಲೀಸ್ ಮತ್ತು ಗುಪ್ತಚರ ಇಲಾಖೆಗಳು ಸ್ಫೋಟದ ಹಿಂದಿರುವ ಸೂತ್ರಧಾರಿಗಳನ್ನು ಕಂಡುಹಿಡಿಯಲು ಪ್ರಯತ್ನಿಸಬೇಕು ಮತ್ತು ಅಮಾಯಕರನ್ನು ಗುರಿಪಡಿಸಲಾಗುವುದಿಲ್ಲವೆಂಬುದನ್ನು ಖಚಿತಪಡಿಸಬೇಕು.

ಅನಗತ್ಯ ಊಹಾಪೋಹಗಳು ತನಿಖೆಯ ದಾರಿ ತಪ್ಪಿಸಲು ಮತ್ತು ಅಮಾಯಕರು ಬಲಿಪಶುಗಳಾಗಲು ಕಾರಣವಾಗಲಿದ್ದು, ಮಾಧ್ಯಮಗಳು ಊಹಾಪೋಹಗಳನ್ನು ಸೃಷ್ಟಿಸುವುದರಿಂದ ದೂರವಿರಬೇಕು. ಇಂತಹ ಘಟನೆಯ ವೇಳೆ ದೇಶದ ಎಲ್ಲಾ ಪೌರರು ಒಂದಾಗಿ ನಿಂತು ದೇಶದ ಏಕತೆಯನ್ನು ತೋರಿಸಬೇಕು ಎಂದು ಅವರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

## ■ಬಂಟ್ವಾಳ: 646 ಕುಟುಂಬಗಳಿಗೆ ಈದ್ ಕಿಟ್

ಬಂಟ್ವಾಳ: ಈದ್-ಉಲ್-ಫಿತ್ರ್ ಹಬ್ಬದ ಮುನ್ನಾ ದಿನದಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಬಂಟ್ವಾಳ ಜಿಲ್ಲಾ ಘಟಕದ ವತಿಯಿಂದ ಹಲವೆಡೆ ಈದ್ ಕಿಟ್‌ಗಳನ್ನು ವಿತರಿಸಲಾಯಿತು. ಜಿಲ್ಲೆಯಲ್ಲಿ ಒಟ್ಟು 1,10,707 ರೂಪಾಯಿ ವೆಚ್ಚದೊಂದಿಗೆ 646 ಬಡ ಕುಟುಂಬಗಳಿಗೆ ಕಿಟ್‌ಗಳನ್ನು ವಿತರಿಸಲಾಯಿತು.

ಸಂಘಟನೆಯ ಕಾರ್ಯಕರ್ತರು ಬಿ.ಸಿ.ರೋಡ್, ಬಂಟ್ವಾಳ, ಬೆಳ್ತಂಗಡಿ, ಮೊಡಂತ್ಯಾರು, ವಿಟ್ಲ ಡಿವಿಶನ್‌ಗಳಲ್ಲಿ ಬಡ ಕುಟುಂಬಗಳಿಗೆ ಕಿಟ್‌ಗಳನ್ನು ವಿತರಿಸಿದರು. ಬಡತನದ ಕಾರಣದಿಂದಾಗಿ ಯಾವುದೇ ಕುಟುಂಬವು ಈದ್ ಹಬ್ಬವನ್ನು ಆಚರಿಸದೆ ಉಳಿಯಬಾರದು ಎಂಬ ಕಾರಣದಿಂದ ಸಂಘಟನೆಯು ಈದ್ ಉಲ್ ಫಿತ್ರ್ ಸಂದರ್ಭದಲ್ಲಿ ರಾಷ್ಟ್ರಾದ್ಯಂತ ಇಂತಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ.

## ■ಮುಲ್ಕಿಯಲ್ಲಿ ಇಫ್ತಾರ್ ಕೂಟ



ಮಂಗಳೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಇತ್ತೀಚೆಗೆ ಮುಲ್ಕಿಯಲ್ಲಿ ಇಫ್ತಾರ್ ಕೂಟವನ್ನು ಏರ್ಪಡಿಸಲಾಗಿತ್ತು.

ಎಸ್‌ಡಿಪಿಐ ರಾಜ್ಯ ಸಮಿತಿ ಸದಸ್ಯ ಅನ್ವರ್ ಸಾದಾತ್ ಮತ್ತು ಪಾಪ್ಯುಲರ್ ಫ್ರಂಟ್ ಮುಖಂಡ ಅತಾವುಲ್ಲಾ ಜೋಕಟ್ಟೆ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಮಂಗಳೂರು: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಈದ್ ಉಲ್ ಫಿತ್ರ್‌ನ ಅಂಗವಾಗಿ ಮಲಾರ್‌ನಲ್ಲಿ ಬಡ ಕುಟುಂಬಗಳಿಗೆ ಈದ್ ಕಿಟ್‌ಗಳನ್ನು ವಿತರಿಸಲಾಯಿತು.




ಬೆಳಗಾವಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಈದ್ ಉಲ್ ಫಿತ್ರ್‌ನ ಪ್ರಯುಕ್ತ ಈದ್ ಕಿಟ್‌ಗಳನ್ನು ವಿತರಿಸಲಾಯಿತು.

## ■ಬೆಳ್ತಂಗಡಿ: ಪಾಪ್ಯುಲರ್ ಫ್ರಂಟ್‌ನಿಂದ ಬಡಕುಟುಂಬಕ್ಕೆ ನೆರವು



ಬೆಳ್ತಂಗಡಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ, ಬೆಳ್ತಂಗಡಿ ವಲಯ ಇಲ್ಲಿನ ಪದ್ಮುಂಜ ಎಂಬಲ್ಲಿ ಬಡ ಕುಟುಂಬವೊಂದಕ್ಕೆ ಹಣಕಾಸಿನ ನೆರವು ನೀಡಿದೆ.

ಜಯಕಿರಣ ಮತ್ತು ಸುದ್ದಿಬಿಡುಗಡೆ ಪತ್ರಿಕೆಗಳಲ್ಲಿ ಪ್ರಕಟವಾದ ವರದಿಯೊಂದಕ್ಕೆ ಸ್ಪಂದಿಸಿದ ಪಾಪ್ಯುಲರ್ ಫ್ರಂಟ್ ವಿಧವೆ ಅವ್ವಮ್ಮರವರ ಕುಟುಂಬಕ್ಕೆ 25,000 ರೂಪಾಯಿ ನೆರವು ನೀಡಿದೆ. ಈ ಸಂದರ್ಭದಲ್ಲಿ ಪಾಪ್ಯುಲರ್ ಫ್ರಂಟ್ ಮುಖಂಡರಾದ ಹೈದರ್ ನೀರ್‌ಸಾಲ್, ಉಸ್ಮಾನ್ ವೇಣೂರು, ಅಕ್ಬರ್ ಬೆಳ್ತಂಗಡಿ ಉಪಸ್ಥಿತರಿದ್ದರು.

ಅವಮ್ಮ ಮಾನಸಿಕ ರೋಗದಿಂದ ಬಳಲುತ್ತಿದ್ದು, ಎಂಟು ಮಂದಿ ಮದುವೆ ವಯಸ್ಸಿನ ಹೆಣ್ಮಕ್ಕಳಿದ್ದಾರೆ.



**ಪೂಂಜಾಲಕಟ್ಟೆ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಪೂಂಜಾಲಕಟ್ಟೆ ಘಟಕಾಧ್ಯಕ್ಷ ವತಿಯಿಂದ ಇತ್ತೀಚಿಗೆ ಈದ್ ಕಿಟ್ ವಿತರಿಸಲಾಯಿತು. ಪೂಂಜಾಲಕಟ್ಟೆ ಬದ್ರಿಯಾ ಜುಮಾ ಮಸೀದಿ ಖತೀಬ್ ಅಶ್ರಫ್ ಫೈಝಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.**

**ಈ ಸಂದರ್ಭದಲ್ಲಿ ಪಾಪ್ಯುಲರ್ ಫ್ರಂಟ್ ಪೂಂಜಾಲಕಟ್ಟೆ ಘಟಕಾಧ್ಯಕ್ಷ ಅಶ್ಫಕ್ ಎಂ., ಕಾರ್ಯದರ್ಶಿ ಲತೀಫ್ ಪೂಂಜಾಲಕಟ್ಟೆ, ರಶೀದ್, ಅಬ್ದುಲ್ ಹಮೀದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.**

## ■ಇಂಫೋರ್ಮೇಷನ್ ಸೆಂಟರ್ ವತಿಯಿಂದ ಸ್ನೇಹ ಮಿಲನ

ಮಂಗಳೂರು: ಕ್ರಿಯೇಟಿವ್ ಫೌಂಡೇಶನ್ ವತಿಯಿಂದ ನಡೆಸಲ್ಪಡುತ್ತಿರುವ ಇಂಫೋರ್ಮೇಷನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್ 'ಸಾಮಾಜಿಕ ಕಾರ್ಯಕರ್ತರ ಸ್ನೇಹ ಮಿಲನ' ಕಾರ್ಯಕ್ರಮವನ್ನು ಮಂಗಳೂರಿನ ಎಸ್‌ಡಿಪಿಐ ಕಚೇರಿಯಲ್ಲಿ ದಿ.7-9-2011ರಂದು ಆಯೋಜಿಸಿತ್ತು.

ಕ್ರಿಯೇಟಿವ್ ಫೌಂಡಶನ್‌ನ ಅಧ್ಯಕ್ಷ ಅನ್ವರ್ ಸಾದಾತ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಂಸ್ಥೆಯ ವ್ಯವಸ್ಥಾಪಕ ಅಕ್ಬರ್ ಅಲಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು.




ವೇದಿಕೆಯಲ್ಲಿ ಇಂಫೋರ್ಮೇಷನ್ ಸೆಂಟರ್‌ನ ಪ್ರಧಾನ ಕಾರ್ಯದರ್ಶಿ ಎ.ಎಂ. ಅಥಾವುಲ್ಲಾ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಕರ್ನಾಟಕ ಘಟಕದ ಕಾರ್ಯದರ್ಶಿ ಶರೀಫ್ ಕೊಡಾಜೆ, ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್‌ನ ಸದಸ್ಯ ಜಾಫರ್ ಫೈಝಿ, ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ದ.ಕ.ಜಿಲ್ಲಾಧ್ಯಕ್ಷ ಜಲೀಲ್ ಕೃಷ್ಣಾಪುರ, ನ್ಯಾಷನಲ್ ವುಮೆನ್ಸ್ ಫ್ರಂಟ್‌ನ ಶಾಹಿದಾ ತಸ್ನೀಂ, ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾದ ತುಫೈಲ್ ಮೊದಲಾದವರು ಉಪಸ್ಥಿತರಿದ್ದರು.

ಇದೇ ವೇಳೆ ಸಾಮಾಜಿಕ ಕಾರ್ಯಕರ್ತರಾಗಿ ಸಕ್ರಿಯರಾಗಿ ಕಾರ್ಯನಿರ್ವಹಿಸುತ್ತಿರುವ ಇಲ್ಯಾಸ್, ಇರ್ಷಾದ್, ಸಫಾರುಲ್‌ರನ್ನು ಸಂಸ್ಥೆಯ ವತಿಯಿಂದ ಸನ್ಮಾನಿಸಲಾಯಿತು.

## ಎನ್‌ಡಬ್ಲ್ಯೂಎಫ್‌ನಿಂದ ಈದ್ ಕಿಟ್ ವಿತರಣೆ

**ಬಜಪೆ: ನ್ಯಾಷನಲ್ ವುಮೆನ್ಸ್ ಫ್ರಂಟ್ ವತಿಯಿಂದ ಬಜಪೆಯಲ್ಲಿ ಈದ್ ಉಲ್ ಫಿತ್ರ್‌ನ ಅಂಗವಾಗಿ ಅರ್ಹ ಬಡ ಫಲಾನುಭವಿನಗಳಿಗೆ ಈದ್ ಕಿಟ್‌ಗಳನ್ನು ವಿತರಿಸಲಾಯಿತು.**

**ಈ ಸಂದರ್ಭ ಬಜಪೆ ವಲಯಾಧ್ಯಕ್ಷೆ ಆತಿಕಾ, ಕಾರ್ಯದರ್ಶಿ ಸಾರಿಕಾ ಹಾಜರಿದ್ದರು.**




ಉಪ್ಪಿನಂಗಡಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಉಪ್ಪಿನಂಗಡಿಯಲ್ಲಿ ಬಡ ಕುಟುಂಬಗಳಿಗೆ ಈದ್ ಕಿಟ್‌ಗಳನ್ನು ವಿತರಿಸಲಾಯಿತು.




ಮುಲ್ಕಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ವತಿಯಿಂದ ಮುಲ್ಕಿಯಲ್ಲಿ ಈದ್ ಉಲ್ ಫಿತ್ರ್‌ನ ಅಂಗವಾಗಿ ಈದ್ ಕಿಟ್‌ಗಳನ್ನು ವಿತರಿಸಲಾಯಿತು.



ಬಜಪೆ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಬಟ್ರಕೆರೆ-ಬಜಪೆ ವಲಯದ ವತಿಯಿಂದ ಈದ್ ಉಲ್ ಫಿತ್ರ್‌ನ ಅಂಗವಾಗಿ ಈದ್ ಕಿಟ್‌ಗಳನ್ನು ವಿತರಿಸಲಾಯಿತು.

## ■ ಐಎಫ್‌ಎಫ್‌ನಿಂದ 'ಈದ್ ಮಿಲಾನ್'

ತಬೂಕ್: ಇಂಡಿಯಾ ಫ್ರೆಟರ್ನಿಟಿ ಫಾರಮ್, ತಬೂಕ್ ವತಿಯಿಂದ ಇಸ್ತಿರಾ ಮದೀನಾ ಆವರಣದಲ್ಲಿ ಆಗಸ್ಟ್ 30ರ ರಾತ್ರಿ ಈದ್ ಮಿಲಾನ್ ಕಾರ್ಯಕ್ರಮ ನಡೆಯಿತು.



ಮಾಸ್ಟರ್ ನಸೀಲುಲ್ಲಾರವರು ಕುರ್‌ಆನ್ ಪಠಿಸುವುದರೊಂದಿಗೆ ಕಾರ್ಯಕ್ರಮವು ಆರಂಭವಾಯಿತು. ಕೆಎಂಸಿಸಿ ತಬೂಕ್‌ನ ಅಧ್ಯಕ್ಷ ಅಬ್ದುಲ್ ರಹ್ಮಾನ್ ದಾರಿಮಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು.

ಐಎಫ್‌ಎಫ್ ಕರ್ನಾಟಕದ ಮದೀನಾ ವಲಯದ ಅಧ್ಯಕ್ಷ ನದೀಮ್ ಹಳೆಯಂಗಡಿ, ಐಎಫ್‌ಎಫ್ ತಬೂಕ್‌ನ ಕರ್ನಾಟಕ ವಿಭಾಗದ ಸಂಯೋಜಕ ಮಜೀದ್ ಕನ್ನಂಗಾರ್, ದಕ್ಷಿಣ ಕನ್ನಡ ಸುನ್ನಿ ಸೆಂಟರ್‌ನ ಕಾರ್ಯದರ್ಶಿ ಮುಸ್ತಫಾ ಮುಂಚೂರ್, ಐಎಫ್‌ಎಫ್-ಸಿಸಿಡಬ್ಲ್ಯು ಪ್ರತಿನಿಧಿ ಮುನೀರ್ ಅಬ್ದುಲ್ ಮೂಡಬಿದ್ರೆ, ಐಎಫ್‌ಎಫ್ ಟೌನ್ ಬ್ರಾಂಚ್‌ನ ಅಧ್ಯಕ್ಷ ಸೀಲಮ್ ಕಡಂಬು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಫಯಾಝ್ ಜೋಕಟ್ಟೆ ಸ್ವಾಗತಿಸಿ, ಸಮದ್ ಬಜ್ಪೆ ವಂದಿಸಿದರು. ನವಾಝ್ ಸುರತ್ಕಲ್ ಕಾರ್ಯಕ್ರಮ ನಿರೂಪಿಸಿದರು.

## ಮಯ್ಯತ್ ನಮಾಝ್‌ಗಾಗಿ ವಿನಂತಿ

ಮಾಡನ್ನೂರು- ಕಾವು ನಿವಾಸಿ ಸಜ್ಜನಿಕೆಯ ವ್ಯಕ್ತಿತ್ವ ಹೊಂದಿದ್ದ ನಮ್ಮ ತಂದೆಯವರಾದ ಮಮ್ಮುಂಞಿ ಹಾಜಿ ಅವರು ದಿನಾಂಕ 8-9-2011ರಂದು ನಿಧನರಾಗಿರುತ್ತಾರೆ. ಅವರ ಹೆಸರಲ್ಲಿ ಮಯ್ಯತ್ ನಮಾಝ್ ನಿರ್ವಹಿಸಿ ಮಗ್ಫಿರತ್‌ಗಾಗಿ ಪ್ರಾರ್ಥಿಸುವಂತೆ ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

▫ ಮಕ್ಕಳು ಮತ್ತು ಕುಟುಂಬಸ್ಥರು ▫

# ಸಹಜ ಸ್ಥಿತಿಗೆ ಮೊರಾದಾಬಾದ್...

## ಗಲಭೆ ಸಂದರ್ಭ ಮೂಕ ಪ್ರೇಕ್ಷಕರಾಗಿದ್ದ ಪೊಲೀಸರು: ಜನರ ಆರೋಪ

ಮೊರಾದಾಬಾದ್ (ಉ.ಪ್ರ): ಇತ್ತೀಚೆಗೆ ನಡೆದ ಗಲಭೆಯಿಂದ ಮೊರಾದಾಬಾದ್ ಚೇತರಿಸಿಕೊಂಡಿದೆ.

ಕನ್ವಾರಿಯಾ (ಶಿವನ ಭಕ್ತರು)ಗಳು ಆಗಸ್ಟ್ 7ರಂದು ತಮ್ಮ ವಾರ್ಷಿಕ ರ್‍ಯಾಲಿಯನ್ನು ನಡೆಸುತ್ತಿರುವಾಗ ಈ ಗಲಭೆ ಆರಂಭವಾಗಿತ್ತು. ರ್‍ಯಾಲಿಗಾಗಿ ಯಾವಾಗಲೂ ಬಳಸುತ್ತಿದ್ದ ಮಾರ್ಗವನ್ನು ತ್ಯಜಿಸಿ ಕನ್ವಾರಿಯಾಗಳು ಈ ಬಾರಿ ಮುಸ್ಲಿಮ್ ಬಾಹುಳ್ಯವಿರುವ ಪ್ರದೇಶವನ್ನು ಆಯ್ಕೆ ಮಾಡಿಕೊಂಡಿದ್ದರು. ಈ ದಾರಿಯಲ್ಲಿ ಮೆರವಣಿಗೆ ಹೋಗದಂತೆ ಪೊಲೀಸರು ತಡೆದಾಗ ಕನ್ವಾರಿಯಾಗಳು ಮತ್ತು ಪೊಲೀಸರ ಮಧ್ಯೆ ಮೊದಲು ಸಂಘರ್ಷ ಆರಂಭವಾಗಿತ್ತು. ಗಲಭೆಯು ಕೂಡಲೇ ನಗರದ ಹಲವು ಪ್ರದೇಶಗಳಿಗೆ ಹಬ್ಬಿತು. ಆದರೆ ಅದು ಅಷ್ಟೇನೂ ತೀವ್ರವಾಗಿರಲಿಲ್ಲ.

ಆದರೆ ಆಗಸ್ಟ್ 9ರ ಮಂಗಳವಾರದಂದು ಕೆಲವು ಕನ್ವಾರಿಯಾಗಳು ಅಥವಾ ಅವರ ವೇಷದಲ್ಲಿದ್ದ ಬಿಜೆಪಿ ಮತ್ತು ಶಿವಸೇನೆಯ ದುಷ್ಕರ್ಮಿಗಳು ಕರ್ಬಲಾ ಎಂಬ ಹೆಸರಿನ ಮಸೀದಿಯೊಂದಕ್ಕೆ ಗುಂಡೆಸೆದಾಗ ಗಲಭೆಯು ತೀವ್ರತೆಯನ್ನು ಪಡೆದಿತ್ತು. ಈ ಸಂದರ್ಭದಲ್ಲಿ ಮಸೀದಿಯಲ್ಲಿ ರಂಝಾನ್‌ನ ವಿಶೇಷ ಪ್ರಾರ್ಥನೆಯಾದ ತರಾವೀಹ್ ನಡೆಯುತ್ತಿತ್ತು. ವರದಿಗಳ ಪ್ರಕಾರ ಮಸೀದಿಯಲ್ಲಿ ಮೂವರು ಗಾಯಗೊಂಡಿದ್ದರು.

ಪೊಲೀಸರ ಪ್ರಕಾರ 12 ಮಂದಿ ಈ ಗಲಭೆಯಲ್ಲಿ ಗಾಯಗೊಂಡಿದ್ದಾರೆ. ಆದರೆ ಖಚಿತವಾಗದ ವರದಿಗಳ ಪ್ರಕಾರ ಸುಮಾರು 35ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಗಲಭೆಯು ನಡೆಯುವ ಸಂದರ್ಭಗಳಲ್ಲಿ ಪೊಲೀಸರು ಕೆಲವೆಡೆ ಮೂಕ ಪ್ರೇಕ್ಷಕರಾಗಿ ನಿಂತಿದ್ದರು ಎಂಬ ದೂರುಗಳು ಜನರ ಕಡೆಯಿಂದ ಬಂದಿದೆ.



ಮೊರಾದಾಬಾದ್‌ನಲ್ಲಿ ನಡೆದ ಗಲಭೆಯ ಸಂದರ್ಭ ಭೀತಿಗೊಳಗಾಗಿರುವ ಜನರು.

ಆಗಸ್ಟ್ 9ರಂದು ಗಲಭೆಕೋರರು ಮಸೀದಿಯ ಮೇಲೆ ಗುಂಡಿನ ದಾಳಿ ನಡೆಸಿದಾಗ ಕೆಲವು ಗಲಭೆ ಪೀಡಿತ ಪ್ರದೇಶಗಳಲ್ಲಿ ಕರ್ಫ್ಯೂ ಹೇರಲಾಗಿತ್ತು. ಪೊಲೀಸರು ಕೆಲವು ಪ್ರದೇಶಗಳನ್ನು ಸುತ್ತುವರಿದು ಆರೋಪಿಗಳನ್ನು ಹುಡುಕುವ ಕಾರ್ಯಾಚರಣೆ ಆರಂಭಿಸಿದರು. ಈ ಸಂದರ್ಭದಲ್ಲಿ ಮನೆಯೊಂದರಿಂದ ಪೆಟ್ರೋಲ್ ಮತ್ತು ಆ್ಯಸಿಡ್ ಬಾಟಲಿಗಳನ್ನು ವಶಪಡಿಸಿಕೊಳ್ಳಲಾಗಿದ್ದು, ಆರು ಮಂದಿಯನ್ನು ಬಂಧಿಸಲಾಗಿದೆ. ಹಲವು ಕಡೆಗಳಲ್ಲಿ ಕಲ್ಲು ತೂರಾಟ ಪ್ರಕರಣಗಳು ನಡೆದಿತ್ತು.

ಆಗಸ್ಟ್ 9ರಂದು ಸರ್ವದಲಿಯಾ ಹಿಂದೂ ಸಂಘಟನೆಯೊಂದು ಶಿವಪುರದಲ್ಲಿರುವ ಶಿವಮಂದಿರದಲ್ಲಿ ಸಭೆ ನಡೆಸಿದ ಬಳಿಕ ಪರಿಸ್ಥಿತಿಯು ಇನ್ನೂ ಹದಗೆಟ್ಟಿತ್ತು ಎಂದು ವರದಿಗಳು ತಿಳಿಸಿವೆ.

ಪೊಲೀಸರ ಪ್ರಕಾರ ಕೆಲವು ಪೊಲೀಸ್ ಅಧಿಕಾರಿಗಳೂ ಗಾಯಗೊಂಡಿದ್ದಾರೆ. ಸುಮಾರು 30 ಮನೆಗಳನ್ನು ಬೆಂಕಿಗಾಹುತಿ ಮಾಡಲಾಗಿದೆ ವರದಿಯೊಂದು ತಿಳಿಸಿದೆ.

## ■ ಪ.ಬಂಗಾಳದಲ್ಲಿ ಸಹಾಯಕ ಅಭ್ಯರ್ಥಿಗಳ ಆಯ್ಕೆ: ಮುಸ್ಲಿಮರನ್ನು ತಿರಸ್ಕರಿಸಿದ ಸರಕಾರ

ಹೊಸದಿಲ್ಲಿ: ಪಶ್ಚಿಮ ಬಂಗಾಳ ಸರಕಾರವು ಇತ್ತೀಚೆಗೆ ವಿವಿಧ ಇಲಾಖೆಗಳ ಕೆಳದರ್ಜೆ ಸಹಾಯಕರ ಹುದ್ದೆಗೆ 255 ಅಭ್ಯರ್ಥಿಗಳ ಹೆಸರನ್ನು ಶಿಫಾರಸು ಮಾಡಿದೆ. ಆದರೆ 255 ಮಂದಿಯಲ್ಲಿ ಕೇವಲ 5 ಮಂದಿ ಮುಸ್ಲಿಮರಿರುವುದು ಆಘಾತಕಾರಿಯಾಗಿದೆ.

255 ಮಂದಿಯಲ್ಲಿ ಐದು ಮಂದಿ ಎಂದರೆ ಕನಿಷ್ಠ 2 ಶೇಕಡವೂ ಆಗಲಾರದು. ಅದೇ ವೇಳೆ, ರಾಜ್ಯದ ಮುಸ್ಲಿಮರ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ.27ರಷ್ಟಿದೆ. ಪಶ್ಚಿಮ ಬಂಗಾಳದ ಸರಕಾರಿ ಹುದ್ದೆಗಳಲ್ಲಿ ಮುಸ್ಲಿಮರ ಪ್ರಮಾಣವು ಅತ್ಯಂತ ಕಡಿಮೆಯಿರುವುದನ್ನು ಈಗಾಗಲೇ ಸಾಚಾರ್ ಸಮಿತಿ ವರದಿಯು ತಿಳಿಸಿತ್ತು.

ಇನ್ನೂ ಆಘಾತಕಾರಿ ವಿಷಯವೆಂದರೆ ಮದ್ರಸಾ ವಿದ್ಯಾಭ್ಯಾಸ, ಅಲ್ಪಸಂಖ್ಯಾತರ ಅಭಿವೃದ್ಧಿ ಮತ್ತು ಕಲ್ಯಾಣದಂತಹ ಇಲಾಖೆಗಳಿಗೆ ಶಿಫಾರಸು ಮಾಡಲಾದ ಎಲ್ಲಾ 7 ಮಂದಿಯೂ ಮುಸ್ಲಿಮೇತರರಾಗಿದ್ದಾರೆ.

## ■ ಸಾಚಾರ್ ವರದಿಯ ಅನುಷ್ಠಾನಕ್ಕೆ ಸರಕಾರದ ಇಚ್ಛಾ ಶಕ್ತಿಯ ಕೊರತೆ:

### ಸಾಚರ್ ಸಮಿತಿ ಸದಸ್ಯರ ಆತಂಕ

ಹೊಸದಿಲ್ಲಿ: ಸರಕಾರದ ಇಚ್ಛಾಶಕ್ತಿಯ ಕೊರತೆಯಿಂದಾಗಿ ಮುಸ್ಲಿಮರ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಾಚಾರ್ ಸಮಿತಿಯು ಮಾಡಿದ ಶಿಫಾರಸುಗಳು ಜಾರಿಯಾಗದಿರಬಹುದು ಎಂದು ಸಾಚಾರ್ ಸಮಿತಿಯ ಸದಸ್ಯರು ಆತಂಕ ವ್ಯಕ್ತಪಡಿಸಿದ್ದಾರೆ.

ಭಾರತದಲ್ಲಿ ಮುಸ್ಲಿಮರ ಹೀನಾಯ ಪರಿಸ್ಥಿತಿಯ ಬಗ್ಗೆ ಸಾಚಾರ್ ಸಮಿತಿಯು ವರದಿಯನ್ನು ಸಲ್ಲಿಸಿ ಸುಮಾರು ಐದು ವರ್ಷಗಳೇ ಕಳೆದಿದೆ. ಆದರೆ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸುವ ನಿಟ್ಟಿನಲ್ಲಿ ಯಾವುದೇ ಮಹತ್ವದ ಕ್ರಮಗಳು ಕೈಗೊಳ್ಳಲಾಗಿಲ್ಲ. 2005ರಲ್ಲಿ ಸಮಿತಿಯನ್ನು ರಚಿಸಿದ್ದಕ್ಕಾಗಿ ಶ್ಲಾಘನೆಗೊಳಗಾದ ಸರಕಾರ ಸಮಿತಿಯ ಪ್ರಮುಖ ಶಿಫಾರಸುಗಳನ್ನು ಜಾರಿಗೊಳಿಸಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ಸಾಚಾರ್ ವರದಿಯನ್ನು ತಯಾರಿಸುವುದರಲ್ಲಿ ಪ್ರಮುಖರಾಗಿದ್ದ ನ್ಯಾಯಮೂರ್ತಿ ರಾಜೀಂದರ್ ಸಾಚಾರ್ ಹೇಳಿದ್ದಾರೆ.

ಅವರ ಪ್ರಕಾರ, ಸಮಾನ ಅವಕಾಶ ಆಯೋಗ ಮತ್ತು ವೈವಿಧ್ಯ ಸೂಚಿಕೆಯನ್ನು ರಚಿಸುವುದು ಸಮಿತಿಯ ಪ್ರಮುಖ ಬೇಡಿಕೆಯಾಗಿತ್ತು. ಮುಸ್ಲಿಮರಿಗೆ ಮಾತ್ರವಲ್ಲ, ಸಮಾಜದ ಇತರ ಹಿಂದುಳಿದ ವರ್ಗಗಳ ಹಲವು ಸಂಸ್ಥೆಗಳಿಗೆ ಯುಜಿಸಿಯಿಂದ ಹೆಚ್ಚು ನಿಧಿ ದೊರೆಯಬೇಕೆಂಬ ನಿಟ್ಟಿನಲ್ಲಿ ಈ ಶಿಫಾರಸು ಮಾಡಲಾಗಿತ್ತು.

## ■ 48ನೆ ಪ್ರಯತ್ನದಲ್ಲಿ ಪ್ರೌಢ ಪರೀಕ್ಷೆಯಲ್ಲಿ ತೇರ್ಗಡೆಯಾದ ಜಬ್ಬಾರ್!

ಫತೇಹ್‌ಪುರ್ (ಉ.ಪ್ರ): 66ರ ಹರೆಯದ ಅಬ್ದುಲ್ ಜಬ್ಬಾರ್ ತನ್ನ 48ನೆ ಪ್ರಯತ್ನದಲ್ಲಿ ಪ್ರೌಢ ಶಾಲಾ ವಿದ್ಯಾಭ್ಯಾಸವನ್ನು ಪೂರ್ತಿಗೊಳಿಸಿದ್ದಾರೆ. ದಯಾನಂದ ಇಂಟರ್ ಕಾಲೇಜ್‌ನ ಪ್ರಾಂಶುಪಾಲರಾದ ಓಂ ಪ್ರಕಾಶ್ ವಾಜಪೇಯಿಯವರು ಇತ್ತೀಚೆಗೆ ಅಬ್ದುಲ್ ಜಬ್ಬಾರ್‌ರಿಗೆ ಅಂಕಪಟ್ಟಿಯನ್ನು ನೀಡಿದ್ದಾರೆ.

ಉತ್ತರ ಪ್ರದೇಶದ ಫತೇಹ್‌ಪುರ ಜಿಲ್ಲೆಯ ದೇಗ್ ಗ್ರಾಮದವರಾದ ಜಬ್ಬಾರ್ 1963ರಲ್ಲಿ ವಿಜ್ಞಾನ ವಿಭಾಗಕ್ಕೆ ರೆಗ್ಯುಲರ್ ವಿದ್ಯಾರ್ಥಿಯಾಗಿ ಮೊದಲ ಬಾರಿಗೆ ನಗರದ ನೆಹರೂ ಇಂಟರ್ ಕಾಲೇಜಿನಿಂದ ಪ್ರೌಢ ಶಾಲಾ ಪರೀಕ್ಷೆಯನ್ನು ಬರೆದಿದ್ದರು. ಆ ವರ್ಷ ಅವರು ಹಿಂದಿಯೊಂದನ್ನು ಬಿಟ್ಟು ಎಲ್ಲಾ ನಾಲ್ಕು ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರು.

ನಂತರ ಅವರು ವಿಜ್ಞಾನವನ್ನು ಕೈಬಿಟ್ಟು ಖಾಸಗಿ ವಿದ್ಯಾರ್ಥಿಯಾಗಿ ಕಲೆ ವಿಷಯವನ್ನು ಆಯ್ದುಕೊಂಡು ಪರೀಕ್ಷೆಯನ್ನು ಬರೆಯಲು ಆರಂಭಿಸಿದರು. ದುರದೃಷ್ಟವಶಾತ್ ಅವರು ನಂತರದ ಎಲ್ಲಾ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗುತ್ತಾ ಬಂದಿದ್ದರು. ಕಳೆದ ವರ್ಷ 2010ರಲ್ಲಿ ಅವರು ಹಿಂದಿ, ಗೃಹ ವಿಜ್ಞಾನ ಮತ್ತು ಕಲೆಯಲ್ಲಿ ತೇರ್ಗಡೆ ಹೊಂದಿದ್ದರು ಮತ್ತು ಇಂಗ್ಲಿಷ್, ವಿಜ್ಞಾನ ಹಾಗೂ ಅಂಕಗಣಿತದಲ್ಲಿ ಅನುತ್ತೀರ್ಣರಾಗಿದ್ದರು. ಈ ಬಾರಿ (2011) ಅವರು ಇಂಗ್ಲಿಷ್, ವಿಜ್ಞಾನ ಮತ್ತು ಅಂಕಗಣಿತಕ್ಕೆ ವಿಷಯದಲ್ಲಿ ಪರೀಕ್ಷೆ ಬರೆದು ತನ್ನ ಪೌಢ ವಿದ್ಯಾಭ್ಯಾಸವನ್ನು ಪೂರೈಸಿದ್ದಾರೆ.

## ■ ಉರ್ದು ಪತ್ರಿಕೆಗಳೊಂದಿಗೆ ಸರಕಾರದ ತಾರತಮ್ಯ



ಹೊಸದಿಲ್ಲಿ: ಅಕ್ರೆಡಿಟೇಶನ್ ಕಮಿಟಿಯು ರಾಜ್ಯಸಭೆಯ ಕಾರ್ಯಕಲಾಪಗಳನ್ನು ದಾಖಲಿಸಲು ಉರ್ದು ಪತ್ರಿಕೆಗಳಿಗೆ ಅನುಮತಿಯನ್ನು ನಿರಾಕರಿಸಲಾಗಿದ್ದು, ಇದು ಉರ್ದು ಪತ್ರಿಕೆಗಳ ವಿರುದ್ಧ ದ್ವಿಮುಖ ನೀತಿಗೆ ಸ್ಪಷ್ಟ ಉದಾಹರಣೆಯಾಗಿದೆ.

ಇತ್ತೀಚೆಗೆ ನಡೆದ ಅಕ್ರೆಡಿಟೇಶನ್ ಕಮಿಟಿಯ ಸಭೆಯೊಂದರಲ್ಲಿ ಭಾರತದ ಇತರ ಭಾಷೆಗಳ ಪತ್ರಿಕೆಗಳ ಪ್ರತಿನಿಧಿಗಳಿಗೆ ರಾಜ್ಯಸಭೆಯ ಕಾರ್ಯಕಲಾಪಗಳನ್ನು ವರದಿ ಮಾಡಲು ಅನುಮತಿಯನ್ನು ನೀಡಲಾಗಿತ್ತು. ಮೇಲ್ಮನೆಯನ್ನು ಪ್ರವೇಶಿಸುವುದಕ್ಕಾಗಿ ಅವರಿಗೆ ಪಾಸ್‌ಗಳನ್ನು ಬಿಡುಗಡೆಗೊಳಿಸಲಾಗಿತ್ತು. ಹಮಾರಾ ಸಮಾಜಂ, ಅಖ್ಬರ್ ಎ ಕಾರವಾನ್ ಮತ್ತು ದಾರ್ ಎ ಜಬೀದ್ ಪತ್ರಿಕೆಗಳು ರಾಜ್ಯಸಭಾ ಕಾರ್ಯಕಲಾಪಗಳ ಬಗ್ಗೆ ವರದಿ ಮಾಡಲು ಅನುಮತಿ ನೀಡಬೇಕೆಂದು ಸಮಿತಿಯನ್ನು ಸಂಪರ್ಕಿಸಿದ್ದರೂ ಅವುಗಳಿಗೆ ಅನುಮತಿ ನಿರಾಕರಿಸಲಾಗಿದೆ.

ಸರಕಾರವು ಉರ್ದು ಪತ್ರಿಕೆಗಳಿಗೆ ಬಾಯಿ ಮಾತಿನ ಭರವಸೆಯನ್ನು ನೀಡಲು ಬಯಸುತ್ತದೆಯೇ ಹೊರತು ಅದನ್ನು ಕಾರ್ಯರೂಪಕ್ಕೆ ತರುವ ಇಚ್ಛೆಯನ್ನು ಹೊಂದಿಲ್ಲ ಎಂಬುದನ್ನು ಸೂಚಿಸುತ್ತದೆ.

## ■ಕಾಶ್ಮೀರದಲ್ಲಿ 38 ಗೋರಿಗಳಲ್ಲಿ 2156 ಅಪರಿಚಿತ ದೇಹಗಳ ಪತ್ತೆ



ಈ ಗೋರಿಗಳು ಯಾರದ್ದು?

ಶ್ರೀನಗರ: ಜಮ್ಮು ಕಾಶ್ಮೀರದಲ್ಲಿ ಹಲವಾರು ಅಪರಿಚಿತ ಗೋರಿಗಳಿವೆಯೆಂಬುದನ್ನು ಮಾನವ ಹಕ್ಕು ಆಯೋಗದ ಅಧಿಕಾರಿಗಳು ಖಚಿತಪಡಿಸಿದ್ದಾರೆ. 1990ರಿಂದ 38 ಕಡೆಗಳಲ್ಲಿ 2156 ಮಂದಿಯ ದೇಹಗಳನ್ನು ದಫನಗೊಳಿಸಲಾಗಿದೆ ಎಂದು ಅಧಿಕೃತ ವರದಿಯು ತಿಳಿಸಿದೆ.

ಜಮ್ಮು ಕಾಶ್ಮೀರದ ರಾಜ್ಯ ಮಾನವ ಹಕ್ಕುಗಳ ಆಯೋಗದ ತನಿಖಾ ವಿಭಾಗದ ಪ್ರಕಾರ, ಈ ಎಲ್ಲಾ ದೇಹಗಳನ್ನು ಪೊಲೀಸರು ಬುಲೆಟ್ ಗಾಯಗಳೊಂದಿಗೆ ಸ್ಥಳೀಯರಿಗೆ ದಫನಕ್ಕಾಗಿ ನೀಡಿದ್ದರು ಮತ್ತು ಅಪರಿಚಿತ ಉಗ್ರರು ಎಂದು ಅವರನ್ನು ಹೇಳಿದ್ದರು.

ರಾಜ್ಯಾದ್ಯಂತ ತನಿಖೆ ನಡೆಯಬೇಕು, ತಪ್ಪಿತಸ್ಥ ಪೊಲೀಸರ ವಿರುದ್ಧ ಎಫ್ಐಆರ್ ದಾಖಲಿಸಬೇಕು, ಗೋರಿಗಳನ್ನು ಅಗೆದು ಡಿಎನ್ಎ ಪರೀಕ್ಷೆಗೊಳಪಡಿಸಬೇಕು ಮತ್ತು ನಾಪತ್ತೆಯಾಗಿರುವವರ ಕುಟುಂಬಗಳ ದೇಹದ ಸ್ಯಾಂಪಲ್‌ಗಳೊಂದಿಗೆ ಹೋಲಿಕೆ ಮಾಡಬೇಕು ಎಂದು ತನಿಖಾ ಸಮಿತಿಯು ಆಗ್ರಹಿಸಿದೆ.

ಬಾರಮುಲ್ಲಾದಲ್ಲಿ ಇಂತಹ 21 ಗೋರಿಗಳು, ಬಂಡೀಪುರದಲ್ಲಿ ಮತ್ತು ಹಂದಾವರದಲ್ಲಿ ತಲಾ ಮೂರು ಹಾಗೂ ಕುಪ್ವಾರದಲ್ಲಿ 11 ಗೋರಿಗಳು ಪತ್ತೆಯಾಗಿವೆ ಎಂದು ತನಿಖೆಯು ಹೇಳಿದೆ. ಬಾರಮುಲ್ಲಾದಲ್ಲಿ 851 ದೇಹಗಳನ್ನು, ಬಂಡೀಪುರದಲ್ಲಿ 14, ಹಂದ್ವಾರದಲ್ಲಿ 14 ಹಾಗೂ ಕುಪ್ವಾರದಲ್ಲಿ 1277 ದೇಹಗಳನ್ನು ಪತ್ತೆ ಹಚ್ಚಿರುವುದಾಗಿ ಸಮಿತಿಯು ತಿಳಿಸಿದೆ.

ತನಿಖೆಯ ವರದಿಯನ್ನು ಕಳೆದ ತಿಂಗಳು ಎಸ್ಎಚ್ಆರ್‌ಸಿಗೆ ಹಸ್ತಾಂತರಿಸಲಾಯಿತು.

## ■ಫಾರ್ಬಸ್‌ಗಂಜ್: ಹಬ್ಬಕ್ಕೆ ಸೆಕ್ಷನ್ 144 ಅಡ್ಡಿ

ಪಾಟ್ನಾ: ಕಳೆದ ಜೂನ್ ತಿಂಗಳಲ್ಲಿ ಪೊಲೀಸರ ದೌರ್ಜನ್ಯದಿಂದಾಗಿ ತೀವ್ರ ಚರ್ಚೆಯಲ್ಲಿದ್ದ ಫಾರ್ಬಸ್‌ಗಂಜ್‌ನಲ್ಲಿ ಈದ್ ಉಲ್ ಫಿತ್ರ್‌ನ್ನು ಆಚರಿಸಲು ಸಾಧ್ಯವಾಗಲಿಲ್ಲ.

ಆಗಸ್ಟ್ 31ರಂದು ಆಚರಿಸಲಾದ ಈದ್ ಉಲ್ ಫಿತ್ರ್ ದಿನದಂದು ಪೊಲೀಸರು ಹೇರಿದ ದಂಡಸಂಹಿತೆ 144ನ್ನು ಈ ಪ್ರದೇಶದ ಮುಸ್ಲಿಮರು ಅನಿರೀಕ್ಷಿತವಾಗಿ ಎದುರಿಸಬೇಕಾಯಿತು. ಜೂನ್ 3ರ ಘಟನೆಯಿಂದ ಇಲ್ಲಿನ ಆಡಳಿತವು ಏಕಾಏಕಿ ಮುನಿಸಿಕೊಂಡಿತ್ತು. ಇದರಿಂದಾಗಿ ಇಲ್ಲಿನ ಮುಸ್ಲಿಮರು ಈದ್ ಪ್ರಾರ್ಥನೆಗೂ ಹೊರ ಬರಲಾರದ ಸ್ಥಿತಿಯಲ್ಲಿದ್ದರು.

ಈದ್‌ಗಾವನ್ನು ಪ್ರವೇಶಿಸುವ ದಾರಿಯನ್ನು ಆರೋ ಸುಂದರರಾವ್ ಕಂಪೆನಿಯವರು ಕಳೆದ ಜೂನ್ 3ರಂದು ತಡೆಹಿಡಿದಿದ್ದರು. ಈ ಸಂದರ್ಭ ಗ್ರಾಮಸ್ಥರು ಪ್ರತಿಭಟನೆಗೆ ಮುಂದಾದಾಗ ಪೊಲೀಸರು ಗುಂಡಿನ ದಾಳಿ ನಡೆಸಿ ಒಂದು ಹಸುಗೂಸು, ಗರ್ಭಿಣಿ ಮಹಿಳೆ ಸೇರಿದಂತೆ ಇಬ್ಬರು ಯುವಕರನ್ನು ಕೊಂದು ಹಾಕಿದ್ದರು. ಪೊಲೀಸರು ನಡೆಸಿದ ಕ್ರೂರ ಕೊಲೆಯಿಂದಾಗಿ ಕೊರಗುತ್ತಿದ್ದ ಈ ಪ್ರದೇಶದ ಜನತೆಗೆ ಇದು ಮೊದಲ ಹಬ್ಬವಾಗಿತ್ತು.

## ■ನ್ಯೂಯಾರ್ಕ್, ಪೆನ್ಸಿಲ್ವಾನಿಯಾದಲ್ಲಿ ತುರ್ತು ಪರಿಸ್ಥಿತಿ ಘೋಷಣೆ




ನ್ಯೂಯಾರ್ಕ್: ಅಮೆರಿಕದ ಅಧ್ಯಕ್ಷ ಬರಾಕ್ ಒಬಾಮಾ ಭೀಕರ ನೆರೆಯಿಂದ ತತ್ತರಿಸಿರುವ ನ್ಯೂಯಾರ್ಕ್ ಮತ್ತು ಪೆನ್ಸಿಲ್ವಾನಿಯಾದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದಾರೆ.

ಐದು ಮಂದಿಯ ಸಾವು ಮತ್ತು ಒಂದು ಲಕ್ಷಕ್ಕೂ ಅಧಿಕ ಮಂದಿ ಮನೆಗಳನ್ನು ತೊರೆಯಬೇಕಾಗಿ ಬಂದ ನಂತರ ಈ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ.

ಜೀವ ಮತ್ತು ಆಸ್ತಿಪಾಸ್ತಿಗಳನ್ನು ರಕ್ಷಿಸುವುದಕ್ಕಾಗಿ ಸಾರ್ವಜನಿಕ ಆರೋಗ್ಯ ಹಾಗೂ ಸುರಕ್ಷತೆಗೆಗಾಗಿ ಸಂಯೋಜಿತ ಪರಿಹಾರ ಕಾಮಗಾರಿಯನ್ನು ಮಾಡಲು ಒಬಾಮಾರ ತುರ್ತು ಪರಿಸ್ಥಿತಿ ಘೋಷಣೆಯು ನೆರವಾಗಲಿದೆ ಎಂದು ವೈಟ್ ಹೌಸ್ ಹೇಳಿದೆ.

## ■ ಇಸ್ಲಾಮೊಫೋಬಿಯ ಹರಡುವ ಅಭಿಯಾನದಲ್ಲಿ ಅಮೆರಿಕನ್ ಸಂಘಟನೆಗಳು




ಕಳೆದ 10 ವರ್ಷಗಳ ಇಸ್ಲಾಮೀಫೋಬಿಯಾವನ್ನು ಹರಡುವ ಅಭಿಯಾನದಲ್ಲಿ ಅಮೆರಿಕಾದ ಏಳು ಸಂಘಟನೆಗಳು ಮತ್ತು ಶ್ರೀಮಂತ ದಾನಿಗಳು ಪಾಲ್ಗೊಂಡಿದ್ದರು ಎಂಬ ಆಘಾತಕಾರಿ ಸುದ್ದಿಯೊಂದು ವರದಿಯಾಗಿದೆ.

ಸೆಂಟರ್ ಫಾರ್ ಅಮೆರಿಕನ್ ಪ್ರೊಗ್ರೆಸ್(ಸಿಎಪಿ) ಬಿಡುಗಡೆ ಮಾಡಿದ 130 ಪುಟಗಳುಳ್ಳ ವರದಿಯಲ್ಲಿ ಇದು ಬಹಿರಂಗವಾಗಿದೆ. 2001ರಿಂದ 2009ರ ನಡುವೆ ಅಮೆರಿಕದಾದ್ಯಂತ ಈ ಕೃತ್ಯಕ್ಕೆ ಕೆಲವೊಬ್ಬರು ವ್ಯಕ್ತಿಗತವಾಗಿ ಮತ್ತು ಸಂಘಟನೆಗಳು 42 ಮಿಲಿಯನ್ ಅಮೆರಿಕನ್ ಡಾಲರ್‌ಗೂ ಹೆಚ್ಚು ನೆರವು ನೀಡಿವೆ.

ಕೆಲವೊಂದು ಸಂದರ್ಭಗಳಲ್ಲಿ ನೆರವು ನೀಡುತ್ತಿರುವ ಸಂಘಟನೆಗಳು ಮತ್ತು ದಾನಿಗಳು ಇಸ್ಲಾಮಿಫೋಬಿಯಾವನ್ನು ಹರಡಲು ತಾವೇ ರೂಪುರೇಶೆ ತಯಾರಿಸಿ ಪ್ರೋತ್ಸಾಹ ನೀಡುತ್ತಿದ್ದವು. ಅವು ತಮಗೆ ಸಾಧ್ಯವಾದಷ್ಟು ದ್ವೇಷ ಮತ್ತು ಭಯವನ್ನು ಹರಡುತ್ತಿದ್ದವು ಎಂದು ವರದಿ ಹೇಳಿದೆ.

ಈ ದಾನಿಗಳು ಮತ್ತು ಸಂಘಟನೆಗಳು ಅಮೆರಿಕಾದಲ್ಲಿರುವ ಬಲಪಂಥೀಯರೊಂದಿಗೆ ಉತ್ತಮ ಬಾಂಧವ್ಯ ಹೊಂದಿವೆ. ಅಮೆರಿಕದಲ್ಲಿರುವ ಯಹೂದಿ ಕುಟುಂಬಗಳ ಸಂಘಟನೆಗಳೂ ಕೂಡ ಇಸ್ರೇಲ್‌ನ ವಸಾಹತುಗಾರ ಗುಂಪುಗಳಿಗೆ ನೆರವು ನೀಡುತ್ತಿವೆ.

ಡೋನರ್ಸ್ ಕ್ಯಾಪಿಟಲ್ ಫಂಡ್, ರಿಚರ್ಡ್ ಮೆಲ್ಲನ್ ಸ್ಕೇಫ್ ಫೌಂಡೇಶನ್, ಲಿಂಡೆ ಆ್ಯಂಡ್ ಹ್ಯಾರಿ ಬ್ರಾಡ್ಲಿ ಫೌಂಡೇಶನ್, ನ್ಯೂಟನ್ ಡಿ.ಆ್ಯಂಡ್ ರೊಚೆಲ್ ಎಫ್ ಬೇಕರ್ ಫೌಂಡೇಶನ್, ಆ್ಯಂಕೊರೇಜ್ ಚಾರಿಟೇಬಲ್ ಫಂಡ್ ಆ್ಯಂಡ್ ವಿಲಿಯಂ ರೋಸನ್‌ವಾಲ್ಡ್ ಫ್ಯಾಮಿಲಿ ಫಂಡ್, ಫಯರ್‌ಬ್ರೂಕ್ ಫೌಂಡೇಶನ್‌ಗಳು ಇಸ್ಲಾಮಿಫೋಬಿಯಾವನ್ನು ಪ್ರೋತ್ಸಾಹಿಸುವ ಇಸ್ಲಾಂ ವಿರೋಧಿ ಪರಿಣಿತರಿಗೆ ನಿಧಿ ಸಂಗ್ರಹಿಸುತ್ತಿವೆ.

## ■ ಈಜಿಪ್ಟ್‌ನಲ್ಲಿ ಮುಂದುವರಿದ ಪ್ರತಿಭಟನೆ

ಕೈರೊ: ದೇಶದಲ್ಲಿ ಸುಧಾರಣೆಗಳು ನಡೆಯಬೇಕೆಂದು ಆಗ್ರಹಿಸಿ ಈಜಿಪ್ಟ್‌ನ ಕೈರೊದ ತಹ್ರೀರ್ ಸ್ಕ್ವೇರ್‌ನಲ್ಲಿ ಪ್ರತಿಭಟನೆಗಳು ಮುಂದುವರಿದಿವೆ. ಪ್ರತಿಭಟನಾಕಾರರು ಹಿಂಸಾ ಕೃತ್ಯದಲ್ಲಿ ತೊಡಗಿದರೆ ಕಠಿಣ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಈಜಿಪ್ಟ್‌ನ ಸೇನಾಡಳಿತವು ಹೇಳಿದೆ.

## ■ 2ನೆ ಗಾಝಾ ನೆರವು ನೌಕೆಗೆ ಭದ್ರತೆ: ಟರ್ಕಿ




ಅಂಕಾರ: ಕಳೆದ ವರ್ಷ ನಡೆದಂತೆ ಗಾಝಾಗೆ ತೆರಳುವ ನೆರವು ನೌಕೆಯ ಮೇಲೆ ಇಸ್ರೇಲ್ ದಾಳಿ ನಡೆಯದು ಎಂದು ಟರ್ಕಿ ಘೋಷಿಸಿದೆ. ಮುಂದಿನ ಗಾಝಾ ನೆರವು ನೌಕೆಗೆ ಜೊತೆಯಾಗಿ ಮೆಡಿಟೇರಿಯನ್‌ನಲ್ಲಿ ಟರ್ಕಿಯು ನೌಕಾ ಭದ್ರತೆ ಹಾಗೂ ಯುದ್ಧ ನೌಕೆಗಳನ್ನು ನಿಯೋಜಿಸಲಿದೆ ಎಂದು ಅದು ಹೇಳಿದೆ.

ಮೆಡಿಟರೇನಿಯನ್‌ನಲ್ಲಿ ಪ್ರಾಕೃತಿಕ ಸಂಪನ್ಮೂಲಗಳನ್ನು ಇಸ್ರೇಲಿ ಆಡಳಿತವು ದುರುಪಯೋಗಪಡಿಸಿಕೊಳ್ಳುವುದನ್ನು ತಡೆಯಲು ಟರ್ಕಿ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಅಲ್ಲಿನ ಪ್ರಧಾನ ಮಂತ್ರಿ ರಸೆಪ್ ತಯ್ಯಿಪ್ ಉರ್ದುಗನ್ ಅಲ್‌ಜಝೀರಾಗೆ ನೀಡಿದ ಸಂದರ್ಶನವೊಂದರಲ್ಲಿ ತಿಳಿಸಿದ್ದಾರೆ.

ಗಾಝಾಗೆ ಮಾನವೀಯ ನೆರವನ್ನು ಹೊತ್ತೊಯ್ಯುವ ಟರ್ಕಿಯ ನೌಕೆಗೆ ರಕ್ಷಣೆಯನ್ನು ಕಲ್ಪಿಸುವ ಅಧಿಕಾರ ನಮಗಿದೆ. ಫ್ರೀಡಂ ಫ್ಲೋಟಿಲ್ಲಾದ ಮೇಲಾದಂತೆ ಮುಂದೆ ನಮ್ಮ ನೌಕೆಗೆ ಆಗಲು ಬಿಡುವುದಿಲ್ಲ ಅವರು ಒತ್ತಿ ಹೇಳಿದ್ದಾರೆ.

ಕಳೆದ ವರ್ಷ ಮೇ 2010ರಂದು ಗಾಝಾಗೆ ಮಾನವೀಯ ನೆರವನ್ನು ಕೊಂಡೊಯ್ಯುತ್ತಿದ್ದ ಫ್ರೀಡಂ ಫ್ಲೋಟಿಲ್ಲಾದ ಮೇಲೆ ದಾಳಿ ನಡೆಸಿ ಇಸ್ರೇಲ್ ಸೈನಿಕರು ಟರ್ಕಿ ಕಾರ್ಯಕರ್ತರನ್ನು ಹತ್ಯೆಗೈದ ನಂತರ ಟರ್ಕಿ ಮತ್ತು ಇಸ್ರೇಲ್ ನಡುವಿನ ಸಂಬಂಧ ಸಂಪೂರ್ಣ ಹದಗೆಟ್ಟಿದೆ.

ತನ್ನ ನಾಗರಿಕರನ್ನು ಹತ್ಯೆ ಮಾಡಿದ್ದಕ್ಕಾಗಿ ಕ್ಷಮೆಯನ್ನು ಕೇಳಲು ಇಸ್ರೇಲ್ ಪ್ರಧಾನ ಮಂತ್ರಿ ಬೆಂಜಮಿನ್ ನೇತನ್ಯಾಹು ನಿರಾಕರಿಸಿದ ಹಿನ್ನೆಲೆಯಲ್ಲಿ ಟರ್ಕಿ ಇತ್ತೀಚೆಗೆ ಇಸ್ರೇಲ್‌ನೊಂದಿಗಿನ ಸೈನಿಕ ಸಂಬಂಧ ಹಾಗೂ ರಾಯಭಾರಿ ಸಂಬಂಧವನ್ನು ಕಡಿದುಕೊಂಡಿತ್ತು.